# ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
# 22ನೇ ಮಹಾಧಿವೇಶನದ
# ಕರಡು ರಾಜಕೀಯ ನಿರ್ಣಯ

**(ಕೊಲ್ಕತ್ತಾದಲ್ಲಿ ಜನವರಿ 19–21, 2018 ರಂದು ನಡೆದ**
**ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕೃತವಾಗಿದೆ)**

ನಮ್ಮ ಪಕ್ಷದ 21ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಭಾರತದಲ್ಲಿ ಬಲಪಂಥೀಯ ರಾಜಕಾರಣ ಇನ್ನಷ್ಟು ಹೆಚ್ಚಾಗಿ ಕ್ರೋಢೀಕರಣಗೊಂಡಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವು ದೇಶ ಮತ್ತು ನಮ್ಮ ಜನರ ಮೇಲೆ **ನಾಲ್ಕು ಕವಲುಗಳ** ಉಗ್ರವಾದ ದಾಳಿ ನಡೆಸುತ್ತಿದೆ: ನವ ಉದಾರವಾದಿ ಆರ್ಥಿಕ ನೀತಿಗಳನ್ನು ಆಕ್ರಮಣಕಾರಿ ರೀತಿಯಲ್ಲಿ ಜಾರಿಗೊಳಿಸುವ ಮೂಲಕ; ವಿವಿಧ ರೂಪಗಳಲ್ಲಿ ತೀಕ್ಷ್ಣವಾದ ಕೋಮುವಾದಿ ಧ್ರುವೀಕರಣವನ್ನು ಹರಿತಗೊಳಿಸುವ ಮೂಲಕ; ಸಂಸದೀಯ ಪ್ರಜಾಪ್ರಭುತ್ವ ಹಾಗೂ ಸಂಸ್ಥೆಗಳ ಮೇಲೆ ನಿರಂಕುಶ ಅಧಿಕಾರಶಾಹಿ ದಾಳಿಗಳನ್ನು ಹೆಚ್ಚಿಸುವ ಮೂಲಕ; ಮತ್ತು ಭಾರತವನ್ನು ಅಮೆರಿಕಾ ಹಾಗೂ ಸಾಮ್ರಾಜ್ಯವಾದಿಗಳ ಕಿರಿಯ ವ್ಯೂಹಾತ್ಮಕ ಪಾಲುದಾರನ ಪಾತ್ರಕ್ಕೆ ಬಂಧಿಸುವ ಮೂಲಕ. ನಮ್ಮ ದೇಶದ ಮತ್ತು ಜನತೆಯ ಹಿತಾಸಕ್ತಿಗಳನ್ನು ಅಮೆರಿಕಾ ಸಾಮ್ರಾಜ್ಯಶಾಹಿಗೆ ಒಪ್ಪಿಸುವ, ಭಾರತೀಯ ಆಳುವ ವರ್ಗಗಳ ಈ ಶರಣಾಗತಿಯನ್ನು, ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಸಂಭವಿಸುತ್ತಿರುವ ಪ್ರಮುಖ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಂದಾಜಿಸಬೇಕಾಗುತ್ತದೆ. ಏಕೆಂದರೆ ಅವು ಇವತ್ತಿನ ಭಾರತದ ಸನ್ನಿವೇಶದ ಮೇಲೆ ನೇರ ಪ್ರಭಾವ ಬೀರುತ್ತಿವೆ.

## ಅಂತರ್ರಾಷ್ಟ್ರೀಯ ಸನ್ನಿವೇಶ

1.1 21ನೇ ಮಹಾಧಿವೇಶನದ ನಂತರದ ಅಂತರ್ರಾಷ್ಟ್ರೀಯ ಸನ್ನಿವೇಶದ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ:

(i) ಸ್ವಲ್ಪ ಮಟ್ಟಿನ ಜಾಗತಿಕ ಆರ್ಥಿಕ ಚೇತರಿಕೆಯಾಗುತ್ತದೆ ಎಂಬ ಮುನ್ಸೂಚನೆ ಇದ್ದರೂ, 2008 ರ ಹಣಕಾಸು ಮಹಾಕುಸಿತದ ರೂಪದಲ್ಲಿ ಕಾಣಿಸಿಕೊಂಡ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಇನ್ನೂ ಮುಂದುವರಿದಿದೆ.

(ii) ಈ ಬಿಕ್ಕಟ್ಟು ಎಲ್ಲಾ ಬಂಡವಾಳಶಾಹಿ ದೇಶಗಳ ಅಪಾರ ಜನಕೋಟಿಯ ಆರ್ಥಿಕ ಶೋಷಣೆಯನ್ನು ಮತ್ತೂ ತೀವ್ರಗೊಳಿಸುತ್ತಿದೆ ಹಾಗೂ ಅವರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ಮಾಡುತ್ತಿದೆ. ಈ ದಾಳಿಗಳ ವಿರುದ್ಧ ಜಗತ್ತಿನ ಹಲವಾರು ದೇಶಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ಮತ್ತು ಹೋರಾಟಗಳು ಹೆಚ್ಚಾಗುತ್ತಿವೆ.

(iii) ಜಾಗತಿಕ ಬಂಡವಾಳಶಾಹಿಯ ಮುಂದುವರಿಯುತ್ತಿರುವ ಈ ಆರ್ಥಿಕ ಬಿಕ್ಕಟ್ಟು ಜಾಗತಿಕವಾಗಿಯೂ ಮತ್ತು ಪ್ರತಿ ದೇಶದಲ್ಲೂ ಆರ್ಥಿಕ ಅಸಮಾನತೆಗಳನ್ನು ಇನ್ನೂ ಹೆಚ್ಚಿಸುತ್ತಿದೆ.

(iv) ತನ್ನ ಜಾಗತಿಕ ಯಜಮಾನಿಕೆಯನ್ನು ಬಲಪಡಿಸಿಕೊಳ್ಳುವ ಹಾಗೂ ಆ ಆರ್ಥಿಕ ಬಿಕ್ಕಟ್ಟಿನ ನಕಾರಾತ್ಮಕ ಪ್ರಭಾವವನ್ನು ತಡೆಯುವ ಪ್ರಯತ್ನದಲ್ಲಿ, ಅಮೆರಿಕಾ ಸಾಮ್ರಾಜ್ಯಶಾಹಿಯು ಮುಖ್ಯವಾಗಿ ರಾಜಕೀಯ ಮತ್ತು ಮಿಲಿಟರಿ ಮಧ್ಯಪ್ರವೇಶದ ಮೂಲಕ ತನ್ನ ಸರ್ವತೋಮುಖ ಆಕ್ರಮಣಶೀಲತೆಯನ್ನು ಪ್ರದರ್ಶಿಸುತ್ತಿದೆ.

(v) ಲ್ಯಾಟಿನ್(ದಕ್ಷಿಣ) ಅಮೆರಿಕಾದ ಹಲವಾರು ದೇಶಗಳಲ್ಲಿ ಅಮೆರಿಕಾದ ರಾಜಕೀಯ ಮತ್ತು ಮಿಲಿಟರಿ ಹಸ್ತಕ್ಷೇಪಗಳು ಗಂಭೀರ ಮುಖಾಮುಖಿಗೆ ಕಾರಣವಾಗುತ್ತಿವೆ. ಅಮೆರಿಕಾವು ತನ್ನ ಇಡೀ ಶಸ್ತ್ರಾಗಾರವನ್ನು ಆ ಖಂಡದ ಎಡಪಂಥೀಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಮತ್ತು ಆ ಮೂಲಕ ಅಲ್ಲಿಯ ಜನರಲ್ಲಿರುವ ವ್ಯಾಪಕ ಸಾಮ್ರಾಜ್ಯಶಾಹಿ–ವಿರೋಧಿ ಅಲೆಯುಬ್ಬರವನ್ನು ಹಿಮ್ಮೆಟ್ಟಿಸಲು ಬಳಸಿಕೊಳ್ಳುತ್ತಿದೆ.

(vi) ಈ ಅವಧಿಯು ಜಗತ್ತಿನ ಅನೇಕ ದೇಶಗಳಲ್ಲಿ ಮತ್ತಷ್ಟು ಬಲಪಂಥೀಯ ರಾಜಕೀಯ ತಿರುವು ಪಡೆದು ಯೂರೋಪಿನಲ್ಲಿ ಉಗ್ರ ಬಲಪಂಥೀಯ ನವ–ಫ್ಯಾಸಿಸ್ಟ್ ಶಕ್ತಿಗಳು ತಲೆಎತ್ತುವಂತಾಗಿದೆ. ಅಮೆರಿಕಾದ ಆಳುವ ವರ್ಗದ ಅತ್ಯಂತ ಪ್ರತಿಗಾಮಿ ವಿಭಾಗವನ್ನು ಪ್ರತಿನಿಧಿಸಿ ಅಮೆರಿಕಾದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಬಂದಿರುವುದು ಈ ಪ್ರವೃತ್ತಿಯನ್ನು ಇನ್ನಷ್ಟು ಬಲಪಡಿಸಿದೆ.

(vii) ಈ ಅವಧಿಯಲ್ಲಿ, ನಾವು ನಮ್ಮ 21ನೇ ಮಹಾಧಿವೇಶನದಲ್ಲಿ ಗಮನಿಸಿದಂತೆ, ಸಾಮ್ರಾಜ್ಯಶಾಹಿ ಬಣದೊಳಗಿನ ಒಗ್ಗಟ್ಟು ಮತ್ತು ಮೌನಗೊಂಡಿದ್ದ ಸಾಮ್ರಾಜ್ಯಶಾಹಿ ನಡುವಿನ ವೈರುಧ್ಯಗಳು ನವ–ಉದಾರವಾದಿ ಬಿಕ್ಕಟ್ಟು ದೀರ್ಘವಾಗುತ್ತಿರುವ

ಪರಿಣಾಮದಿಂದಾಗಿ, ದನಿ ಪಡೆಯುತ್ತಿದ್ದು ಹೊಸ ತಿಕ್ಕಾಟಗಳು ಮತ್ತು ವೈರುಧ್ಯಗಳು ಸಾಮ್ರಾಜ್ಯವಾದಿ ಶಕ್ತಿಕೇಂದ್ರಗಳ ನಡುವೆ ತಲೆಎತ್ತುತ್ತಿವೆ.

(viii)ಅಂತರ್ರಾಷ್ಟ್ರೀಯ ರಾಜಕೀಯ-ಆರ್ಥಿಕ ವ್ಯವಸ್ಥೆಯಲ್ಲಿ ಬಹುಧ್ರುವೀಯತೆಯನ್ನು ಸ್ಥಾಪಿಸುವ ಯತ್ನಗಳು, ನಮ್ಮಂಥ ದೇಶಗಳು ಅಮೆರಿಕಾ ಪರ ಘೋಷಿತ ನಿಲುವನ್ನು ವ್ಯಕ್ತಪಡಿಸಿರುವುದರಿಂದ, ಹೊಸ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ.

(ix)ಅಮೆರಿಕಾವು ಏಕಪಕ್ಷೀಯವಾಗಿ ಕೆಲವು ಒಪ್ಪಂದಗಳಿಂದ ಹಿಂದೆ ಸರಿದಿರುವುದರಿಂದ ಮತ್ತೆ ಕೆಲವು ಸ್ವತಂತ್ರ ದೇಶಗಳೊಂದಿಗೆ, ಬಹುಪಕ್ಷೀಯ ಒಪ್ಪಂದದ ಬದಲು, ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳುವ ಮೂಲಕ ಪರಿಸರ ಬದಲಾವಣೆ ಮತ್ತು ವಿಶ್ವ ವ್ಯಾಪಾರ ಸಂಘಟನೆಯಂತಹ ಅಂತರ್ರಾಷ್ಟ್ರೀಯ ಒಪ್ಪಂದಗಳ ಭವಿಷ್ಯ ಅನಿಶ್ಚಿತತೆಯ ಹಂತ ತಲುಪಿದೆ.

(x) ನಮ್ಮ ನೆರೆಹೊರೆಯ ಎಲ್ಲಾ ದೇಶಗಳಲ್ಲಿ ಬಹು ಮುಖ್ಯ ಬೆಳವಣಿಗೆಗಳು ಆಗುತ್ತಿದ್ದು ನಮ್ಮ ದೇಶದ ಸ್ಥಿರತೆ ಹಾಗೂ ಒಳ್ಳೆಯ ಅನ್ಯೋನ್ಯ ನೆರೆಹೊರೆ ಸಂಬಂಧಗಳ ಮೇಲೆ ನೇರ ಪರಿಣಾಮ ಬೀರುತ್ತಿವೆ.

(xi)**ಸಮಾಜವಾದಿ ದೇಶಗಳು:** ಈ ಅವಧಿಯಲ್ಲಿ, ಚೀನಾದ ಶಕ್ತಿ ಮತ್ತು ಜಾಗತಿಕ ಪ್ರಭಾವ ಬೆಳೆದಿದೆ. ವಿಯಟ್ನಾಮ್ ಮತ್ತು ಕ್ಯೂಬಾ ಸಮುಚಿತವಾದ ಹಾಗೂ ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ತಮ್ಮ ದೇಶದಲ್ಲಿ ಸಾಧಿಸಿವೆ. ಉತ್ತರ ಕೊರಿಯಾಗೆ ಸಂಬಂಧಪಟ್ಟಂತೆ ಪ್ರಮುಖವಾಗಿ ಅಲ್ಲಿಯ ಅಣ್ವಸ್ತ್ರ ಕಾರ್ಯಕ್ರಮ ಹಾಗೂ ಕ್ಷಿಪಣಿ ನಿಯೋಜನೆಯ ಸುತ್ತ ಎಲ್ಲವೂ ನಿಂತಿದೆ.

(xii)ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವದ ಆಚರಣೆ ಮತ್ತದರ ಜತೆಯಲ್ಲೇ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ವಾರ್ಷಿಕ ಅಂತರ್ರಾಷ್ಟ್ರೀಯ ಸಭೆಗಳು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಸೌಹಾರ್ದತೆಯನ್ನು ಮುಂದುವರಿಸುತ್ತಿವೆ.

**ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು**

1.2 2008ರ ಹಣಕಾಸು ಮಹಾಕುಸಿತದಿಂದ ಉತ್ತೇಜಿತವಾದ (ಪ್ರೊಪೆಲ್ಡ್) ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಬಂಡವಾಳಶಾಹಿ ವ್ಯವಸ್ಥೆಯನ್ನು ಒಂದರ ನಂತರ ಒಂದು ಬಿಕ್ಕಟ್ಟಿಗೆ ಒಡ್ಡುತ್ತಿದೆ. 20ನೇ ಶತಮಾನದ ಕೊನೆಯ ದಶಕದಲ್ಲಿ ಸಾಧಿಸಿದ್ದ ಬೆಳವಣಿಗೆ ದರದ ಮಟ್ಟಕ್ಕೆ ತಲುಪಲೂ ಜಾಗತಿಕ ಬಂಡವಾಳಶಾಹಿಗೆ ಸಾಧ್ಯವಾಗುತ್ತಿಲ್ಲ. ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ಅಡಿಯಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣವು ಬಂಡವಾಳ ಸಂಚಯದ ಪ್ರಕ್ರಿಯೆ ತೀವ್ರಗೊಳಿಸುವುದನ್ನು, 20ನೇ ಮಹಾಧಿವೇಶನದಲ್ಲಿ ನಾವು ಚರ್ಚೆಗೊಳಪಡಿಸಿ ಅಂಗೀಕರಿಸಿದ ಸೈದ್ಧಾಂತಿಕ ನಿರ್ಣಯದಲ್ಲಿ ಹೇಳಲಾದ "ಬಲವಂತದ ವಶಪಡಿಸಿಕೊಳ್ಳುವಿಕೆ ಮೂಲಕ ಸಂಚಯ" ವಿಧಾನದಲ್ಲಿ ತೀವ್ರಗೊಳಿಸುತ್ತಿದೆ. ಈ ಪ್ರಕ್ರಿಯೆಯು ಬಂಡವಾಳಶಾಹಿ ಶೋಷಣೆಯನ್ನು ಮತ್ತಷ್ಟು ಇದರ ಪರಿಣಾಮವಾಗಿ ಹಿಂದೆಂದೂ ಕಂಡು ಕೇಳರಿಯದ ಮಟ್ಟದ ಆರ್ಥಿಕ ಅಸಮಾನತೆಗೆ ಜಾಗತಿಕ ಜನಸಂಖ್ಯೆಯನ್ನು ತಳ್ಳುತ್ತಿದೆ ಮತ್ತು ಅಪಾರ ಜನಕೋಟಿಯ ಕಷ್ಟಕೋಟಲೆಗಳಿಗೆ ಕಾರಣವಾಗುತ್ತಿದೆ. ಇದು ನವ-ಉದಾರಿಕರಣದ್ದೇ ಆದ ಬಿಕ್ಕಟ್ಟನ್ನು ಸೃಷ್ಟಿಸುತ್ತಿದೆ.

1.3 ಜಾಗತಿಕ ಜಿಡಿಪಿ ಬೆಳವಣಿಗೆ ಆಶಾದಾಯಕ ಆಗಿರಲಿದೆಯೆಂದು, ಅಕ್ಟೋಬರ್ 2017ರಲ್ಲಿ ಪ್ರಕಟವಾದ ಐಎಂಎಫ್-ವಿಶ್ವಬ್ಯಾಂಕ್ ಆರ್ಥಿಕ ಕಣ್ನೋಟ ಅಂದಾಜು ಮಾಡಿದೆ. 2016ರಲ್ಲಿ 3.2 % ಇದ್ದ ಜಿಡಿಪಿ ಬೆಳವಣಿಗೆ ದರ 2017 ರಲ್ಲಿ 3.6 % ಆಗಲಿದ್ದು 2018ರಲ್ಲಿ 3.7% ತಲುಪಿ 2020-21ರಲ್ಲಿ 3.8 % ಮುಟ್ಟಲಿದೆ ಎಂದು ಅದು ಅಂದಾಜಿಸಿದೆ. ಇದು ಜಾಗತಿಕ ಹಣಕಾಸು ಮಹಾಕುಸಿತಕ್ಕಿಂತ ಮುಂಚಿನ ದಶಕದ ಸರಾಸರಿ 4% ಬೆಳವಣಿಗೆ ದರಕ್ಕಿಂತ ಕಡಿಮೆಯೇ ಇದೆ. ಆಶಾದಾಯಕ ಕಣ್ನೋಟದ ಚಿತ್ರಣವನ್ನು ನೀಡಿದ್ದಾಗ್ಯೂ, ಐಎಂಎಫ್ ತನ್ನ 2017 ಏಪ್ರಿಲ್ ರ ವರದಿಯಲ್ಲಿದ್ದಂತೆ ಈ ವರದಿಯಲ್ಲೂ "ಮಧ್ಯಮಾವಧಿ ಅಪಾಯಗಳು ಇನ್ನೂ ಕೆಳಮುಖದತ್ತಲೇ ವಾಲಿದೆ" ಎಂಬ ಎಚ್ಚರಿಕೆ ನೀಡಿದೆ.

**ಜಾಗತಿಕ ನಿರುದ್ಯೋಗ**

1.4 **ಜಾಗತಿಕ ನಿರುದ್ಯೋಗ:** ಜಿಡಿಪಿ ಬೆಳವಣಿಗೆ ದರದಲ್ಲಿನ ಸ್ವಲ್ಪ ಮಟ್ಟಿನ ಏರುಗತಿಯು ಸಹಜವಾಗಿಯೇ ಉದ್ಯೋಗ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ನಿರುದ್ಯೋಗದ ದರವು 2010ರ 8.3% ರಿಂದ 2017ರ ಹೊತ್ತಿಗೆ 5.7% ಗೆ ಇಳಿಯುತ್ತದೆ ಎಂದು ಐಎಂಎಫ್ ಅಂದಾಜು ಮಾಡಿತ್ತು. ಆದರೆ, ಈ ನಿರುದ್ಯೋಗ ದರದಲ್ಲಿನ ಇಳಿಕೆಯು ತಾನೇತಾನಾಗಿ ದುಡಿಯುವ ಜನರ ಬದುಕುವ ಸ್ಥಿತಿಯನ್ನು ಉತ್ತಮಪಡಿಸುವುದಿಲ್ಲ. 2016ರಲ್ಲಿನ ಕೂಲಿ ಮತ್ತು ಆದಾಯದ ಸರಾಸರಿ ಬೆಳವಣಿಗೆಯು ಕೇವಲ 1.8% ಇದ್ದದ್ದು 2017 ರಲ್ಲಿ 2.3% ಅಷ್ಟೇ ಹೆಚ್ಚಾಗುವ ಸಾಧ್ಯತೆ ಇದೆ ಎಂಬ ಸಂಗತಿಯಲ್ಲಿ ಈ ಮೇಲಿನ ಅಂಶ ಪ್ರತಿಫಲನಗೊಂಡಿದೆ. ಈ ದರವು 1999-2008ರ ಬಿಕ್ಕಟ್ಟು ಪೂರ್ವ ದಶಕದಲ್ಲಿ ದಾಖಲಾದ ಸರಾಸರಿ 3.4% ಗೆ ಹೋಲಿಸಿದಾಗ ತೀರ ಕಡಿಮೆಯೇ. ಅದರ ಅರ್ಥ, ಈ ಮಂದಗಾಮಿ ಬೆಳವಣಿಗೆಯು ಅಸ್ಥಿರವಾದದ್ದು ಅಥವಾ ಕ್ಷಣಿಕವಾದದ್ದು ಏಕೆಂದರೆ ಈ ಬೆಳವಣಿಗೆಯಿಂದ ಸೃಷ್ಟಿಯಾಗುವ ಉದ್ಯೋಗದ ಪ್ರಮಾಣವು ಸೀಮಿತವಾದದ್ದು ಮಾತ್ರವಲ್ಲ ಗುಣಾತ್ಮಕವಾಗಿ ತೀರ ಕಳಪೆಯದ್ದು. "ಕಟ್ಟುನಿಟ್ಟು ಕೂಲಿ"(ವೇಜ್ ರಿಜಿಡಿಟಿ)ಯ ನಿರಾಕರಣೆಯ ಉದ್ದೇಶದಿಂದ, "ಶ್ರಮಿಕರ ಮಾರುಕಟ್ಟೆಯ ಹೊಂದಿಕೊಳ್ಳುವ ಗುಣ"(ಲೇಬರ್ ಮಾರ್ಕೆಟ್ ಫ್ಲೆಕ್ಸಿಬಿಲಿಟಿ)ದ

ಹೆಸರಿನಲ್ಲಿ ಕಡಿಮೆ ಕೂಲಿ ನೀಡಿಕೆ, ಅರೆಕಾಲಿಕ, ಸಾಂದರ್ಭಿಕ ಅಥವಾ ಸ್ವಯಂ–ಉದ್ಯೋಗ ಮುಂತಾದ ಸಾಧನಗಳನ್ನು ಹೆಚ್ಚೆಚ್ಚು ಆಶ್ರಯಿಸಲಾಗುತ್ತಿದೆ. ಸರಳವಾಗಿ ಹೇಳಬೇಕೆಂದರೆ, ಈ ಮಂದಗಾಮಿ ಬೆಳವಣಿಗೆಯ ಚೇತರಿಕೆ ಆಗುತ್ತಿರುವುದು ಹೆಚ್ಚೆಚ್ಚು ದುಡಿಯುವ ಜನರನ್ನು ಹಿಂಡಿ ಹಿಪ್ಪೆ ಮಾಡುವ ಹಾಗೂ ಆರ್ಥಿಕ ಶೋಷಣೆಯನ್ನು ತೀವ್ರಗೊಳಿಸುವುದರ ಮೂಲಕ ಲಾಭವನ್ನು ಹೆಚ್ಚಿಸಿಕೊಳ್ಳುವುದೇ ಆಗಿದೆ – ಇದೇ ಬಂಡವಾಳಶಾಹಿಯ ಅತ್ಯಂತ ಪ್ರಮುಖ ಗುಣ.

1.5 ಇಂತಹ ಮಂದಗಾಮಿ ಚೇತರಿಕೆಯ ಪರಿಣಾಮದಿಂದಾಗಿ ಜಿಡಿಪಿಯ ಅನುಪಾತದಲ್ಲಿ ನಿಜ ಕೂಲಿಯ ಪಾಲು ಕಡಿಮೆಯಾಗುತ್ತಿದೆ ಅಥವಾ ಸ್ಥಗಿತಗೊಂಡಿದೆ ಎಂದರೆ, ಅದು ಆರ್ಥಿಕತೆಯಲ್ಲಿ ಆಂತರಿಕ ಬೇಡಿಕೆ ಸಾಕಷ್ಟು ಏರಿಕೆಯಾಗದೆ ಸರಕುಗಳ ಉತ್ಪಾದನೆಯಲ್ಲಿ ಹೆಚ್ಚಿನ ಹೂಡಿಕೆಗೆ ನೆರವಾಗುತ್ತಿಲ್ಲ ಎಂಬುದೇ ಆಗಿದೆ.

1.6 ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿನ ನವ ಉದಾರಿಕರಣ ವ್ಯವಸ್ಥೆಯಡಿಯಲ್ಲಿ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಆಂತರಿಕ ಬೇಡಿಕೆಯ ಬೆಳವಣಿಗೆಯಲ್ಲಿನ ಕೊರತೆಯಿಂದಾಗಿ ಹಣಹೂಡಿಕೆಗೆ ಅಡ್ಡಿಯುಂಟಾಗುತ್ತಿರುವುದರಿಂದ ಮಾರುಕಟ್ಟೆಗೆ ಬಿಡುಗಡೆ ಮಾಡಲು ಸಾಧ್ಯವಾಗದ ದೊಡ್ಡ ಪ್ರಮಾಣದ ಹರಿವ ಮೊತ್ತವನ್ನು ಶೇಖರಿಸಿವೆ. ***ಫೈನಾನ್ಶಿಯಲ್ ಟೈಮ್ಸ್*** ಪ್ರಕಾರ, ಜಗತ್ತಿನ ಪ್ರಮುಖ ಕೇಂದ್ರ ಬ್ಯಾಂಕುಗಳು – ಅಮೆರಿಕಾದ ಫೆಡೆರಲ್ ರಿಸರ್ವ್, ಯೂರೋಪಿನ ಸೆಂಟ್ರಲ್ ಬ್ಯಾಂಕ್, ದಿ ಬ್ಯಾಂಕ್ ಆಫ್ ಜಪಾನ್, ದಿ ಬ್ಯಾಂಕ್ ಆಫ್ ಲಂಡನ್, ಮತ್ತು ದಿ ಸ್ವಿಸ್ ಮತ್ತು ಸ್ವೀಡಿಶ್ ಸೆಂಟ್ರಲ್ ಬ್ಯಾಂಕ್ – ಈಗ 15 ಟ್ರಿಲಿಯನ್ ಡಾಲರುಗಳಿಗಿಂತಲೂ ಹೆಚ್ಚು ಆಸ್ತಿಯನ್ನು ಹೊಂದಿವೆ, ಅಂದರೆ 2008ಕ್ಕೂ ಮುಂಚೆ, **ಹಣಕಾಸು ಮಹಾಕುಸಿತದ ಬಿಕ್ಕಟ್ಟಿಗೂ ಮುಂಚೆ ಇದ್ದಿದ್ದಿಕಿಂತಲೂ ನಾಲ್ಕು ಪಟ್ಟು ಹೆಚ್ಚು!** ಇದು ಆಸ್ತಿ–ಬೆಲೆ ಉಬ್ಬರವನ್ನು ಹೆಚ್ಚಿಸಿದೆ, ಆದರೆ ಸಾಮಾನ್ಯ ಹಣದುಬ್ಬರವು ಕೆಳಮಟ್ಟದಲ್ಲೇ ಇದೆ. ಇದು ಮತ್ತೊಮ್ಮೆ 'ಗುಳ್ಳೆ ಒಡೆಯುವ' ಅಥವಾ 'ಸ್ಫೋಟಕ' ಹಂತಕ್ಕೆ ಬಂದು ನಿಂತಿದೆ ಹಾಗೂ ಮತ್ತೊಂದು ಬಿಕ್ಕಟ್ಟಿನ ಸೃಷ್ಟಿಗೆ ಕಾರಣವಾಗುತ್ತಿದೆ. ಒಟ್ಟಾರೆ ಹೇಳಬೇಕೆಂದರೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದಲ್ಲಿನ ಜಾಗತಿಕ ಆರ್ಥಿಕತೆಯು ಅಪಾಯದ ಅಂಚಿಗೆ ತಲುಪಿದ್ದು ಮತ್ತೊಂದು ಸುತ್ತಿನ ಹಣಕಾಸು ಬಿಕ್ಕಟ್ಟಿಗೆ ಕಾರಣವಾಗಲಿದೆ.

**ಹೆಚ್ಚುತ್ತಿರುವ ಅಸಮಾನತೆಗಳು**

1.7 ನಾವು ನಮ್ಮ ಪಕ್ಷದ 21ನೇ ಮಹಾಧಿವೇಶನದಲ್ಲಿ ಗುರುತಿಸಿದಂತೆ, ಈ ಆರ್ಥಿಕ ಬಿಕ್ಕಟ್ಟು, ನವ–ಉದಾರೀಕರಣದಿಂದ ಹುಟ್ಟುಪಡೆದ, ಜಾಗತಿಕವಾಗಿ ಮತ್ತು ಪ್ರತಿ ದೇಶಗಳಲ್ಲಿ ಅಪಾಯಕಾರಿ ಮಟ್ಟದ ಅಸಮಾನತೆಗಳ ಹೆಚ್ಚುವಿಕೆಯನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ. ಶ್ರೀಮಂತರು ಮತ್ತೂ ಶ್ರೀಮಂತರಾಗುವ ಅದೇ ಸಮಯದಲ್ಲಿ ಬಡವರು ಇನ್ನೂ ಹಿಂಡಿ ಹಿಪ್ಪೆಯಾಗಿಸುವ ಪ್ರಕ್ರಿಯೆ ಮತ್ತಷ್ಟು ತೀವ್ರಗೊಳ್ಳುತ್ತಿದೆ. ಕ್ರೆಡಿಟ್ ಸುಯಿಸ್ಸೆ 2017 ರ ಪ್ರಕಾರ, ಜಾಗತಿಕ ಜನಸಂಖ್ಯೆಯ 2.7% ಮಂದಿ ಜಾಗತಿಕ ಆದಾಯದ 70.1 % ತಮ್ಮದಾಗಿಸಿಕೊಂಡಿದ್ದಾರೆ. ಮತ್ತೊಂದೆಡೆ, ವಿಶ್ವ ಜನಸಂಖ್ಯೆಯ 85.6% ರಷ್ಟು ಜನ ಜಗತ್ತಿನ ಒಟ್ಟು ಆದಾಯದ ಕೇವಲ 8.6 % ಪಾಲನ್ನು ಮಾತ್ರ ಹೊಂದಿದ್ದಾರೆ.

1.8 2018 ರ ವಿಶ್ವ ಅಸಮಾನತೆ ವರದಿಯ ಪ್ರಕಾರ, ಜಗತ್ತಿನ ಮೇಲುಸ್ತರದ 1% ಆದಾಯ ಗಳಿಸುವವರು, 1980ರ ನಂತರದ ಜಾಗತಿಕ ಆದಾಯದ ಹೆಚ್ಚಳದಲ್ಲಿ ಕೆಳಸ್ತರದ 50% ಜನರ ಪಾಲಿನ ದುಪ್ಪಟ್ಟು ಆದಾಯವನ್ನು ವಶಮಾಡಿಕೊಂಡಿದ್ದಾರೆ. ಜಾಗತಿಕ ಕೆಳಸ್ತರದ 50% ಜನರು ಮತ್ತು ಮೇಲುಸ್ತರದ 1% ಜನರ ನಡುವಿನ ಆದಾಯದ ಬೆಳವಣಿಗೆಯು ಮಂದಗತಿಯಲ್ಲಿದೆ ಅಥವಾ ಸೊನ್ನೆಯಾಗಿದೆ. ಈ ವರದಿಯು ಅಧ್ಯಯನ ಮಾಡಿದ ಜಗತ್ತಿನ ಹಲವಾರು ದೇಶಗಳಲ್ಲಿ, ಭಾರತದ ಮೇಲುಸ್ತರದ 10% ಆದಾಯದ ಪಾಲಿನ ಮೂಲಕ ಅಳೆಯುವುದಾದರೆ, ನವ–ಉದಾರೀಕರಣ ಸುಧಾರಣೆ ಜಾರಿಯಾದ 1980 ಮತ್ತು 2015ರ ನಡುವಿನ ಅವಧಿಯಲ್ಲಿ ಅಸಮಾನತೆಯ ಏರಿಕೆಯ ದರವು 30% ನಿಂದ 60% ನ ಸಮೀಪಕ್ಕೆ ಬಂದು ತೀವ್ರಗತಿಯಲ್ಲಿ ಏರಿದೆ ಎಂಬುದನ್ನು ಕಾಣಬಹುದಾಗಿದೆ.

**ಹೆಚ್ಚುತ್ತಿರುವ ಜನ ಪ್ರತಿಭಟನೆಗಳು**

1.9 ದುಡಿಯುವ ಜನರು, ಕಾರ್ಮಿಕ ಸಂಘಗಳು, ರೈತರು, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳ ಮೇಲಿನ ದಾಳಿಗಳನ್ನೂ ಒಳಗೊಂಡಂತೆ ಜಗತ್ತಿನ ಅಪಾರ ಜನಸಮುದಾಯದ ಮೇಲೆ ಹೇರಲ್ಪಡುತ್ತಿರುವ ಕಷ್ಟಕೋಟಲೆಗಳ ವಿರುದ್ಧ ಜಗತ್ತಿನಾದ್ಯಂತ ಅಂದರೆ ಮುಂದುವರಿದ ಬಂಡವಾಳಶಾಹಿ ದೇಶಗಳು ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿಯೂ ಕೂಡ ವ್ಯಾಪಕ ಹೋರಾಟಗಳು ಎದ್ದುಬರುತ್ತಿವೆ. ಆದಾಗ್ಯೂ, ನಾವು ನಮ್ಮ ಪಕ್ಷದ 21ನೇ ಮಹಾಧಿವೇಶನದಲ್ಲಿ ಗಮನಿಸಿದಂತೆ, ಈ ಹೋರಾಟಗಳು ಬಹುಪಾಲು ರಕ್ಷಣಾತ್ಮಕ ಸ್ವಭಾವದವಾಗಿದ್ದವು; ರಕ್ಷಣಾತ್ಮಕ ಅಂದರೆ, ಅದಾಗಲೇ ಇದ್ದ ಬದುಕಿನ ಸ್ಥಾನಮಾನಗಳನ್ನು ರಕ್ಷಿಸಿಕೊಳ್ಳುವುದು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಇನ್ನೂ ಹೆಚ್ಚಿನ ದಾಳಿಗಳಾಗಿ ಮೊಟಕಾಗದಂತೆ ತಡೆಯುವುದು ಹೆಚ್ಚು ಪ್ರಮುಖವಾಗಿದ್ದವು, ಅನ್ನುವುದಾಗಿದೆ. **ಹೀಗಿದ್ದಾಗ್ಯೂ ಈ ಬೆಳೆಯುತ್ತಿರುವ ಪ್ರತಿಭಟನೆಗಳನ್ನೇ ಆಧಾರವಾಗಿಟ್ಟುಕೊಂಡು ಬಂಡವಾಳಶಾಹಿ ಆಳ್ವಿಕೆಗೆ ವಿರುದ್ಧದ ಹೋರಾಟಗಳನ್ನಾಗಿ ಮುಂದಿನ ದಿನಗಳಲ್ಲಿ ಕ್ರೋಢೀಕರಿಸಬೇಕಾದ ಅಗತ್ಯವಿದೆ.**

1.10 **ನವ ಉದಾರವಾದದ ಬಿಕ್ಕಟ್ಟು :** ಜಾಗತಿಕ ಹಣಕಾಸು ಮಹಾಕುಸಿತದ ಒಂಭತ್ತು ವರ್ಷಗಳ ನಂತರ, ಈಗ ದೊಡ್ಡ ಸಂಖ್ಯೆಯ ಜನರಿಗೆ, ಅದರಲ್ಲೂ ವಿಶೇಷವಾಗಿ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ, ಒಂದು ವಿಷಯ ಸ್ಪಷ್ಟವಾಗುತ್ತಿದೆ. ಅಮೆರಿಕದ ರೀಗನ್ ಮತ್ತು ಯುಕೆಯ ಥ್ಯಾಚರ್ ಅವರ ಉಚ್ಛ್ರಾಯ ಕಾಲದ ನಂತರ ಬಂದ, ಈ ನವ–ಉದಾರವಾದದ ಉದಯವು, ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯ ಲಾಭವನ್ನು ತೀರ ಅಲ್ಪಸಂಖ್ಯೆಯ ಜನ ಬಾಚಿಕೊಳ್ಳುವ ಮತ್ತು ಅಪಾರ ಜನಸಮುದಾಯ ಕಷ್ಟಕೋಟಲೆಗಳಲ್ಲಿ ನರಳುವ ಸ್ಥಿತಿಯನ್ನು ಸೃಷ್ಟಿ ಮಾಡಿದೆ. ವಿಶ್ವ ಸಮರದ ನಂತರದ ಮೊದಲ ಎರಡೂವರೆ ದಶಕಗಳಲ್ಲಿ, ಜಾಗತಿಕ ಬಂಡವಾಳವಾದ ಔನ್ನತ್ಯವನ್ನು ತಲುಪಿತ್ತು, ಅದನ್ನೇ ಬಂಡವಾಳವಾದದ ಸುವರ್ಣ ಯುಗ ಎಂದು ಕರೆಯಲಾಗುತ್ತಿತ್ತು. ಅಮೆರಿಕದಲ್ಲಿ, 1948 ರಿಂದ 1972 ರವರೆಗೆ, ಅಮೆರಿಕಾದ ಜನಸಂಖ್ಯೆಯ ಪ್ರತಿಯೊಂದು ವಿಭಾಗದವರೂ ಜೀವನ ಮಟ್ಟದಲ್ಲಿ ಏರಿಕೆ ಅನುಭವಿಸಿದರು. ಆದರೆ, 1972 ರಿಂದ 2013 ರ ಅವಧಿಯಲ್ಲಿ ಕೆಳಸ್ತರದ 10% ಜನರು ತಮ್ಮ ಆದಾಯದಲ್ಲಿ ಕುಸಿತವಾಗಿರುವುದನ್ನು ಅನುಭವಿಸಿದರೆ, ಮೇಲುಸ್ತರದ 10% ಜನರು ಭಾರೀ ಏರಿಕೆ ಗಳಿಸಿದರು. ಪೂರ್ಣಕಾಲದ ಪುರುಷ ಕಾರ್ಮಿಕರ ಈಗಿನ ನೈಜ ಆದಾಯವು ನಾಲ್ಕು ದಶಕಗಳ ಹಿಂದೆ ಇದ್ದಿದ್ದಕ್ಕಿಂತ ಕಡಿಮೆ ಇದೆ. ಕೆಳಸ್ತರದ 90% ಜನಸಂಖ್ಯೆಯ ಆದಾಯ ಕಳೆದ 30 ವರ್ಷಗಳಿಗೂ ಹೆಚ್ಚು ಕಾಲ ಸ್ಥಗಿತಗೊಂಡಿದೆ. 2005–2014 ರ ಅವಧಿಯಲ್ಲಿ 25 ಉನ್ನತ ಆದಾಯದ ಆರ್ಥಿಕತೆಯ ದೇಶಗಳಲ್ಲಿ, ಸರಾಸರಿ 65% ರಿಂದ 70% ಕುಟುಂಬಗಳು ತಮ್ಮ ನೈಜ ಆದಾಯದಲ್ಲಿ ಸ್ಥಗಿತತೆ ಅಥವಾ ಕುಸಿತ ಕಂಡಿವೆ. ಗ್ಯಾಲಪ್ ಸಮೀಕ್ಷೆ–2000ರ ಪ್ರಕಾರ ಅಮೆರಿಕದ 33% ಜನ ಮಾತ್ರ ತಮ್ಮನ್ನು ಕಾರ್ಮಿಕ ವರ್ಗ ಎಂದು ಕರೆದುಕೊಳ್ಳುತ್ತಿದ್ದರು. 2015 ರ ಹೊತ್ತಿಗೆ ಆ ಸಂಖ್ಯೆ 48% ಕ್ಕೆ (ಅಂದರೆ ಸರಿ ಸುಮಾರು ಅರ್ಧ ಜನಸಂಖ್ಯೆಗೆ) ಏರಿತ್ತು, ಜಾಗತಿಕವಾಗಿ ಈ ಅಪಾರ ಜನ ವಿಭಾಗದ ದುಃಸ್ಥಿತಿ ಮತ್ತು ಅಸಹ್ಯಕರ ಮಟ್ಟದ ಅಸಮಾನತೆಯು, ಅಗಾಧ ಪ್ರಮಾಣದಲ್ಲಿ ಅತೃಪ್ತಿಯನ್ನು ಸೃಷ್ಟಿಮಾಡಿದೆ. ಅದು ರಾಜಕೀಯ ಅಭಿವ್ಯಕ್ತಿಗಾಗಿ ಹವಣಿಸುತ್ತಿದೆ.

1.11 ನವ ಉದಾರವಾದದ ಈ ಬಿಕ್ಕಟ್ಟು ಹೊಸ ವೈರುಧ್ಯಗಳನ್ನು ಸೃಷ್ಟಿಸಿದೆ, ಮತ್ತದು ಸಾಮ್ರಾಜ್ಯಶಾಹಿ ದೇಶಗಳೊಳಗೇ ಬ್ರೆಕ್ಸಿಟ್‌ನಂತಹ ಒಡಕಿಗೆ, ತಿಕ್ಕಾಟಗಳಿಗೆ ಕಾರಣವಾಗಿದೆ. ಹೊಸ ರಾಜಕೀಯ ಶಕ್ತಿಗಳ ಉದಯ ಮತ್ತು ಉದ್ವಿಗ್ನತೆಯ ಸೃಷ್ಟಿಗಳು ಪ್ರಚಲಿತ ವಿದ್ಯಮಾನಗಳಾಗಿವೆ.

**ರಾಜಕೀಯ ಬಲಪಂಥದತ್ತ ಪಲ್ಲಟ**

1.12 21ನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಜಗತ್ತಿನ ಹಲವಾರು ಕಡೆಗಳಲ್ಲಿ ರಾಜಕೀಯ ಇನ್ನೂ ಬಲಪಂಥದತ್ತ ಪಲ್ಲಟ ಕಂಡಿದೆ. ಈ ಪ್ರಸಕ್ತ ಬಿಕ್ಕಟ್ಟಿನಲ್ಲಿ, ಸಾಮ್ರಾಜ್ಯಶಾಹಿಯು ಆಕ್ರಮಣಕಾರಿ ನವ–ಉದಾರವಾದ ಮತ್ತು ಅದರ ಜತೆಯಲ್ಲೇ ಜಾಗತಿಕವಾಗಿ ಆಂತರಿಕ, ಸ್ಥಳೀಯ ಮತ್ತು ಪ್ರಾದೇಶಿಕ ಪ್ರಕ್ಷುಬ್ಧತೆ ಪೋಷಿಸುವ ವಿಚ್ಛಿದ್ರಕಾರಿ ಕಾರ್ಯಸೂಚಿಯನ್ನು ಅನುಸರಿಸುತ್ತದೆ. ಇದು ಜನಾಂಗವಾದ, ಪರಕೀಯ–ದ್ವೇಷ ಮತ್ತು ತೀವ್ರವಾದಿ ಬಲಪಂಥೀಯ ನವ–ಫ್ಯಾಸಿಸ್ಟ್ ಪ್ರವೃತ್ತಿಗಳ ಹುಟ್ಟಿಗೆ ಕಾರಣವಾಗುತ್ತವೆ. ಅಮೆರಿಕ ಚುನಾವಣೆಗಳಲ್ಲಿ ಡೊನಾಲ್ಡ್ ಟ್ರಂಪಿನ ವಿಜಯ, ಬ್ರಿಟನ್ನಿನ ಬ್ರೆಕ್ಸಿಟ್ ಮತದಾನದಲ್ಲಿ ಬಲಪಂಥೀಯರನ್ನು ಸಜ್ಜುಗೊಳಿಸಿದ್ದು, ಫ್ರಾನ್ಸಿನಲ್ಲಿ ಉಗ್ರ ಬಲಪಂಥೀಯ ನ್ಯಾಷನಲ್ ಫ್ರಂಟ್‌ನ ಮೆರಿನ್ ಲೆ ಪೆನ್ ಚುನಾವಣೆಗಳಲ್ಲಿ ಹೆಚ್ಚಿನ ಮತಗಳಿಕೆ ಪಡೆದಿದ್ದು, ಜರ್ಮನಿಯಲ್ಲಿ ಆಲ್ಟರ್‌ನೇಟಿವ್ ಫಾರ್ ಡಾಯಿಷ್‌ಲ್ಯಾಂಡ್ ಮುನ್ನಡೆ ಸಾಧಿಸಿದ್ದು, ಆಸ್ಟ್ರಿಯಾದಲ್ಲಿ ತೀವ್ರವಾದಿ ಬಲಪಂಥೀಯ ಫ್ರೀಡಂ ಪಾರ್ಟಿಯನ್ನು ಒಳಗೊಂಡಂತೆ ಬಲಪಂಥೀಯ ಸರ್ಕಾರ ರಚನೆಯಾಗಿದ್ದು, ಮತ್ತು ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಮೂರನೇ ಒಂದಕ್ಕೂ ಹೆಚ್ಚು ಉಗ್ರ ಹಾಗೂ ತೀವ್ರ ಬಲಪಂಥೀಯ ಪಕ್ಷಗಳ ಸಂಸದರ ಪ್ರಾತಿನಿಧ್ಯ, ಇವೆಲ್ಲವೂ ಬಲಪಂಥೀಯ ಪಲ್ಲಟದ ಪ್ರತಿಫಲನಗಳು. ಈ ಪ್ರವೃತ್ತಿಯು ಭಾರತದ ರಾಜಕೀಯದಲ್ಲೂ ಪ್ರತಿಫಲನಗೊಂಡಿದೆ.

1.13 ತೀವ್ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ, ಎದ್ದುಬರುತ್ತಿರುವ ಜನರ ಅತೃಪ್ತಿಯನ್ನು ಯಾರು ಮುಂದೆ ಕೊಂಡೊಯ್ಯುತ್ತಾರೆ ಎಂಬುದರ ಬಗ್ಗೆ ಒಂದು ರಾಜಕೀಯ ಸಮರವೇ ಎದುರಾಗುತ್ತದೆ. ಬಲಪಂಥೀಯ ರಾಜಕೀಯವು ಜನಸಮುದಾಯದ ಅತೃಪ್ತಿಯನ್ನು ಬಳಸಿ ಮುನ್ನಡೆಯುತ್ತದೆ ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ದೊಡ್ಡ ರಾಜಕೀಯ ಶಕ್ತಿಯಾಗಿ ಹೊರಹೊಮ್ಮದಂತೆ ನೋಡಿಕೊಳ್ಳುತ್ತದೆ. ಜನಸಮುದಾಯದ ಅತೃಪ್ತಿಯನ್ನೇ ಬಂಡವಾಳ ಮಾಡಿಕೊಂಡ ಈ ಬಲಪಂಥೀಯ ಶಕ್ತಿಗಳು ಆ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾದ ಅದೇ ಆರ್ಥಿಕ ನೀತಿಗಳನ್ನು ಅನುಸರಿಸುತ್ತವೆ, ಜನರ ಮೇಲೆ ಹಿಂದೆಂದೂ ಕಾಣದಂಥಾ ಹೊರೆಯನ್ನು ಹೊರಿಸುತ್ತವೆ ಮತ್ತು ಅದು ಇನ್ನೂ ಹೆಚ್ಚಿನ ಅತೃಪ್ತಿಗೆ ಕಾರಣವಾಗುತ್ತದೆ. ಮುಂದಿನ ದಿನಗಳಲ್ಲಿ, ಎಡಪಂಥೀಯ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಬಲಪಂಥೀಯ ಶಕ್ತಿಗಳು ಇವರಲ್ಲಿ ಯಾರು ಈ ಜನರ ಅತೃಪ್ತಿಯನ್ನು ಯಶಸ್ವಿಯಾಗಿ ಕೊಂಡೊಯ್ಯುತ್ತಾರೋ ಅವರು ಜಗತ್ತಿನ ಇಂತಹ ಅನೇಕ ದೇಶಗಳ ರಾಜಕೀಯ ದಿಕ್ಸೂಚಿಯನ್ನು ನಿರ್ಧರಿಸುತ್ತಾರೆ ಎಂಬುದು ಸ್ಪಷ್ಟ. 1929–30ರ ಮಹಾ ಕುಸಿತದ ಸಂದರ್ಭದಲ್ಲಿ ಜಗತ್ತಿನ ಏಕಸ್ವಾಮ್ಯ ಬಂಡವಳಿಗರ ಬೆಂಬಲ ಪಡೆದು ಫ್ಯಾಸಿಸಂ ಎದ್ದುಬಂತು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಉಂಟಾದ ಜನ ಅತೃಪ್ತಿಯನ್ನು ಯಶಸ್ವಿಯಾಗಿ ಬಳಸಿಕೊಳ್ಳುವಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಸಮರ್ಥರಾದವು. ಪ್ರಸಕ್ತ ಸಂದರ್ಭದಲ್ಲಿ, ದೀರ್ಘಕಾಲದ ಆರ್ಥಿಕ

ಬಿಕ್ಕಟ್ಟಿನಿಂದಾಗಿ ಎದ್ದುಬರುತ್ತಿರುವ ಜನ ಅತೃಪ್ತಿಯು ಉಗ್ರ ಬಲಪಂಥೀಯ ಮತ್ತು ನವ–ಫ್ಯಾಸಿಸ್ಟ್ ಶಕ್ತಿಗಳ ಉದಯಕ್ಕೆ ಇಂಬುಕೊಡುತ್ತಿದೆ.

1.14 **ಸರಿಗಟ್ಟುವ ಪ್ರವೃತ್ತಿಗಳು:** ಆದಾಗ್ಯೂ, ಹಲವಾರು ದೇಶಗಳಲ್ಲಿ ಎಡ ಪಂಥೀಯ ವೇದಿಕೆಗಳ ಹುಟ್ಟುವಿಕೆಯ ಮೂಲಕ ಈ ಬೆಳವಣಿಗೆಯನ್ನು ಸರಿಗಟ್ಟುವ ರಾಜಕೀಯ ಹೋರಾಟಗಳು ಎದ್ದುಬಂದು ಅವುಗಳ ಓಟವನ್ನು ತಡೆಗಟ್ಟಲು ಸಾಧ್ಯವಾಗಿದೆ.

1.15 ಈ ಅವಧಿಯಲ್ಲಿ, ಯೂರೋಪಿನ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷಗಳು ಮೂಲೆಗುಂಪಾಗಿ ಉಗ್ರ ಬಲಪಂಥೀಯರು ಹುಟ್ಟಿಕೊಂಡಿರುವುದನ್ನು ನೋಡಬಹುದು. ಗ್ರೀಸ್ ದೇಶದ ಪೆಸೋಕ್, ಫ್ರಾನ್ಸಿನ ಸೋಶಿಯಲಿಸ್ಟ್ ಪಕ್ಷ, ಇಟಾಲಿಯನ್ ಸೋಶಿಯಲಿಸ್ಟ್ ಪಕ್ಷ ಮತ್ತು ಜರ್ಮನಿಯ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷ ಇಂತಹ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷಗಳು, ಚುನಾವಣೆಗಳಲ್ಲಿ ದಯನೀಯ ಸೋಲು ಕಂಡಿವೆ ಮತ್ತು ಅವು ಅವಸಾನ ಸ್ಥಿತಿಯಲ್ಲಿವೆ. ದುಡಿಯುವ ಜನರ ಹಿತಾಸಕ್ತಿಯನ್ನು ಕಡೆಗಣಿಸಿ ನವ–ಉದಾರವಾದವನ್ನು ಈ ಪಕ್ಷಗಳು ಅಪ್ಪಿಕೊಂಡಿರುವುದು ಅದಕ್ಕೆ ಮುಖ್ಯ ಕಾರಣ. ವಿರೋಧ ಪಕ್ಷವಾಗಿರುವಾಗ ದುಡಿಯುವ ಜನರ ಪರ ವಹಿಸುವ ಮತ್ತು ಸರ್ಕಾರದಲ್ಲಿರುವಾಗ ಬಂಡವಾಳಿಗರ ಪರ ವಹಿಸುವ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷಗಳ ಈ ಸಾಂಪ್ರದಾಯಿಕ ಗುಣವನ್ನು ಜನ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಿದ್ದಾರೆ.

1.16 ಫ್ರಾನ್ಸಿನಲ್ಲಿ, ಅಂತಿಮ ಹಂತದ ಚುನಾವಣೆಯಲ್ಲಿ, ಉಗ್ರ ಬಲಪಂಥೀಯರು ಸೋತುಹೋದರು. ಆದರೆ, ಮೂರನೇ ಒಂದು ಭಾಗದ ಮತದಾರರು ಮತದಾನದಿಂದ ದೂರ ಉಳಿದರು ಅಥವಾ ವಿರುದ್ಧ ಮತದಾನ(ನೋಟಾ) ಮಾಡಿದರು. ನವ–ಉದಾರವಾದಿ ಬ್ಯಾಂಕರ್ ಮತ್ತು ಒಬ್ಬ ಫ್ಯಾಸಿಸ್ಟ್‌ನನ್ನು ಆರಿಸಲು ನಿರಾಕರಿಸಿದರು. ಇನ್ನಿತರ ದೇಶಗಳಲ್ಲಿ ಕೂಡ ಉಗ್ರ ಬಲಪಂಥೀಯರಿಗೆ ಪ್ರತಿರೋಧವಿದೆ.

1.17 ಪೋರ್ಚುಗಲ್(***ಪಿಸಿಪಿ***) ಮತ್ತು ಗ್ರೀಸ್(***ಕೆಕೆಯಿ***) ಗಳಂತಹ ದೇಶಗಳಲ್ಲಿ, ಕಮ್ಯುನಿಸ್ಟ್ ಪಕ್ಷಗಳು ಪ್ರಬಲ ಶಕ್ತಿಯಾಗಿ ಉಳಿದುಕೊಂಡಿವೆ ಮತ್ತು ಚುನಾವಣಾ ಗೆಲುವು ಸಾಧಿಸಿವೆ. ಸೈಪ್ರಸ್‌ನಲ್ಲಿ ***ಎಕೆಇಎಲ್*** ಕಮ್ಯುನಿಸ್ಟ್ ಪಕ್ಷವು ಇತ್ತೀಚಿನ ಸ್ಥಳೀಯ ಮುನಿಸಿಪಲ್ ಚುನಾವಣೆಗಳಲ್ಲಿ ತಮ್ಮ ಸ್ಥಾನವನ್ನು ಉತ್ತಮಪಡಿಸಿಕೊಂಡಿವೆ.

1.18 ಮತ್ತೊಂದೆಡೆ ಯೂರೋಪಿನಲ್ಲಿ ನವ–ಎಡ ಗುಂಪುಗಳು ಜನ್ಮತಾಳಿವೆ. ಗ್ರೀಸ್‌ನಲ್ಲಿ ***ಸಿರಿಜಾ*** ನವ–ಉದಾರವಾದಿ ಸುಧಾರಣೆಗಳನ್ನು ವಿರೋಧಿಸುವುದಾಗಿ, ದುಡಿಯುವ ಜನರ ಮೇಲಿನ ದಾಳಿಯನ್ನು ಹಿಂತೆಗೆದುಕೊಳ್ಳುವುದಾಗಿ ಮತ್ತು ದುಡಿಯುವ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಪುನಸ್ಥಾಪಿಸುವುದಾಗಿ ಆಶ್ವಾಸನೆ ನೀಡಿ ಚುನಾವಣೆ ಗೆದ್ದಿದೆ. ಆದರೆ ಅಂತಿಮವಾಗಿ, ಯೂರೋಪಿನ ಹಣಕಾಸು ಬಂಡವಾಳದ ಒತ್ತಡಕ್ಕೆ ಮಣಿದು ಶರಣಾಗುವುದರ ಮೂಲಕ ತೀವ್ರ ಬಲಪಂಥೀಯರಿಗೆ ಇನ್ನಷ್ಟು ಜಾಗ ಮಾಡಿಕೊಡುವಂತಾಯಿತು. ಇವೆಲ್ಲವುದರ ಪರಿಣಾಮವಾಗಿ ಗ್ರೀಸ್ ಜನರಲ್ಲಿ ಮೂಡಿದ ಅತೃಪ್ತಿಯೇ ಬಲಪಂಥೀಯರ ವಿರುದ್ಧದ ರಾಜಕೀಯ ಸಮರಕ್ಕೆ ಉತ್ತಮ ಕ್ಷೇತ್ರವಾಗಿಯೂ ಪರಿಣಮಿಸಿದೆ. ಸ್ಪೈನಿನಲ್ಲಿ, ರಚಿತವಾದ ಪ್ರಗತಿಪರ ಪಕ್ಷ, ***ಪೊಡೆಮೊಸ್*** ಎಡ ಪಕ್ಷಗಳ ಮೈತ್ರಿಯೊಂದಿಗೆ ಚುನಾವಣೆಯಲ್ಲಿ ಗಣನೀಯ ಬೆಂಬಲ ಗಳಿಸಿದೆ.

1.19 ಬ್ರಿಟನಿನಲ್ಲಿ ಜೆರೆಮಿ ಕಾರ್ಬೈನ್ ಅವರ ನೇತೃತ್ವದಲ್ಲಿ ಪುನರ್ಜನ್ಮ ಪಡೆದ ಲೇಬರ್ ಪಕ್ಷವು ಚುನಾವಣಾ ಪ್ರಚಾರಗಳಲ್ಲಿ ಜನರ ಸಮಸ್ಯೆಗಳನ್ನೇ ಪ್ರಮುಖ ಕೇಂದ್ರವಾಗಿಸಿ ಮಾತನಾಡುವುದರ ಮೂಲಕ ಬ್ರಿಟನಿನಲ್ಲಿ ಎಡಪಂಥೀಯ ಕಾರ್ಯಸೂಚಿಯನ್ನು ಮತ್ತೆ ಮುನ್ನೆಲೆಗೆ ತರುವಂತಾಗಿದೆ. ಅಮೆರಿಕದಲ್ಲಿ, ದುಡಿಯುವ ಜನರ ನಡುವೆ ತನ್ನ ಪ್ರಚಾರವನ್ನು ನಡೆಸುವುದರ ಮೂಲಕ ಬರ್ನಿ ಸ್ಯಾಂಡರ್ಸ್ ಜನಬೆಂಬಲ ಗಳಿಸುತ್ತಿದ್ದಾರೆ.

1.20 ಎಲ್ಲೆಲ್ಲಿ ಎಡ ಮತ್ತು ಎಡಪಂಥೀಯ ಶಕ್ತಿಗಳು ನವ–ಉದಾರವಾದ ಮತ್ತು ಸಾಮ್ರಾಜ್ಯವಾದಿ ಆಕ್ರಮಣದ ವಿರುದ್ಧ ಶಕ್ತಿಯುತವಾದ ಪ್ರತಿರೋಧವನ್ನು ಒಡ್ಡಿ ಜನರನ್ನು ಅಣಿನೆರೆಸಿ ಹೋರಾಟಗಳನ್ನು ಮಾಡಲು ಸಾಧ್ಯವಾಗಿದೆಯೋ, ಅಲ್ಲೆಲ್ಲಾ ಸೋಶಿಯಲ್ ಡೆಮಾಕ್ರಸಿಯನ್ನು ಮೂಲೆಗುಂಪು ಮಾಡಿವೆ, ಜನಬೆಂಬಲ ಗಳಿಸಿವೆ ಮತ್ತು ಮುನ್ನಡೆಯನ್ನು ಸಾಧಿಸಲು ಆಗಿದೆ ಎನ್ನುವುದನ್ನು ಈ ಮೇಲಿನ ಬೆಳವಣಿಗೆಗಳು ಸ್ಪಷ್ಟವಾಗಿ ತೋರುತ್ತಿವೆ. ಭವಿಷ್ಯದಲ್ಲಿ ಇದು ರಾಜಕೀಯ ಸಮರದ ಕ್ಷೇತ್ರವಾಗಲಿದೆ. ನವ–ಉದಾರವಾದಕ್ಕೆ ಪರಿಣಾಮಕಾರಿ ಎಡಪಂಥೀಯ ಪ್ರತಿರೋಧವಿಲ್ಲದಿದ್ದರೆ, ಎದ್ದುಬರುತ್ತಿರುವ ಜನರ ಅತೃಪ್ತಿಯನ್ನು ಬಲಪಂಥೀಯರು ಬಂಡವಾಳ ಮಾಡಿಕೊಳ್ಳುತ್ತಾರೆ.

**ಸಾಮ್ರಾಜ್ಯಶಾಹಿ ಆಕ್ರಮಣಶೀಲತೆ**

1.21 ಜಾಗತಿಕ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಆಕ್ರಮಣ ಹೆಚ್ಚಾಗಿದೆ. ಅಮೆರಿಕದ ಮಿಲಿಟರಿ ಹಸ್ತಕ್ಷೇಪ ಅಥವಾ ಅಮೆರಿಕ ನೇತೃತ್ವದ, ನ್ಯಾಟೋ ನಾಯಕತ್ವದ ಮಿಲಿಟರಿ ಹಸ್ತಕ್ಷೇಪ ಜಗತ್ತಿನ ಹಲವಾರು ಕಡೆಗಳಲ್ಲಿ, ಬಹಳ ಮುಖ್ಯವಾಗಿ ಮಧ್ಯ ಏಶಿಯಾ, ಉತ್ತರ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ ಪ್ರದೇಶಗಳಲ್ಲಿ, ಮುಂದುವರಿಯುತ್ತಿದೆ. ಮಧ್ಯ–ಪೂರ್ವದ ಬೆಳವಣಿಗೆಗಳಲ್ಲಿ ಅಮೆರಿಕ–ಇಸ್ರೇಲ್ ಕೂಟದ ಹಸ್ತಕ್ಷೇಪ ಮುಂದುವರಿದಿದೆ. ಹೆಚ್ಚು ಮಿಲಿಟರಿ ತುಕಡಿಗಳನ್ನು ಒದಗಿಸುವ ಮೂಲಕ ನ್ಯಾಟೋವನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡಿ ಬಾಲ್ಟಿಕ್ ದೇಶಗಳಲ್ಲಿ ಮತ್ತು ಪೋಲೆಂಡ್ ದೇಶದಲ್ಲಿ ಮೊದಲ ಬಾರಿಗೆ ನಿಯೋಜಿಸಲಾಗಿದೆ. ಬಾಲ್ಟಿಕ್ ದೇಶಗಳಲ್ಲಿ ಯುದ್ಧ

ಸನ್ನದ್ಧ ಸೈನ್ಯವನ್ನು ನಿಯೋಜಿಸಲಾಗಿದೆ ಮತ್ತು ಯುಕ್ರೇನಿನಲ್ಲಿ ಸಕ್ರಿಯವಾಗಿ ಹಸ್ತಕ್ಷೇಪ ಮಾಡಲಾಗುತ್ತಿದೆ. ಈ ಬೆಳವಣಿಗೆಗಳನ್ನು ರಶಿಯಾವು ತನ್ನನ್ನು ಗುರಿಯಾಗಿಸಿ ಮಾಡಲಾಗುತ್ತಿದೆ ಎಂದು ಸರಿಯಾಗಿಯೇ ಭಾವಿಸಿದೆ. ಅಮೆರಿಕ ಸಾಮ್ರಾಜ್ಯಶಾಹಿಯು "ಚೀನಾವನ್ನು ಹದ್ದುಬಸ್ತಿನಲ್ಲಿಡಲು" ತನ್ನ ಕುಟಿಲ ಯುದ್ಧೋಪಾಯದ ಗುರಿಯನ್ನು ಆಕ್ರಮಣಕಾರಿಯಾಗಿಯೇ ಮುಂದುವರಿಸಿದೆ. ಸಮಾಜವಾದಿ ದೇಶಗಳ ವಿರುದ್ಧದ ಅಮೆರಿಕಾ ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ಕಾರ್ಯಾಚರಣೆಗಳು ಪ್ರಸಕ್ತ ಯುಗದ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವಿನ ಕೇಂದ್ರೀಯ ವೈರುಧ್ಯವನ್ನು ತೀವ್ರಗೊಳಿಸಿದೆ.

1.22 **ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ :** ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಡೊನಾಲ್ಡ್ ಟ್ರಂಪ್ ಆಯ್ಕೆಯಾಗಿರುವುದು ಅಮೆರಿಕದ ಆಳುವ ವರ್ಗದ ಅತ್ಯಂತ ಪ್ರತಿಗಾಮಿ ವಿಭಾಗದ ವಿಜಯವನ್ನು ಪ್ರತಿನಿಧಿಸುತ್ತದೆ. ಅಮೆರಿಕದ ಕಾರ್ಮಿಕ ವರ್ಗದಲ್ಲಿದ್ದ ವ್ಯಾಪಕ ಅತೃಪ್ತಿಯನ್ನು ಚುನಾವಣಾ ಗೆಲುವು ಸಾಧಿಸಲು ಬಲಪಂಥೀಯ ರಾಜಕೀಯ ಹೇಗೆ ಬಳಸಿಕೊಳ್ಳುತ್ತದೆ ಎನ್ನುವುದಕ್ಕೆ ಇದೊಂದು ಅತ್ಯುತ್ತಮ ಉದಾಹರಣೆ. ಆದಾಗ್ಯೂ, ಅಧ್ಯಕ್ಷರಾದ ನಂತರ ಟ್ರಂಪ್ ಅವರು ನವ–ಉದಾರವಾದಿ ನೀತಿಯನ್ನು ಕಠೋರವಾಗಿಯೇ ಪಾಲಿಸುತ್ತಿದ್ದಾರೆ. ಹಿಂದಿನ ಅಮೆರಿಕ ಆಡಳಿತವು ಇರಾನ್, ಪ್ಯಾಲೆಸ್ತೈನ್, ಕ್ಯೂಬಾ ಬಗ್ಗೆ ಅನುಸರಿಸುತ್ತಿದ್ದ ನಿಲುವನ್ನು ಕೂಡ ಟ್ರಂಪ್ ಪೂರ್ತಿ ಬದಲಾಯಿಸಿದ್ದಾರೆ. ವೆನೆಜುವೆಲಾ ಮತ್ತು ಉತ್ತರ ಕೊರಿಯಾದ ವಿರುದ್ಧ ಕಠೋರ ನಿಲುವನ್ನು ಅನುಸರಿಸುವ ಮೂಲಕ ಹೊಸ ತಿಕ್ಕಾಟಗಳಿಗೆ ಮತ್ತು ಉದ್ವಿಗ್ನತೆಗೆ ಕಾರಣವಾಗಿದೆ. ಇಸ್ರೇಲ್ ಮತ್ತು ಸೌದಿ ಅರೇಬಿಯಾ ದೇಶಗಳಿಗೆ ಅವರ ಪೂರ್ಣ ಪ್ರಮಾಣದ ಬೆಂಬಲವು ಅರಬ್ ಜಗತ್ತಿನಲ್ಲಿ ತಿಕ್ಕಾಟ ಮತ್ತು ಉದ್ವಿಗ್ನತೆಯನ್ನು ಉಲ್ಬಣಗೊಳಿಸಿದೆ.

1.23 **ಹೆಚ್ಚುತ್ತಿರುವ ಮಿಲಿಟರಿ ವೆಚ್ಚಗಳು :** ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಕಡಿಮೆಯಾಗಿದ್ದ ಮಿಲಿಟರಿ ವೆಚ್ಚಗಳು ಮತ್ತೆ ಮೇಲೇರಲು ಆರಂಭಿಸಿವೆ. ಜಾಗತಿಕ ಮಿಲಿಟರಿ ವೆಚ್ಚವು ಜಾಗತಿಕ ಜಿಡಿಪಿಯ ಜಾಗತಿಕ ಸರಾಸರಿ 2.3% ರಷ್ಟು ಇರುವಾಗ ಅಮೆರಿಕವು ತನ್ನ ಜಿಡಿಪಿಯ 3.58% ನ್ನು ಈಗ ವೆಚ್ಚ ಮಾಡುತ್ತಿದೆ. 2018ರ ಅಮೆರಿಕ ಬಜೆಟ್ಟಿನಲ್ಲಿ ಹಿಂದೆಂದೂ ಕಾಣದಂಥಾ 700 ಶತಕೋಟಿ ಡಾಲರುಗಳನ್ನು ರಕ್ಷಣಾ ವೆಚ್ಚಕ್ಕೆ ತೆಗೆದಿರಿಸಲಾಗಿದೆ. ನ್ಯಾಟೋದ ಒಟ್ಟಾರೆ ವೆಚ್ಚವು, ಅದರಲ್ಲಿ 70% ಅಮೆರಿಕ ಒಂದೇ ತನ್ನ ಖಾತೆಯಿಂದ ನೀಡುತ್ತಿದ್ದು, 2014 ರಲ್ಲಿ –1.4% ಇದ್ದರೆ, 2015 ರಲ್ಲಿ 1.8% ಗೆ ಏರಿಕೆಯಾಗಿ, 2017ರಲ್ಲಿ ಮತ್ತಷ್ಟು ಏರಿಕೆಯಾಗಿ 4.3% ತಲುಪಿದೆ.

1.24 ತನ್ನ ಜಾಗತಿಕ ಯಜಮಾನಿಕೆಯನ್ನು ಮತ್ತಷ್ಟು ಗಟ್ಟಿಮಾಡಿಕೊಳ್ಳುವ ಅಮೆರಿಕಾ ಸಾಮ್ರಾಜ್ಯಶಾಹಿಯ ಮುಖ್ಯ ಗುರಿಯೇ ಸಾಮ್ರಾಜ್ಯಶಾಹಿ ಮಿಲಿಟರಿ ವೆಚ್ಚದಲ್ಲಿ ಇಷ್ಟು ಹೆಚ್ಚಾಗಲು ಕಾರಣ. ನಾವು ನಮ್ಮ ಹಿಂದಿನ ಮಹಾಧಿವೇಶನಗಳಲ್ಲಿ ಗುರುತಿಸಿದಂತೆ ಲ್ಯಾಟಿನ್ ಅಮೆರಿಕಾ, ಮಧ್ಯ ಪೂರ್ವ ಮತ್ತು ಆಫ್ರಿಕಾದ ಭಾಗಗಳಲ್ಲಿ ಮಿಲಿಟರಿ ಹಸ್ತಕ್ಷೇಪವನ್ನು ಮುಂದುವರಿಸುತ್ತಲೇ, ಅಮೆರಿಕಾದ ಜಾಗತಿಕ ಮಿಲಿಟರಿ ಯುದ್ಧ ವ್ಯೂಹಾತ್ಮಕ ಕೇಂದ್ರಬಿಂದು ಪೆಸಿಫಿಕ್ ಸಾಗರ ಪ್ರದೇಶಕ್ಕೆ ಪಲ್ಲಟಗೊಂಡಿದೆ. ತನ್ನ ಜಾಗತಿಕ ಯಜಮಾನಿಕೆಗೆ ಸಡ್ಡು ಹೊಡೆಯುವ ಶಕ್ತಿ ಹೊಂದಿರುವ ಚೀನಾಕ್ಕೆ ತಡೆಯೊಡ್ಡಲು ಪೆಸಿಫಿಕ್‌ನಲ್ಲಿ ತನ್ನ ಮೂರನೇ ಎರಡು ಭಾಗದ ನೌಕಾ ಸೇನೆಯನ್ನು ನಿಯೋಜಿಸಿರುವ ಅಮೆರಿಕಾವು ನಿರ್ದಿಷ್ಟವಾಗಿ ದಕ್ಷಿಣ ಚೀನಾ ಸಮುದ್ರದಲ್ಲಿನ ವಿವಾದಗಳತ್ತ ತನ್ನ ಗಮನ ಕೇಂದ್ರೀಕರಿಸಿದೆ.

### ಲ್ಯಾಟಿನ್ ಅಮೆರಿಕಾ

1.25 ಲ್ಯಾಟಿನ್ ಅಮೆರಿಕಾದಲ್ಲಿ, ಅಲ್ಲಿಯ ಜನರು ಮತ್ತು ಅಮೆರಿಕಾದ ರಾಜಕೀಯ ಹಾಗೂ ಮಿಲಿಟರಿ ಹಸ್ತಕ್ಷೇಪಗಳ ನಡುವೆ ಗಂಭೀರ ಮುಖಾಮುಖಿ ತೀಕ್ಷ್ಣವಾಗುತ್ತಿದೆ. ವೆನೆಜುವೆಲಾವನ್ನು ಗುರಿಯಾಗಿಟ್ಟು ಅಮೆರಿಕಾವು ಅಲ್ಲಿ ಬಲವಂತವಾಗಿ ಆಹಾರ ಕೊರತೆ ಉಂಟಾಗುವಂತೆ ನೋಡಿಕೊಳ್ಳುತ್ತಿದೆ. ಅದೇ ರೀತಿಯಲ್ಲಿ, ಬ್ರೆಜಿಲ್, ಬೊಲಿವಿಯಾ ಮತ್ತಿತರ ದೇಶಗಳಲ್ಲಿ ಲ್ಯಾಟಿನ್ ಅಮೆರಿಕನ್ ಎಡ ಶಕ್ತಿಗಳು ಬೆಳೆಯುವುದನ್ನು ತಡೆದು ಅಲ್ಲಿಯ ಆರ್ಥಿಕತೆ ಹಾಗೂ ರಾಜಕೀಯದ ಮೇಲೆ ಈ ಮುಂಚೆ ಇದ್ದ ತನ್ನ ನಿಯಂತ್ರಣವನ್ನು ಮರುಸ್ಥಾಪಿಸಲು ಅಮೆರಿಕಾವು ತನ್ನ ಹಸ್ತಕ್ಷೇಪವನ್ನು ತೀವ್ರಗೊಳಿಸುತ್ತಿದೆ. ಸಮಾಜವಾದಿ ಕ್ಯೂಬಾವು ಅದರ ಮತ್ತೊಂದು ದಾಳಿಯ ಗುರಿಯಾಗಿ ಮುಂದುವರಿದಿದೆ. ಈ ಹಿಂದೆ ಒಬಾಮಾ ಆಡಳಿತ ಕೈಗೊಂಡಿದ್ದ ಅಲ್ಪಸ್ವಲ್ಪ ಮಂದಗಾಮಿ ಯತ್ನಗಳನ್ನೂ ಡೊನಾಲ್ಡ್ ಟ್ರಂಪ್ ಹಿಂತೆಗೆದುಕೊಳ್ಳಲು ಮುಂದಾಗಿದ್ದಾರೆ.

1.26 ಅಕ್ಟೋಬರ್ 15, 2017ರಂದು, ವೆನೆಜುವೆಲಾ ತಮ್ಮ ಪ್ರಾಂತೀಯ ಗವರ್ನರುಗಳನ್ನು ಚುನಾಯಿಸಲು ಚುನಾವಣೆ ನಡೆಸಿತು., ಈ ಚುನಾವಣೆಗಳಲ್ಲಿ ನಿಕೊಲಸ್ ಮಡುರೊ ಸರ್ಕಾರ ತೀವ್ರ ಹಿನ್ನಡೆಯನ್ನು ಎದುರಿಸಲಿದೆ ಎಂದು ಬೊಲಿವೇರಿಯನ್ ವಿರೋಧಿ ಪ್ರತಿಗಾಮಿ ಶಕ್ತಿಗಳಿಗೆ ಹಣ ಪೂರೈಕೆ ಮಾಡಿದ್ದ ಅಮೆರಿಕಾ ನಿರೀಕ್ಷಿಸಿತ್ತು. ಇದು ಅಕ್ಟೋಬರ್ 2018ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಹ್ಯೂಗೋ ಚಾವೆಜ್ ಅವರ ಪಕ್ಷ, ಯುನೈಟೆಡ್ ಸೋಶಿಯಲ್ ಪಾರ್ಟಿ ಆಫ್ ವೆನೆಜುವೆಲಾ (ಪಿ.ಎಸ್.ಯು.ವಿ)ದ ಸೋಲಿಗೆ ನಾಂದಿ ಹಾಡಲಿದೆ ಎಂದು ಅಮೆರಿಕಾ ಬಯಸಿತ್ತು. ಆದರೆ ಅಂತಿಮವಾಗಿ ಪಿ.ಎಸ್.ಯು.ವಿ 23 ರಲ್ಲಿ 18 ಗವರ್ನರ್ ಹುದ್ದೆಗಳನ್ನು ಗೆದ್ದುಕೊಂಡಿತು. ವೆನೆಜುವೆಲಾ ಜನರ ಬೆಂಬಲ ಬೊಲಿವೇರಿಯನ್ ಪರ್ಯಾಯಕ್ಕೆ ಇನ್ನೂ ಗಟ್ಟಿಯಾಗಿಯೇ ಇದೆ ಎಂಬುದು ಸ್ಪಷ್ಟವಾಯಿತು.

1.27 ಅಂತರಾಷ್ಟ್ರೀಯ ಚುನಾವಣಾ ವೀಕ್ಷಕರು ತದ್ವಿರುದ್ಧ ವರದಿ ನೀಡಿದ್ದಾಗಲೂ ವೆನೆಜುವೆಲಾದಲ್ಲಿ ಚುನಾವಣೆಗಳು ಮುಕ್ತ ಹಾಗೂ ನ್ಯಾಯಯುತವಾಗಿರಲಿಲ್ಲ ಎಂದು ಅಮೆರಿಕನ್ ಸಾಮ್ರಾಜ್ಯಶಾಹಿ ಸಾಧಿಸುತ್ತಿದ್ದರೆ, ಅತ್ತ ಹೊಂಡುರಾಸ್‌ನಲ್ಲಿ ನವಂಬರ್ 26, 2017ರ ಅಧ್ಯಕ್ಷೀಯ ಚುನಾವಣೆಗಳಲ್ಲಿ ಅಧ್ಯಕ್ಷ ಹೆರ್ನಾಂಡಿಸ್‌ನ ಮೇಲೆ ವ್ಯಾಪಕ ಭ್ರಷ್ಟಾಚಾರದ ಆರೋಪಗಳಿದ್ದಾಗ್ಯೂ ಅಮೆರಿಕಾ ಸಾಮ್ರಾಜ್ಯವಾದವು ಬಹಿರಂಗವಾಗಿ ಅವರ ಪುನರಾಯ್ಕೆಯನ್ನು ಬೆಂಬಲಿಸಿತು. ಆರ್ಗನೈಷನ್ಸ್ ಆಫ್ ಅಮರಿಕಾ ಮತ್ತು ಯೂರೋಪಿಯನ್ ಯೂನಿಯನ್ ಚುನಾವಣಾ ವೀಕ್ಷಕ ಸಮಿತಿಯು ಆ ಚುನಾವಣೆಗಳಲ್ಲಿನ ಭಾರಿ ಪ್ರಮಾಣದ ಅಕ್ರಮಗಳನ್ನು ಗುರುತಿಸಿತು. ವಿರೋಧಿ ಅಭ್ಯರ್ಥಿ ಹಾಲಿ ಅಧ್ಯಕ್ಷನಿಗಿಂತ 5 ಅಂಶಗಳಷ್ಟು ಮುಂದಿದ್ದರು. 60% ಮತಗಳ ಎಣಿಕೆಯ ನಂತರ ಚುನಾವಣೆಯ ರಾತ್ರಿ ಎಣಿಕೆಯನ್ನು ನಿಲ್ಲಿಸಲಾಯಿತು ಮತ್ತು 36 ಗಂಟೆಗಳ ನಂತರ ಎಣಿಕೆ ಪ್ರಾರಂಭವಾದಾಗ ಮುನ್ನಡೆ ಮಾಯವಾಗಿ ಅಲ್ಪ ಅಂತರದಲ್ಲಿ ಹೆರ್ನಾಂಡಿಸ್‌ಗೆ ಗೆಲುವು ದಕ್ಕಿತ್ತು. ಹೊಂಡೂರಾಸ್ ಮತ್ತು ಇತರ ಮಧ್ಯ ಅಮೆರಿಕಾದ ದೇಶಗಳಲ್ಲಿ ಅಮೆರಿಕಾ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪದ ದೀರ್ಘ ಇತಿಹಾಸವೇ ಇದೆ. ಅದು 2009ರಲ್ಲಿ ಹೊಂಡೂರಾಸ್‌ನ ಕ್ಷಿಪ್ರ ಕ್ರಾಂತಿಗೆ ಸ್ಪೂರ್ತಿ ನೀಡಿತ್ತು. ಹೊಂಡೂರಾಸಿನಲ್ಲಿದ್ದ ಬಹುರಾಷ್ಟ್ರೀಯ ಕಂಪನಿಗಳ ಗಣಿಗಳ ಮತ್ತು 'ಜೀತದುಡಿತದ ಕೇಂದ್ರ'ಗಳ ಹಿತಾಸಕ್ತಿಗಳನ್ನು ಕಾಪಾಡುವುದು ಅದರ ಉದ್ದೇಶವಾಗಿತ್ತು. ಈ ಚುನಾವಣಾ ವಂಚನೆಯ ವಿರುದ್ಧ ವ್ಯಾಪಕ ಸಾರ್ವಜನಿಕ ಪ್ರತಿಭಟನೆಗಳು ಮೇಲೆದ್ದವು, ಅಪಾರ ಸಾವು ನೋವು ಉಂಟಾಯಿತು, ಅನೇಕರಿಗೆ ಗಾಯಗಳಾದವು, ಸಾವಿರಾರು ಜನರನ್ನು ಬಂಧಿಸಲಾಯಿತು. ಅಮೆರಿಕನ್ ಸಾಮ್ರಾಜ್ಯಶಾಹಿ ದಮನಕಾರಿ ಕೈಗೊಂಬೆ ಸರ್ಕಾರ ಸ್ಥಾಪಿಸಲಾಯಿತು.

1.28 ಮಧ್ಯ ಅಮೆರಿಕಾದಲ್ಲಿ, ಡೇನಿಯಲ್ ಅರ್ಟೆಗಾ ಜನಪ್ರಿಯ ಯೋಜನೆಗಳನ್ನು ಜಾರಿ ಮಾಡಿ ನಿಕಾರಗುವಾದ ಬಡತನವನ್ನು 13% ಅಂಶಗಳು ಇಳಿಸಿದ ಹಿನ್ನೆಲೆಯಲ್ಲಿ ಪುನರಾಯ್ಕೆಯಾದರು. ಲ್ಯಾಟಿನ್ ಅಮೆರಿಕಾದ ಇತರೆಡೆಗಳಲ್ಲಿ, ವೆನೆಜುವೇಲಾದ ಹೊರತಾಗಿ, ಅಮೆರಿಕನ್ ಸಾಮ್ರಾಜ್ಯಶಾಹಿಯು ಬೊಲಿವಿಯಾ, ಇಕ್ವೆಡಾರ್, ಹೊಂಡುರಾಸ್ ಮತ್ತು ನಿಕರಾಗುವಾದಲ್ಲಿ ಸಕ್ರಿಯವಾಗಿದ್ದು, ಅಲ್ಲಿನ ಎಡ ಪ್ರಗತಿಪರ ಸರ್ಕಾರಗಳನ್ನು ಉರುಳಿಸಲು ಪ್ರಯತ್ನ ಮಾಡುತ್ತಿದೆ.

**ಪಶ್ಚಿಮ ಏಶಿಯಾ**

1.29 ಮಧ್ಯ ಪೂರ್ವದಲ್ಲಿ, ಅಮೆರಿಕನ್ ಸಾಮ್ರಾಜ್ಯಶಾಹಿಯ ಆರ್ಥಿಕ ಹಾಗೂ ರಾಜಕೀಯ ನಿಯಂತ್ರಣಕ್ಕಾಗಿ ಇರಾನನ್ನು ದುರ್ಬಲಗೊಳಿಸಿ ಒಂಟಿಯಾಗಿಸಲು ಹಾಗೂ ಇಸ್ರೇಲನ್ನು ಬಲಪಡಿಸಲು ಅಮೆರಿಕ–ಇಸ್ರೇಲ್ ಕೂಟವು ಪ್ರಮುಖ ಪಾತ್ರ ವಹಿಸುವುದು ಮುಂದುವರಿದಿದೆ.

1.30 ಮೊಟ್ಟ ಮೊದಲ ಬಾರಿಗೆ 2016 ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಪೂರ್ವ ಜೆರೂಸಲೆಮ್ಮಿನಲ್ಲಿ ಮತ್ತು ಪ್ಯಾಲೆಸ್ತೈನಿನ ಪಶ್ಚಿಮ ತೀರ ಪ್ರದೇಶಗಳಲ್ಲಿ ಇಸ್ರೇಲ್ ಅಕ್ರಮ ವಸಾಹತುಗಳನ್ನು ಮುಂದುವರಿಸುವುದನ್ನು ಖಂಡಿಸಿ ನಿರ್ಣಯ ಅಂಗೀಕರಿಸಿದೆ. ಆದಾಗ್ಯೂ, ಪೂರ್ವ ಜೆರೂಸಲೆಮ್ಮಿನಲ್ಲಿ, ಅದು ಪ್ಯಾಲೆಸ್ತೈನಿನ ರಾಜಧಾನಿಯೆಂದು ಗೊತ್ತುಪಡಿಸಿದ್ದಾಗ್ಯೂ, ಅಕ್ರಮ ವಸಾಹತುಗಳನ್ನು ಸೃಷ್ಟಿಸಿ ವಿಸ್ತರಿಸಲು ಮತ್ತು ಸಾವಿರಾರು ಜ್ಯೂಗಳಿಗೆ ಹೊಸಮನೆಗಳನ್ನು ಕಟ್ಟಲು ಇಸ್ರೇಲ್ ಭಂಡತನದಿಂದ ಯೋಜನೆಗಳನ್ನು ಸಿದ್ದಪಡಿಸಿದೆ.

1.31 ಈ ಹಿನ್ನೆಲೆಯಲ್ಲಿ, ಜೆರೂಸಲೆಮ್ಮನ್ನು ಇಸ್ರೇಲಿನ ರಾಜಧಾನಿಯನ್ನಾಗಿ ಮಾನ್ಯಮಾಡಿ ಅಲ್ಲಿಗೆ ಅಮೆರಿಕದ ದೂತಾವಾಸವನ್ನು ಟೆಲ್ ಅವಿವ್‌ನಿಂದ ಬದಲಾಯಿಸಲು ಡೊನಾಲ್ಡ್ ಟ್ರಂಪ್ ಮಾಡಿರುವ ತೀರ್ಮಾನವು ಪ್ಯಾಲೆಸ್ತೈನಿನ ಭೂಮಿಯಲ್ಲಿ ಇಸ್ರೇಲಿನ ಅಕ್ರಮ ವಸಾಹತನ್ನು ಸಮರ್ಥಿಸಲು ಬಹಿರಂಗ ಪ್ರಚೋದನೆ ನೀಡಿದಂತೆಯೇ ಸರಿ. ಅದು ಇಲ್ಲಿಯವರೆಗಿನ ವಿಶ್ವಸಂಸ್ಥೆಯ ಎಲ್ಲಾ ನಿರ್ಣಯಗಳಿಗೂ ಮತ್ತು 1967ರಿಂದಲೂ ಜೆರೂಸಲೆಮ್ ಇಸ್ರೇಲ್ ಆಕ್ರಮಿತ ದೇಶ ಎಂಬ ಅಂತರಾಷ್ಟ್ರೀಯ ಸಮುದಾಯದ ನಿಲುವಿಗೂ ತದ್ವಿರುದ್ಧ ಕೂಡ. ಪೂರ್ವ ಜೆರೂಸಲೆಮ್ ಸ್ವತಂತ್ರ ಪ್ಯಾಲೆಸ್ತೈನಿನ ರಾಜಧಾನಿ ಎನ್ನುವುದು ಅಂತರಾಷ್ಟ್ರೀಯವಾಗಿ ಒಪ್ಪಿತವಾದ ನಿಲುವು. ಇಸ್ರೇಲ್ ಮತ್ತು ಪ್ಯಾಲೆಸ್ತೈನಿನ ನಡುವೆ ಸಾಧ್ಯವಾಗಬಹುದಾದ ಶಾಂತಿ ಸಂಧಾನವೇನಾದರೂ ಮುರಿದುಬಿದ್ದರೆ ಅದಕ್ಕೆ ಅಮೆರಿಕಾದ ಸರ್ಕಾರವೇ ಕಾರಣ. ಡೊನಾಲ್ಡ್ ಟ್ರಂಪಿನ ಈ ತೀರ್ಮಾನವು ಈ ಪ್ರದೇಶದಲ್ಲಿ ಮತ್ತಷ್ಟು ತಿಕ್ಕಾಟ ಹಾಗೂ ಘರ್ಷಣೆಗಳಿಗೆ ಕಾರಣವಾಗುವುದಲ್ಲದೆ ಜಾಗತಿಕ ದುಷ್ಪರಿಣಾಮಗಳಿಗೆ ಎಡೆಮಾಡಿಕೊಡಲಿದೆ.

1.32 ಮಧ್ಯ ಪೂರ್ವದ ಇತರ ಪ್ರದೇಶಗಳಲ್ಲಿ ಅಮೆರಿಕಾದ ಹಸ್ತಕ್ಷೇಪ ಮುಂದುವರಿದಿದೆ. ಹೀಗಿದ್ದಾಗ್ಯೂ, ಸಿರಿಯಾದಲ್ಲಿನ ಆಡಳಿತವನ್ನು ಬದಲಿಸಬೇಕೆಂಬ ಅಮೆರಿಕದ ಪ್ರಯತ್ನಗಳು ವಿಫಲವಾಗಿವೆ. ಆರು ವರ್ಷಗಳ ಸುದೀರ್ಘ ಅಂತರ್ಯುದ್ಧದಲ್ಲಿ ಸಿರಿಯನ್ ಸೇನೆಗೆ ಸಿಕ್ಕ ವಿಜಯ ಒಂದು ಪ್ರಮುಖ ಸಾಧನೆಯೇ ಸರಿ. ಇದರಿಂದ ಸಿರಿಯಾದಲ್ಲಿ ಆಡಳಿತ ಬದಲಿಸಬೇಕೆಂಬ ಅಮೆರಿಕನ್ ಸಾಮ್ರಾಜ್ಯಶಾಹಿಯ ಯತ್ನಗಳಿಗೆ ಹಿನ್ನಡೆಯಾಗಿದೆ. ಅಮೆರಿಕ ಮತ್ತು ಅದರ ಅರಬ್ ಮಿತ್ರಕೂಟದ ಕುಮ್ಮಕ್ಕು ಪಡೆದ ಇಸ್ಲಾಮಿಕ್ ಶಕ್ತಿಗಳಿಗಾದ ಸೋಲು, ಪಶ್ಚಿಮ ಏಶಿಯಾದ ರಾಜಕೀಯದ ಮೇಲೆ ಅಗಾಧ ಪರಿಣಾಮ ಬೀರಲಿದೆ. ಸಿರಿಯಾದಲ್ಲಿ ರಷ್ಯಾದ ಯಶಸ್ವಿ ಹಸ್ತಕ್ಷೇಪವು ಆ ಪ್ರದೇಶದಲ್ಲಿ ಅದರ ಪ್ರಭಾವವನ್ನು ಕ್ರೋಢೀಕರಿಸಿದೆ. ರಷ್ಯಾ–ಟರ್ಕಿ–ಇರಾನ್ ಜಂಟೀ

ಮುತುವರ್ಜಿಯು ಆ ಪ್ರದೇಶದಲ್ಲಿನ ಅಮೆರಿಕದ ಸಂಚನ್ನು ಹಿಮ್ಮೆಟ್ಟಿಸಿದೆ. ಸಿರಿಯಾದ ಅಸ್ಸಾದ್ ಆಡಳಿತವನ್ನು ಕಿತ್ತೊಗೆಯಬೇಕೆಂಬ ಉದ್ದೇಶ ಸಾಧನೆ ಕಷ್ಟ ಎಂಬುದನ್ನು ಈಗ ಅರಿತ ಅಮೆರಿಕ ಇರಾನಿನತ್ತ ತನ್ನ ಗಮನ ಬದಲಾಯಿಸಿದೆ. ಈ ಪ್ರದೇಶದಲ್ಲಿ ಅಮೆರಿಕದ ವ್ಯೂಹದ ಪ್ರಮುಖ ಗುರಿ ಇರಾನ್ ಎಂಬುದು ಈಗಲೂ ಮುಂದುವರಿದಿದೆ. ಇರಾನಿನ ಅಣು ಒಪ್ಪಂದವನ್ನು ದೃಢೀಕರಿಸಲು ಡೊನಾಲ್ಡ್ ಟ್ರಂಪ್ ನಿರಾಕರಿಸುವ ಮೂಲಕ ಇರಾನ್ ಮತ್ತು ಆ ಪ್ರದೇಶಗಳ ಮೇಲೆ ಹೊಸ ಒತ್ತಡಗಳನ್ನು ಹಾಕಲಾಗುವುದು ಎಂಬ ಸೂಚನೆ ನೀಡಿದೆ.

1.33 ಸೌದಿ ಅರೇಬಿಯಾವನ್ನು ತನ್ನ ಮಿತ್ರನನ್ನಾಗಿ ಹೊಂದಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯು ಇರಾನನ್ನು ದುರ್ಬಲಗೊಳಿಸಲು ಯೆಮೆನ್‌ನಲ್ಲಿ ತನ್ನ ಮಿಲಿಟರಿ ಹಸ್ತಕ್ಷೇಪ ಮುಂದುವರಿಸಲು ಸೌದಿಗೆ ಉತ್ತೇಜನ ನೀಡುತ್ತಿದೆ. ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ 2017ರ ಡಿಸೆಂಬರ್ ಕೊನೆಯ ಹೊತ್ತಿಗೆ ಕೊನೇಪಕ್ಷ 50 ಸಾವಿರ ಮಕ್ಕಳು ಯೆಮೆನ್‌ನಲ್ಲಿ ಹಸಿವು ಮತ್ತು ಆಹಾರವಿಲ್ಲದೆ ಸಾವನ್ನಪ್ಪಿದ್ದಾರೆ.

1.34 ಈ ಮಧ್ಯೆ, ಸೌದಿ ಅರೇಬಿಯಾದಲ್ಲೇ ಆಂತರಿಕ ರಾಜಕೀಯ ಬೆಳವಣಿಗೆಗಳು ತೆರೆದುಕೊಳ್ಳುತ್ತಿವೆ. ಮೊಹಮದ್ ಬಿನ್ ಸಲ್ಮಾನ್ ಸೌದಿಯ ರಾಜಕುಮಾರನಾಗಿ ಗದ್ದುಗೆ ಏರುವ ಮೂಲಕ ಕತಾರ್, ಸಿರಿಯಾ ಮತ್ತು ಯೆಮೆನ್‌ನಲ್ಲಿ ಸೌದಿ ಅರೇಬಿಯಾದ ಹಸ್ತಕ್ಷೇಪಗಳು ಮುಂದುವರಿಯುತ್ತಿದೆ. ಈಗ ಅದು ಲೆಬನಾನಿನ ಮೇಲೆ ಗುರಿ ಇಟ್ಟಿದೆ. ಪ್ರಧಾನ ಮಂತ್ರಿ ಹರಿರಿಯವರ ಇತ್ತೀಚಿನ ರಾಜೀನಾಮೆಯನ್ನು ರಿಯಾಧ್‌ನಲ್ಲಿ ಪ್ರಕಟಿಸಲಾಗಿದೆ. ಆ ಪ್ರದೇಶದಲ್ಲಿ ಅಭದ್ರತೆ ಉಂಟುಮಾಡಲು ಸೌದಿ ಅರೇಬಿಯಾವು ಈ ತಂತ್ರ ರೂಪಿಸಿದೆ ಎಂದು ವ್ಯಾಪಕವಾಗಿ ನಂಬಲಾಗಿದೆ. ಪ್ರಧಾನಿ ಹರಿರಿ ತದನಂತರ ತಮ್ಮ ರಾಜೀನಾಮೆ ಹಿಂಪಡೆದಿದ್ದಾರೆ. ಒಟ್ಟಾರೆ ಅಭಿಪ್ರಾಯದಲ್ಲಿ ಈ ಬೆಳವಣಿಗೆಗಳು ಲೆಬನಾನಿನಲ್ಲಿ ಹೆಜಬೊಲ್ಲಾನನ್ನು ದುರ್ಬಲಗೊಳಿಸಲಾರದು.

1.35 **ಕತಾರ್:** ಸೌದಿ ಅರೇಬಿಯಾ ಮತ್ತದರ ಮಿತ್ರದೇಶಗಳು ಕತಾರ್ ನ ಎಮಿರೇಟರನ್ನು ಏಕಾಂಗಿಯಾಗಿಸಿ ಶಿಥಿಲಗೊಳಿಸಲು ಮಾಡಿದ ಪ್ರಯತ್ನಗಳಿಗೆ ಆರಂಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೆಂಬಲ ಸಿಕ್ಕಿತ್ತು. ಆದರೆ, ಅದೇ ಸಮಯದಲ್ಲಿ, ಅಮೆರಿಕಾವು ಕತಾರ್‌ನೊಂದಿಗೆ 12 ಶತಕೋಟಿ ಡಾಲರುಗಳ ವಿಮಾನ ಮಾರಾಟ ಒಪ್ಪಂದಕ್ಕೆ ಸಹಿಹಾಕಿದೆ. ಆ ಪ್ರದೇಶದಲ್ಲಿ ಅಮೆರಿಕದ 10 ಸಾವಿರಕ್ಕೂ ಹೆಚ್ಚಿನ ಅಮೆರಿಕನ್ ಸೈನಿಕರನ್ನು ಹೊಂದಿರುವ ಅತಿ ದೊಡ್ಡ ಮಿಲಿಟರಿ ನೆಲೆಗೆ ಕತಾರ್ ಆತಿಥ್ಯ ಒದಗಿಸಿದೆ. ಸಿರಿಯಾ ಮತ್ತು ಇರಾಕಿನ ಮೇಲಿನ ಮಿಲಿಟರಿ ಕಾರ್ಯಾಚರಣೆಗೆ ಬಹು ಮುಖ್ಯವಾದ ಮುಂಚೂಣಿ ಸೇನಾ ಕೇಂದ್ರ ಕಾರ್ಯಾಲಯ ***ಯುಎಸ್ ಸೆಂಟ್‌ಕಾಮ್***ಗೆ ಕೂಡ ಆತಿಥ್ಯ ನೀಡುತ್ತಿದೆ.

1.36 ಕತಾರ್ ಈ ಕೂಡಲೆ ಇರಾನ್ ಜತೆಗಿನ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳಬೇಕು, ***ಅಲ್ ಜಜೀರಾ*** ವಿದ್ಯುನ್ಮಾನ ಮಾಧ್ಯಮ ಜಾಲವನ್ನು ಸ್ಥಗಿತಗೊಳಿಸಬೇಕು ಮತ್ತು ಹಮಾಸ್ ಮತ್ತು ಮುಸ್ಲಿಮ್ ಬ್ರದರ್ ಹುಡ್ ಜತೆ ಸೇರಿಕೊಂಡಿರುವವರನ್ನು ಉಚ್ಚಾಟಿಸಬೇಕೆಂದು ಸೌದಿ ಅರೇಬಿಯಾ ಒತ್ತಾಯಿಸಿದೆ. ಕತಾರ್ ಮತ್ತು ಇರಾನ್ ಜಗತ್ತಿನ ಅತ್ಯಂತ ದೊಡ್ಡ ***ಸೌತ್ ಪರ್ಸ್*** ಅನಿಲ ಪ್ರದೇಶವನ್ನು ಜಂಟಿಯಾಗಿ ಹಂಚಿಕೊಂಡಿದೆ. ಇದರ ಪರಿಣಾಮವಾಗಿ ಎರಡೂ ದೇಶಗಳು ಪರಸ್ಪರ ಸಹಕರಿಸುವ ಅಗತ್ಯವಿದೆ. ಕತಾರಿನಲ್ಲಿ ಆಡಳಿತ ಬದಲಾಗಬೇಕೆಂದು ಸೌದಿ ಅರೇಬಿಯ ಮತ್ತು ಯುಎಇ ಕೇಳುತ್ತಿರುವಾಗಲೇ, ಕತಾರ್ ಕೂಡ ಆ ಪ್ರದೇಶದಲ್ಲಿ ತನ್ನ ಮಿತ್ರದೇಶಗಳನ್ನು ಹೊಂದಿದೆ.

1.37 ಅಮೆರಿಕದ ದೃಷ್ಟಿ ಈಗ ಇರಾನಿನ ಮೇಲೆ ಬಿದ್ದಿರುವುದರಿಂದ, ಈ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಹೇಗೆ ತೆರೆದುಕೊಳ್ಳುತ್ತದೆ ಎನ್ನುವುದನ್ನು ಈ ಬಹು ಮುಖ್ಯ ಅಂಶ ನಿರ್ಧರಿಸುತ್ತದೆ. ಮಧ್ಯ ಪೂರ್ವದಲ್ಲಿ ಅಮೆರಿಕದ ಮಿಲಿಟರಿ ಹಸ್ತಕ್ಷೇಪಗಳಿಗೆ ಇಸ್ರೇಲ್ ಜೀವಾಳವಾಗಿ ಉಳಿದುಕೊಂಡಿದೆ.

1.38 ಈ ಎಲ್ಲಾ ಹಸ್ತಕ್ಷೇಪಗಳ ಹೊರತಾಗಿಯೂ, ಸದ್ಯದಲ್ಲಿ ಈ ಪ್ರದೇಶದಲ್ಲಿ ಇರಾನಿನ ಸ್ಥಾನ ಹೆಚ್ಚು ಬಲಗೊಂಡಂತೆ ಕಾಣುತ್ತಿರುವುದು ಸ್ಪಷ್ಟವಾಗಿದೆ. ಡಿಸೆಂಬರ್ 2017 ರ ಕೊನೆಯ ವಾರದ ಅವಧಿಯಲ್ಲಿ, ಇರಾನಿನಾದ್ಯಂತ ದೊಡ್ಡ ಮಟ್ಟದ ಪ್ರತಿಭಟನೆಗಳು ಎದ್ದುಬಂದಿವೆ. ಅಹಮದಿನೆಜಾದ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದರ ವಿರುದ್ಧ 2009ರ ಮತಪ್ರದರ್ಶನಗಳಿಗಿಂತಲೂ ಅತಿ ದೊಡ್ಡ ಪ್ರತಿಭಟನೆಗಳು ಅವು. ಈ ಪ್ರತಿಭಟನೆಗಳು ಆರ್ಥಿಕತೆಯ ದುಃಸ್ಥಿತಿ, ಭ್ರಷ್ಟಾಚಾರ ಮತ್ತು ಪಾರದರ್ಶಕತೆಯ ಕೊರತೆಯ ಬಗ್ಗೆ ಜನರಲ್ಲಿ ಮಡುಗಟ್ಟಿರುವ ದುಃಖ ಮತ್ತು ಕೋಪವನ್ನು ಪ್ರತಿಫಲಿಸುತ್ತವೆ ಎಂದು ಇರಾನಿನ ಮುಖಂಡರು ಒಪ್ಪಿಕೊಳ್ಳುತ್ತಾರೆ. ಹೊರಗಡೆಯವರ, ಮುಖ್ಯವಾಗಿ ಅಮೆರಿಕ ಸಾಮ್ರಾಜ್ಯಶಾಹಿ ಬೆಂಬಲ ಪಡೆದ ಸೌದಿ ಅರೇಬಿಯಾದ ಕುಮ್ಮಕ್ಕಿನಿಂದ ನಡೆದಿದೆ ಎಂಬ ಆರೋಪಗಳೂ ಇವೆ. ಶಾಂತಿ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಉತ್ಪಾದಕರ ಹಕ್ಕೊತ್ತಾಯಗಳನ್ನು ಈಡೇರಿಸುವ ಮೂಲಕ ಮಾತ್ರವೇ ಇರಾನಿನ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯನ್ನು ಖಾಯಂಗೊಳಿಸಬಹುದು ಹಾಗೂ ವಿದೇಶಿ ಹಸ್ತಕ್ಷೇಪಗಳ ವಿರುದ್ಧ ನಿಸ್ಸಂಶಯವಾಗಿಯೂ ರಕ್ಷಣೆ ನೀಡಬಹುದು ಎಂದು ಆ ಪ್ರದೇಶದ ಪ್ರಗತಿಪರ ಶಕ್ತಿಗಳು ಹೇಳುತ್ತವೆ.

**ಆಫ್ರಿಕಾ**

1.39 ಉತ್ತರ ಆಫ್ರಿಕಾದ ಪ್ರದೇಶದಲ್ಲಿ ಧಾಮಿಕ ಉಗ್ರಗಾಮಿ ಪಡೆಗಳ ಪ್ರಾಬಲ್ಯ ಮುಂದುವರೆದಿದೆ. ಲಿಬಿಯಾ ಮೇಲಿನ ಸಾಮ್ರಾಜ್ಯಶಾಹಿಯ ದಾಳಿಯು ಆ ದೇಶವನ್ನು ಅಸ್ಥಿರಗೊಳಿಸಿರುವುದು ಮಾತ್ರವಲ್ಲದೆ ಇಡೀ ಪ್ರದೇಶದ ಮೇಲೆ ಗಂಭೀರ ಪರಿಣಾಮ ಬೀರಿದೆ. ಧಾರ್ಮಿಕ ತೀವ್ರವಾದಿ ಮತ್ತು ಭಯೋತ್ಪಾದಕ ಶಕ್ತಿಗಳ ಉಪಸ್ಥಿತಿಯು ಹೆಚ್ಚಾಗಿದೆ. ಭಯೋತ್ಪಾದನೆ ಮಟ್ಟ ಹಾಕುವ ಹೆಸರಿನಲ್ಲಿ ಯು.ಎಸ್. ಆಫ್ರಿಕಾಮ್ (AFRICOM) ಮೂಲಕ ತನ್ನ ಮಿಲಿಟರಿ ನೆಲೆಗಳನ್ನು ಬಲಪಡಿಸಿಕೊಳ್ಳುತ್ತಿದೆ. ನೈಜೀರಿಯಾ, ಮಾಲಿ, ಸಾಹೆಲ್ ಮುಂತಾದ ಹಲವು ದೇಶಗಳಲ್ಲಿ ಭಯೋತ್ಪಾದಕ ವಿರೋಧಿ ಕಾರ್ಯಾಚರಣೆ ಎಂದು ಕರೆದುಕೊಳ್ಳುವ, ಯು.ಎಸ್.ನ ಸೈನಿಕರು ಹಲವರನ್ನು ಕೊಂದಿರುವುದು ವರದಿಯಾಗಿದೆ. ಈ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಯು.ಎಸ್. ಮಧ್ಯಸ್ಥಿಕೆ ವಹಿಸುವ ಮೂಲಕ, ನೈಸರ್ಗಿಕ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವ ಹಾಗೂ ವ್ಯಾಪಾರ ಮಾರ್ಗಗಳನ್ನು ಮತ್ತು ಮಾರುಕಟ್ಟೆಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳುವ ಉದ್ದೇಶ ಹೊಂದಿದೆ. ಹಾಗೆಯೇ ಆಫ್ರಿಕಾ ಖಂಡದಲಲ್ಲಿ ಬೆಳೆಯುತ್ತಿರುವ ಚೀನಾದ ಪ್ರಭಾವವನ್ನು ತಡೆಗಟ್ಟುವ ಉದ್ದೇಶ ಸಹ ಅದು ಹೊಂದಿದೆ.

**ಜಿಂಬಾಬ್ವೆ**

1.40 ಜಿಂಬಾಬ್ವಿಯಲ್ಲಿ ಸ್ವತಂತ್ರ ಜಿಂಬಾಬ್ವೆಯ ನಾಯಕನಾಗಿದ್ದ ಅಧ್ಯಕ್ಷ ರಾಬರ್ಟ್ ಮುಗಾಬೆಯವರು 37 ವರ್ಷಗಳ ನಂತರ, ಬಲವಂತದಿಂದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಬೇಕಾಯಿತು. ಇಲ್ಲಿ ಹದಗೆಟ್ಟ ಆರ್ಥಿಕ ಪರಿಸ್ಥಿತಿಯು ವ್ಯಾಪಕ ಅಸಮಾಧಾನ ಸೃಷ್ಟಿಸಿತ್ತು. ಬೆಳೆಯುತ್ತಿದ್ದ ಈ ಅಸಮಾಧಾನವನ್ನು ಬಳಸಿಕೊಂಡು, ತನ್ನ ಹಸ್ತಕ್ಷೇಪದಿಂದ ಸಾಮ್ರಾಜ್ಯಶಾಹಿ ಈ ದೇಶದಲ್ಲಿ ಜನಾಂಗೀಯ ವಿಭಜನೆಗೆ ಪ್ರಯತ್ನ ನಡೆಸಿತುಗಳ. 75 ವರ್ಷ ವಯಸ್ಸಿನ ಉಪಾಧ್ಯಕ್ಷ ಎಮ್ಮರ್ಸನ್ ಮನಾಂಗಾಗ್ವರವರು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡು, ಅವರ ಹೆಂಡತಿ ಇವರ ಉತ್ತರಾಧಿಕಾರಿಯಾಗಿ ರಾಷ್ಟ್ರಾಧ್ಯಕ್ಷರಾಗುತ್ತಾರೆ ಎಂಬ ಝಾನು–ಪಿಎಫ್ (ZANU–PF) ಆಡಳಿತದ ತೀರ್ಮಾನವನ್ನು ಮುಗಾಬೆಯವರು ತಡೆಹಿಡಿಯುವ ಪ್ರಯತ್ನ ಮಾಡಿದ್ದರು, ಇದು ಸೇನಾ ಕಾರ್ಯಾಚರಣೆಯನ್ನು ತಕ್ಷಣಕ್ಕೆ ಪ್ರಚೋದಿಸಿತು, ಹಾಗಾಗಿ ಮುಗಾಬೆ ಬಲವಂತದಿಂದ ಕೆಳಗಿಳಿಯುವಂತೆ ಮಾಡಿತು ಎಂದು ಭಾವಿಸಲಾಗಿದೆ. ತರುವಾಯ, ಡಿಸೆಂಬರ್ 2017ರಲ್ಲಿ ನಡೆದ ಝಾನು–ಪಿಎಫ್‌ನ ವಿಸ್ತೃತ–ವಿಶೇಷ ಕಾಂಗ್ರೆಸ್ ಸಭೆಯಲ್ಲಿ, ಮನಾಂಗಾಗ್ವರವರನ್ನೇ ಪಕ್ಷದ ಅಧ್ಯಕ್ಷರನ್ನಾಗಿ ಒಮ್ಮತದಿಂದ ಆಯ್ಕೆ ಮಾಡಲಾಯಿತು. ಹಾಗೂ ಮುಂದೆ 2018ರಲ್ಲಿ ನಡೆಯುವ ಚುನಾವಣೆಗೆ ಇವರೇ ಅಧ್ಯಕ್ಷೀಯ ಅಭ್ಯರ್ಥಿ ಎಂದು ನಿರ್ಣಯ ಅಂಗೀಕರಿಸಲಾಯಿತು.

**ಸಾಮ್ರಾಜ್ಯಶಾಹಿಗಳ ನಡುವಿನ ವೈರುಧ್ಯಗಳು**

1.41 ಸುದೀರ್ಘವಾದ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ, ನವೀಕೃತಗೊಂಡ ಸಾಮ್ರಾಜ್ಯಶಾಹಿ ಆಕ್ರಮಣಶೀಲತೆಯು, ಸಾಮ್ರಾಜ್ಯಶಾಹಿ ಶಿಬಿರದ ಒಗ್ಗೂಡಿಸುವಿಕೆಯ ಮೇಲೆ ಪ್ರತಿಕೂಲ ದುಷ್ಪರಿಣಾಮ ಬೀರುತ್ತಿದೆ. ನಮ್ಮ ಹಿಂದಿನ ಅಧಿವೇಶನಗಳಲ್ಲಿ ನಾವು ಗುರುತಿಸಿದ ಸಾಮ್ರಾಜ್ಯಶಾಹಿ ನಡುವಿನ ವೈರುಧ್ಯಗಳು ಮೂಕವಾಗಿರುವ ಸ್ಥಿತಿಯು, ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ನಾಯಕತ್ವದಡಿಯಲ್ಲಿ, ಸಾಮ್ರಾಜ್ಯಶಾಹಿ ಜಾಗತೀಕರಣದ ಹಿನ್ನೆಲೆಯಲ್ಲಿ, ಇದೀಗ ವಿಘಟನೆಯಾಗುತ್ತಿದೆ. ಇದಕ್ಕೆ ಬ್ರೆಕ್ಸಿಟ್ ಮತವು ಒಂದು ಉದಾಹರಣೆಯಾಗಿದೆ. ಡೋನಾಲ್ಡ್ ಟ್ರಂಪ್‌ನ ಧೋರಣೆಗಳು ಯುರೋಪಿಯನ್ ಒಕ್ಕೂಟ (ಇ.ಯು) ಹಾಗೆಯೇ, ಜಪಾನ್ ಮುಂತಾದ ಬಂಡವಾಳಶಾಹಿ ಕೇಂದ್ರಗಳ ನಡುವೆ ಬೆಳೆಯುತ್ತಿರುವ ಘರ್ಷಣೆಗಳು ತೀವ್ರಗೊಳ್ಳುತ್ತಿವೆ. ಅಂತರಾಷ್ಟ್ರೀಯ ಹಣಕಾಸು ಬಂಡವಾಳ ನಾಯಕತ್ವದಲ್ಲಿ ಮಾಡಲಾಗಿದ್ದ ಟ್ರಾನ್ಸ್–ಫೆಸಿಫಿಕ್ ಪಾಲುದಾರಿಕೆ ಒಪ್ಪಂದವನ್ನು ಡೋನಾಲ್ಡ್ ಟ್ರಂಪ್ ರದ್ದುಗೊಳಿಸಿದ್ದು, ಜಪಾನಿನ ಹಿತಾಸಕ್ತಿಗಳಿ ವಿರುದ್ಧವಾಗಿದೆ. ಪ್ಯಾರೀಸ್ ಕ್ಲೈಮೇಟ್ (ಹವಾಮಾನ ಬದಲಾವಣೆ) ಒಡಂಬಡಿಕೆಯಿಂದ ಯು.ಎಸ್.ಎ.ಯ ಹಿಂಪಡೆತ, ಯು.ಎಸ್.ಎ ಮತ್ತು ಯುರೋಪಿಯನ್ ಒಕ್ಕೂಟದ ನಡುವಿನ ಸಂಘರ್ಷವನ್ನು ತೀವ್ರಗೊಳಿಸಿದೆ. ನ್ಯಾಟೋ ಒಕ್ಕೂಟಕ್ಕೆ ಹಣಕಾಸು ನೀಡುವಲ್ಲಿ ಹೆಚ್ಚಿನ ಪಾಲನ್ನು ಯುರೋಪಿಯನ್ ಒಕ್ಕೂಟ ಕೈಗೊಳ್ಳಬೇಕು ಎಂಬ ಟ್ರಂಪ್‌ನ ಒತ್ತಾಯವು ಈ ಪ್ರದೇಶದಲ್ಲಿ ಬೆಳೆಯುತ್ತಿರುವ ಉದ್ವಿಗ್ನತೆಯ ಭಾಗವಾಗಿದೆ. ಇರಾನ್‌ನೊಂದಿಗಿನ ಅಣು ಒಪ್ಪಂದದ ಸಂಬಂಧ ಡೋನಾಲ್ಡ್ ಟ್ರಂಪ್‌ನ ಮರುಪರಿಶೀಲನೆಯ ಇತ್ತೀಚಿನ ನಿಲುವು, ಸಹಿ ಮಾಡಿರುವ ಇತರೆ ಒಪ್ಪಂದದಾರರು ಮತ್ತು ಯು.ಎಸ್.ಎ ನಡುವಿನ ಘರ್ಷಣೆಗಳನ್ನು ಹೆಚ್ಚಿಸಿದೆ. ಅಂದರೆ, ಜರ್ಮನಿ, ಫ್ರಾನ್ಸ್, ರಷ್ಯಾ ಮತ್ತು ಬ್ರಿಟನ್ ಹಾಗೂ ಇತರ ಯುರೋಪಿಯನ್ ಮಿತ್ರ–ದೇಶಗಳು ಟ್ರಂಪ್‌ನ ಈ ಕ್ರಮವನ್ನು ಅನುಮೋದಿಸುವುದು ಅಸಂಭವವಾಗಿದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಮೂಲಕ ಲಾಭದಾಯಕ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಜನರನ್ನು ಆರ್ಥಿಕವಾಗಿ ಶೋಷಣೆ ಮಾಡುವುದು, ಸಾಮ್ರಾಜ್ಯಶಾಹಿ ಶಿಬಿರ ಪರಸ್ಪರ ಸಾಮಂಜಸ್ಯದಿಂದ ಕೆಲಸ ಮಾಡಬಹುದು. ಆದರೆ ಇನ್ನಿತರೆ ಹಲವು ವಿಷಯಗಳಲ್ಲಿ ಸಂಘರ್ಷ ಮತ್ತು ವೈರುಧ್ಯಗಳು ಹೆಚ್ಚಾಗಿ ಬೆಳೆದು ಬರುತ್ತಿರುವುದು ಕಂಡು ಬಂದಿದೆ.

**ಹವಾಮಾನ ಬದಲಾವಣೆ**

1.42 ಪ್ಯಾರಿಸ್ ಒಪ್ಪಂದವನ್ನು ಯು.ಎಸ್.ಎ ಬೆಂಬಲಿಸುವುದಿಲ್ಲ ಎಂದು ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಘೋಷಿಸಿದ್ದರಿಂದ ಜಾಗತಿಕ ತಾಪಮಾನ ಏರಿಕೆಯಿಂದ ಉಂಟಾಗುವ ಪ್ರತಿಕೂಲ ಹವಾಮಾನ ಬದಲಾವಣೆಯ ಹೋರಾಟವು ಮತ್ತೊಮ್ಮೆ ಅಲ್ಲಿಗೆ ನಿಂತು ಹೋದಂತಾಗಿದೆ.

1.43 ಮುಂದುವರಿದ ದೇಶಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತವೆ ಎಂಬ ಆತಂಕ ಮತ್ತೊಮ್ಮೆ ಸಮರ್ಥಿಸಲ್ಪಟ್ಟಿದೆ. ಹಸಿರುಮನೆ ಅನಿಲದ (ಜಿಹೆಚ್‌ಟಿ) ಇಂಗಾಲ ಹೊರಸೂಸುವಿಕೆಯನ್ನು ನಿಯಂತ್ರಿಸುವ ಸಲುವಾಗಿಯೇ ಅಂತರಾಷ್ಟ್ರೀಯ ವ್ಯವಸ್ಥೆ ಸ್ಥಾಪಿಸಲು ಡಿಸೆಂಬರ್ 2016ರಲ್ಲಿ ಪ್ಯಾರೀಸ್ ಒಪ್ಪಂದ ಏರ್ಪಟ್ಟಿತು. ಇದು ತುಂಬ ಅತೃಪ್ತಿಕರ ವ್ಯವಸ್ಥೆಯಾಗಿದ್ದು, ಈ ಒಪ್ಪಂದ ವಿಜ್ಞಾನದ ಅವಶ್ಯಕತೆಗಳನ್ನು ಪೂರೈಸುವುದು ಇಲ್ಲ ಅಥವಾ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ನಡುವೆ ಇರುವ ಅಸಮಾನತೆಗಳನ್ನು ಹೋಗಲಾಡಿಸುವುದೂ ಇಲ್ಲ. ಸ್ವಯಂ ಪ್ರೇರಿತ ಬದ್ಧತೆಗಳ ಪ್ಯಾರೀಸ್ ಒಪ್ಪಂದದ ರಚನೆಯು, 3 ಡಿಗ್ರಿ ಸಿಯಷ್ಟು ಜಾಗತಿಕ ಉಷ್ಣಾಂಶ ಏರಿಕೆಯ ಕಡೆಗೆ ಭೂಮಿ ಸಾಗುತ್ತಿದೆ. 1.5 ಡಿಗ್ರಿ 'ಸಿ' ಮಹತ್ವಾಕಾಂಕ್ಷಿಯ ಆಶಯಕ್ಕೆ ಯಾವುದೇ ಅವಕಾಶ ಕಲ್ಪಿಸಿಕೊಟ್ಟಿಲ್ಲ. ಮಾತ್ರವಲ್ಲ, ಇದು ಒಪ್ಪಂದದಲ್ಲಿನ ಗುರಿ 2 ಡಿಗ್ರಿ ಸೆ. ಗಿಂತ ತುಂಬಾ ದೂರದಲ್ಲಿದೆ.

1.44 ಯು.ಎಸ್.ಎ ತನ್ನ ಇಚ್ಛೆಗೆ ಅನುಗುಣವಾಗಿ ಪ್ಯಾರಿಸ್ ಒಪ್ಪಂದವನ್ನು ಎತ್ತೆಂದರತ್ತ ತಿರುಗಿಸುತ್ತಿದೆ. ಜಾಗತಿಕ ಪರಿಸರದ ಹಾನಿಯಲ್ಲಿ ತಮ್ಮ ಐತಿಹಾಸಿಕ ಜವಾಬ್ದಾರಿಗಳಿಗೆ ಅನುಗುಣವಾಗಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು, ಕಾರ್ಬನ್ ಹೊರಸೂಸುವಿಕೆಯಲ್ಲಿ ಕಡಿತಕ್ಕೆ ಒಳಪಡಿಸುವ ಗುರಿಗಳಿಗೆ ಬದ್ಧತೆ ಹೊಂದಿರುವುದಕ್ಕೆ ಬದಲಾಗಿ, ಎಲ್ಲಾ ದೇಶಗಳು ಪ್ರಸ್ತುತ ಹೊರಸೂಸುವುದನ್ನು ಕಡಿತಗೊಳಿಸಲು ಸ್ವಯಂ ಪ್ರೇರಿತ ಗುರಿಗಳನ್ನು ಮಾತ್ರ ಇದೀಗ ಒಪ್ಪಂದದಲ್ಲಿದೆ. ಇದಲ್ಲದೆ ಅಭಿವೃದ್ಧಿ ಹೊಂದಿದ ದೇಶಗಳ ಹಣಕಾಸು ಬೆಂಬಲ ಮತ್ತು ಕಡಿಮೆ ಹೊರಸೂಸುವ ಇಂಗಾಲ ತಂತ್ರಜ್ಞಾನದ ವರ್ಗಾವಣೆಯ ಬಗೆಗಿನ ಹಿಂದಿನ ಬದ್ಧತೆಗಳನ್ನು ಇದೀಗ ಪಕ್ಕಕ್ಕೆ ಸರಿಸಿದಂತಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮೇಲೆ ತಮ್ಮ ಹಿಂದಿನ ಕಾರ್ಯಗಳಿಗೆ ಸರಿದೂಗಿಸಲು, ಯಾವುದೇ ಹೊಣೆಗಾರಿಕೆಯನ್ನು ಹೊರಿಸಲು ಪ್ಯಾರಿಸ್ ಒಪ್ಪಂದ ಸ್ಪಷ್ಟವಾಗಿ ನಿರಾಕರಿಸಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳು "ಸಾಮಾನ್ಯ ಆದರೆ ವಿಭಿನ್ನ ಜವಾಬ್ದಾರಿಗಳ ತತ್ವವನ್ನು" ಒಪ್ಪಂದದಲ್ಲಿ ಪುನರುಚ್ಛಿಸಿದಾಗ್ಯೂ ಸಹ, ವಾಸ್ತವಿಕವಾಗಿ ಇದು ಕೂಡ ನಿರಾಕರಿಸಲ್ಪಟ್ಟಿದೆ. ಇದೀಗ ಟ್ರಂಪ್‌ರ ಆಡಳಿತದ ಅಡಿಯಲ್ಲಿ ಯು.ಎಸ್.ಎ. ಪ್ಯಾರಿಸ್ ಒಪ್ಪಂದದಿಂದ ಹೊರ ನಡೆದಿದೆ. ಹಾಗಾಗಿ ಹವಾಮಾನ ನಿಯಂತ್ರಿಸುವ ಯಾವುದೇ ಅಂತರಾಷ್ಟ್ರೀಯ ವ್ಯವಸ್ಥೆ ಇಲ್ಲದಂತಾಗಿದೆ. ಇದು ಹಿಂದೆ ಕ್ಯೋಟೊ ಒಪ್ಪಂದದಿಂಧ ಹೊರ ನಡೆದಿದ್ದ ಯು.ಎಸ್.ಎ.ಯ ಹಳೆಯ ಚಾಳಿಯ ಪುನರಾವರ್ತನೆಯಾಗಿದೆ. ಯು.ಎಸ್.ಎ ವಿಶ್ವದ ಎರಡನೆ ದೊಡ್ಡ ಮಾಲಿನ್ಯಕಾರಕ ದೇಶವಾಗಿದೆ. ಆಗಿದ್ದರೂ ಸಹ, ಅದು ಸ್ವಯಂಪ್ರೇರಿತವಾಗಿ ಒಪ್ಪಿಕೊಂಡಿದ್ದ ಕಡಿತ ನಗಣ್ಯವಾಗಿತ್ತು. ಅದು ಯುರೋಪಿಯನ್‌ನ ದೇಶಗಳಿಗಿಂತಲೂ ಬಹಳ ಕಡಿಮೆ ಇತ್ತು.

1.45 ಭವಿಷ್ಯದಲ್ಲಿ ನಡೆಯುವ ಮಾತುಕತೆಗಳಲ್ಲಿ, ವಿಶೇಷವಾಗಿ 2018ರಲ್ಲಿ ಬರಲಿರುವ ಹೊರಸೂಸುವಿಕೆಯ ನಿಯಂತ್ರಿಸುವ ಜಾಗತಿಕ ಮೌಲ್ಯಮಾಪನದಲ್ಲಿ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪ್ರಯತ್ನ ಕುರಿತಂತೆ, ಭಾರತವು, ಎಚ್ಚರದಿಂದಿರಬೇಕಾಗಿದೆ. ಇಲ್ಲದಿದ್ದರೆ, ಭಾರತದ ಅಭಿವೃದ್ಧಿಯ ಅಗತ್ಯಗಳನ್ನು ಪೂರೈಸಲಾಗದಷ್ಟು ತೀವ್ರವಾದ ಕಡಿತಗಳನ್ನು ಭಾರತದ ಮೇಲೆ ಹೇರಬಹುದು. ಪ್ರಸ್ತುತ ಸಕಾರವು ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ಮಾಡುತ್ತಿಲ್ಲವಾದರೂ ಸಹ, ಪ್ರಗತಿಪರ ಶಕ್ತಿಗಳು, ಕಡಿಮೆ ಇಂಗಾಲ ಕ್ರಮಗಳನ್ನು ಅಳವಡಿಸಿಕೊಳ್ಳಲು ಒತ್ತಡವನ್ನು ತರಬೇಕಾಗಿದೆ. ಇದರಿಂದ ಬಡವರಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್, ಅಡುಗೆ ಇಂಧನ ಮತ್ತು ಸಾಮೂಹಿಕ ಸಾರ್ವಜನಿಕ ಸಾಗಣೆ ಸೇರಿದಂತೆ ಆಧುನಿಕ ಶಕ್ತಿ ಮೂಲಗಳಿಗೆ ಉತ್ತೇಜನ ನೀಡುತ್ತದೆ.

**ಬಹು ಧ್ರುವೀಯತೆ**

1.46 ಕಳೆದ ನಮ್ಮ ಮಹಾಧಿವೇಶನದ ನಂತರದ ಅವಧಿಯಲ್ಲಿ, ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಬಹುಧ್ರುವೀಯತೆಗೆ ಸಂಬಂಧಿಸಿದಂತೆ, ಪರಸ್ಪರ ವಿರೋಧಾತ್ಮಕ ಪ್ರವೃತ್ತಿಗಳು ಹೊರಹೊಮ್ಮಿವೆ. ಭಾರತ ಮತ್ತು ಬ್ರೆಜಿಲ್‌ನಲ್ಲಿ ಬಲಪಂಥೀಯ ಸರ್ಕಾರಗಳು, ಮತ್ತು ಎ.ಎಸ್.ಸಿ.–ಕೊಸಾಟು–ಎಸ್.ಎ.ಸಿ.ಪಿ ಮೈತ್ರಿಕೂಟ ದುರ್ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾ ಚುನಾವಣೆಗೆ ಹೋಗುತ್ತಿರುವುದು, ಬ್ರಿಕ್ಸ್ (BRICS)ನ ಪರಿಣಾಮಕಾರಿತನಕ್ಕೆ ಪ್ರತಿಕೂಲವಾಗಿವೆ. ಆದಾಗ್ಯೂ, ಬ್ರಿಕ್ಸ್ ಹೊಸದೊಂದು ಅಭಿವೃದ್ಧಿ ಬ್ಯಾಂಕ್‌ನ್ನು ಶಾಂಘೈಯಲ್ಲಿ ಯಶಸ್ವಿಯಾಗಿ ಸ್ಥಾಪಿಸಿದೆ. ಆದರೆ ಈ ಮೇಲೆ ತಿಳಿಸಿರುವಂತ ಪ್ರತಿಕೂಲ ಬೆಳವಣಿಗೆಗಳಿಂದಾಗಿ, ಸಾಮ್ರಾಜ್ಯಶಾಹಿ ಆರ್ಥಿಕ ಸಂಸ್ಥೆಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಅದರ ಸಾಮರ್ಥ್ಯ ಪ್ರಶ್ನಾರ್ಹವಾಗಿದೆ.

1.47 ಶಾಂಘೈ ಸಹಕಾರ ಸಂಸ್ಥೆ (ಎಸ್.ಸಿ.ಓ)ಯು ಒಂದು ಪರಿಣಾಮಕಾರಿ ಪ್ರಾದೇಶಿಕ ವೇದಿಕೆಯಾಗಿ ತನ್ನ ಪಾತ್ರದ ಬಲವರ್ಧನೆಗೊಳಿಸಿಕೊಂಡಿದೆ. ಹಾಗೆಯೇ, ಭಾರತ ಮತ್ತು ಪಾಕಿಸ್ಥಾನವನ್ನು ಪೂರ್ಣ ಸದಸ್ಯರನ್ನಾಗಿ ತನ್ನ ತೆಕ್ಕೆಗೆ

ಸೇರಿಸಿಕೊಂಡಿದೆ. ಚೀನಾವು ಅಭಿವೃದ್ಧಿ ಹೊಂದಿದ ಹಲವು ರಾಷ್ಟ್ರಗಳನ್ನು ಒಳಗೊಂಡಂತೆ, 60 ಸದಸ್ಯರನ್ನು ಹೊಂದಿರುವ ಏಷಿಯನ್ ಮೂಲಸೌಕರ್ಯ ಮತ್ತು ಹೂಡಿಕಾ–ಇನ್‌ವೆಸ್ಟ್‌ಮೆಂಟ್ ಬ್ಯಾಂಕನ್ನು ಸ್ಥಾಪಿಸಲು ಮುತುವರ್ಜಿ ವಹಿಸಿದೆ.

1.48 ಯುಎಸ್ ಸಾಮ್ರಾಜ್ಯಶಾಹಿ ಜಾಗತಿಕವಾಗಿ ತನ್ನ ಏಕಧ್ರುವೀಯ ಯಜಮಾನಿಕೆಯನ್ನು ಬಲವರ್ಧನೆಗೊಳಿಸಿಕೊಳ್ಳುವುದರ ವಿರುದ್ಧ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಈ ಬಹುಧ್ರುವೀಯತೆಯನ್ನು ಬಲಪಡಿಸುವ ಸಲುವಾಗಿಯೇ, ಅಭಿವೃದ್ಧಿಪಡಿಸಬೇಕಾಗಿದೆ. ಇದರಲ್ಲಿ ಪ್ರಮುಖವಾಗಿ ಭಾರತದ ವಿದೇಶಿ, ರಕ್ಷಣಾ ಮತ್ತು ವ್ಯೂಹಾತ್ಮಕ ನಿಲುವುಗಳಲ್ಲಿ ಯು.ಎಸ್. ಪರವಾದ ಬದಲಾವಣೆಯ ಹಿನ್ನೆಲೆಯಲ್ಲಿ, ಭಾರತದ ಪಾತ್ರ ಪ್ರಮುಖ ಅಂಶವಾಗಿದೆ. ಚೀನಾದ ಒನ್–ಬೆಲ್ಟ್ ಒನ್–ರೋಡ್ (ಒಬೊರೋ) ಉಪಕ್ರಮಕ್ಕೆ ಸೇರಲು ಭಾರತ ನಿರಾಕರಿಸಿದೆ. ಭಾರತದ ಪ್ರಸಕ್ತ ಯು.ಎಸ್. ಸಾಮ್ರಾಜ್ಯಶಾಹಿ–ಪರವಾದ ನಿಲುವು, ಬಹುಧ್ರುವೀಯತೆಯ ವೇದಿಕೆಗಳ ವೈಶಾಲ್ಯ ಮತ್ತು ಭವಿಷ್ಯದ ಸಂಭಾವ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

1.49 ಯು.ಎಸ್. ಸಾಮ್ರಾಜ್ಯಶಾಹಿಯ ಅಜೆಂಡಾಕ್ಕೆ ಪ್ರತಿ ಸವಾಲು ಹಾಕುವ, ಯುನಾಸುರ್ (UNASUR), ಮೆರ್ಕೊಸುರ್ (MERCASUR), ಅಲಾ (ALBA) ಮತ್ತು ಸೆಲಾಕ್ (CELCA) ದಂತಹ ಲ್ಯಾಟಿನ್ ಅಮೆರಿಕಾದ ಪ್ರಾದೇಶಿಕ ವೇದಿಕೆಗಳು, ಅರ್ಜೆಂಟೈನಾ, ಬ್ರೆಜಿಲ್ ಮತ್ತು ಬಲಪಂಥೀಯ ಸರಕಾರಗಳ ಸ್ಥಾಪನೆಯಿಂದಾಗಿ, ಹಾಗೂ ಇತರೆ ದೇಶಗಳಲ್ಲಿನ ಯು.ಎಸ್. ಬೆಂಬಲಿತ ಬಲಪಂಥೀಯ ಆಕ್ರಮಣಗಳಿಂದಾಗಿ ದುರ್ಬಲಗೊಂಡಿವೆ.

1.50 ರಷ್ಯಾ ಮತ್ತು ಅಮೆರಿಕಾ ಹಾಗೂ ಅದರ ಪಾಶ್ಚಿಮಾತ್ಯ ಮೈತ್ರಿಕೂಟಗಳ ನಡುವೆ ಉಕ್ರೇನ್ ಬಗೆಗಿನ ಸಂಘರ್ಷಗಳು ನಮ್ಮ 21ನೇ ಅಧಿವೇಶದನ ಸಮಯದಲ್ಲಿಯೇ ಹರಿತಗೊಳ್ಳುತ್ತಿದ್ದು, ಅದು ಈಗಲೂ ಮುಂದುವರಿದಿದೆ. ರಷ್ಯಾವು ಸಿರಿಯಾದಲ್ಲಿ ಯು.ಎಸ್.ಎ ಮತ್ತು ಅದರ ಮಿತ್ರರನ್ನು, ತನ್ನ ಕುಶಲತೆಯಿಂದ ಯಶಸ್ವಿಯಾಗಿ ಹೊರಹಾಕಿದೆ. ರಷ್ಯಾವು ಚೀನಾದೊಂದಿಗಿನ ತನ್ನ ಸಂಬಂಧಗಳನ್ನು ಬಲಪಡಿಸಿಕೊಂಡಿದೆ. ಹಾಗೆಯೇ, ಎಸ್.ಸಿ.ಓ, ಬ್ರಿಕ್ಸ್ ಇತ್ಯಾದಿ ಬಹುಪಕ್ಷೀಯ ವೇದಿಕೆಗಳನ್ನು ಬಲಪಡಿಸಲು ಶ್ರಮಿಸುತ್ತಿದೆ. ಇದು ಅಮೆರಿಕಾ ಬಯಸುತ್ತಿರುವ ಏಕಧ್ರುವೀಯತೆಗೆ ವಿರುದ್ಧವಾಗಿ, ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಬಹುಧ್ರುವೀಯತೆಯ ಕಡೆಗೆ ಮುನ್ನಡೆಯನ್ನು ಮತ್ತಷ್ಟು ಬಲಪಡಿಸುತ್ತಿದೆ.

**ವಿಶ್ವ ವಾಣಿಜ್ಯ ಸಂಸ್ಥೆಯ (ಡಬ್ಲ್ಯೂಟಿಓ) ಮಾತುಕತೆಗಳು**

1.51 ಈ ಮುಂಚೆಯೇ ಗಮನಿಸಿರುವಂತೆ ಅಮೆರಿಕಾ ಮತ್ತು ಇತರೆ ಮುಂದುವರಿದ ಬಂಡವಾಳಶಾಹಿ ದೇಶಗಳು ದ್ವಿಪಕ್ಷಿಯ ಮತ್ತು ಪ್ರಾದೇಶಿಕ ಮಟ್ಟದಲ್ಲಿ ವ್ಯಾಪಾರ ಒಪ್ಪಂದಗಳ ಮಾತುಕತೆಗಳಿಗೆ ಹೆಚ್ಚು ಆದ್ಯತೆ ನೀಡುತ್ತಾ ಬಂದಿವೆ. ಡಬ್ಲ್ಯೂಟಿಓ ಜಾಗತಿಕವಾಗಿ ವ್ಯಾಪಾರ ನಿಯಮಗಳನ್ನು ನಿರ್ಧರಿಸುವ ಪ್ರಾಥಮಿಕ ವೇದಿಕೆಯಾಗಿ ಉಳಿದಿಲ್ಲ. 160ಕ್ಕಿಂತಲೂ ಹೆಚ್ಚು ದೇಶಗಳು ಡಬ್ಲ್ಯೂಟಿಓನಲ್ಲಿ ಸದಸ್ಯತ್ವ ಹೊಂದಿವೆ. ಆದ್ದರಿಂದ ಡಬ್ಲ್ಯೂಟಿ ಗಿಂತ, ಈ ರೀತಿಯ ದ್ವಿಪಕ್ಷೀಯ ಮತ್ತು ಪ್ರಾದೇಶಿಕ ಅನುಕೂಲಕರ ವ್ಯವಸ್ಥೆಗಳ ಮೂಲಕ, ಅಭಿವೃದ್ಧಿಶೀಲ ದೇಶಗಳ ಪ್ರತಿರೋಧವನ್ನು ಸುಲಭವಾಗಿ ಮುರಿಯಬಹುದು ಎಂದು, ಯುಎಸ್.ಎ ಮತ್ತು ಇತರೆ ಮುಂದುವರಿದ ದೇಶಗಳು ಕಂಡುಕೊಂಡಿವೆ.

1.52 ಪ್ರಸ್ತುತ ಭಾರತವು ಎರಡು ಪ್ರಮುಖ ವ್ಯಾಪಾರ ಒಪ್ಪಂದಗಳಿಗಾಗಿ ಮಾತುಕತೆ ನಡೆಸುತ್ತಿದೆ. ಭಾರತ–ಯುರೋಪಿಯನ್ ಒಕ್ಕೂಟ (ಇ.ಯು) ಮುಕ್ತ ವಾಣಿಜ್ಯ ಒಪ್ಪಂದ ಹಾಗೂ ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ (ಆರ್.ಸಿ.ಎ.ಪಿ). ಭಾರತ ಮತ್ತು 15 ಇತರೆ ದೇಶಗಳನ್ನು – ಅಂದರೆ ಜಪಾನ್, ದಕ್ಷಿಣ ಕೊರಿಯಾ, ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಮತ್ತು ಚೀನಾ, ಹಾಗೂ ಆಸಿಯಾನ್ (ASAEAN) ಕೂಟದ 10 ದೇಶಗಳು – ಆರ್.ಸಿ.ಎ.ಪಿ. ಒಪ್ಪಂದ ಒಳಗೊಂಡಿವೆ.

1.53 ಬಿಜೆಪಿ ಸರ್ಕಾರವು ತೆಗೆದುಕೊಂಡಿರುವ ಯು.ಎಸ್. ಪರವಾದ ನಿಲುವಿನಿಂದಾಗಿ, ದೇಶೀಯ ಹಿತಾಸಕ್ತಿಯನ್ನು, ಅಂತರಾಷ್ಟ್ರೀಯ ಹಣಕಾಸು ಮತ್ತು ಯು.ಎಸ್. ಹಿತಾಸಕ್ತಿಗಳಿಗೆ ತುತ್ತಾಗದಂತೆ ರಕ್ಷಿಸುವ ಪ್ರಯತ್ನಗಳು ಕುಸಿಯುತ್ತಿರುವುದು ಹೆಚ್ಚಾಗಿ ಕಂಡು ಬಂದಿದೆ. ಈ ಮಾತುಕತೆಗಳು ಅತ್ಯಂತ ಗೌಪ್ಯವಾಗಿ ನಡೆಸಲ್ಪಡುತ್ತವೆ. ಮತ್ತು ಈ ಹಿಂದಿನಂತೆ ಸಮಾಲೋಚನಾ ಟಿಪ್ಪಣಿಗಳನ್ನು ಹಂಚಿಕೊಳ್ಳಲಾಗಿಲ್ಲ. ಅದನ್ನು ಸಂಸತ್ತಿನಲ್ಲಿಯೂ ಮಂಡಿಸಲಾಗಿಲ್ಲ. ಇತರೆ ದೇಶಗಳಲ್ಲಿ ಟಿಪ್ಪಣಿಗಳ ಸೋರಿಕೆಗಳು, ಡಬ್ಲ್ಯೂಟಿಓ ಚೌಕಟ್ಟಿನ ಅಡಿಯಲ್ಲಿನ ಅಗತ್ಯವನ್ನು ಮೀರಿ, ತನ್ನ ವ್ಯಾಪಾರ ನಿಯಮಗಳನ್ನು ಮತ್ತಷ್ಟು ಉದಾರೀಕರಿಸಲು ಭಾರತ ಒತ್ತಡಕ್ಕೆ ಬಗ್ಗುತ್ತಿದೆ ಎಂದು ಸೂಚಿಸುತ್ತದೆ. ಭಾರತಕ್ಕೆ ಬರುವ ಹೊಸ ಔಷಧಿಗಳ ವೆಚ್ಚದ ಮೇಲೆ ಪ್ರತಿಕೂಲ ಪರಿಣಾಮ ಬೀರಲು ಮತ್ತು ಅದಕ್ಕಾಗಿ ಭಾರತದ ಪೇಟೆಂಟ್ ನಿಯಮಗಳನ್ನು ದುರ್ಬಲಗೊಳಿಸಲು, ಹಾಗೂ ದೇಶೀಯ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ವಿದೇಶಿ ಕಾರ್ಪೊರೇಟ್‌ಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಹೂಡಿಕೆಯ ನಿಯಮಗಳನ್ನು ರೂಪಿಸುವ ಭಾರತೀಯ ಸರ್ಕಾರದ ಪಾತ್ರದ ಬಗ್ಗೆ ರಾಜಿ ಮಾಡಿಕೊಳ್ಳಲು, ಒತ್ತಡಗಳನ್ನು ಹೇರಲಾಗುತ್ತಿರುವುದನ್ನು ವಿಶೇಷವಾಗಿ ಗಮನಿಸಬೇಕು.

1.54 2017ರ ಅಂತ್ಯದ ವೇಳೆಗೆ ಬ್ಯೂನಸ್ ಏರಿಸ್‌ನಲ್ಲಿ ನಡೆದ ಡಬ್ಲ್ಯೂಟಿಓ ಮಂತ್ರಿಗಳ ಸಭೆಯಲ್ಲಿ ಇ–ವಾಣಿಜ್ಯದ ಮೇಲೆ ಚರ್ಚೆ ನಡೆಯಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಇ–ವಾಣಿಜ್ಯದ ವ್ಯಾಪಾರದಲ್ಲಿ ಉದಾರೀಕರಣ ಮಾಡುವುದು ಸಭೆಯ ಕಾರ್ಯಸೂಚಿಯಲ್ಲಿ ಸೇರಿತ್ತು. ಇ–ಕಾಮರ್ಸ್‌ನ ವ್ಯಾಖ್ಯಾನವನ್ನು ಕೆಲವು ಎಲೆಕ್ಟ್ರಾನಿಕ್ ವಹಿವಾಟನ್ನು ಒಳಗೊಳ್ಳುವ ಎಲ್ಲಾ ವ್ಯಾಪಾರವನ್ನು ಸೇರುವಂತೆ ವಿಸ್ತರಿಸಲಾಯಿತು. ಇದು ಪ್ರಸ್ತುತ ಜಗತ್ತಿನ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ. ಇ–ವಾಣಿಜ್ಯದ ವ್ಯಾಪಾರಕ್ಕೆ ದೇಶೀಯ ತೆರಿಗೆಗಳಿಂದ ವಿನಾಯಿತಿ ನೀಡಬೇಕೆಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಒತ್ತಾಯಿಸಿವೆ. ಇದು ಕಸ್ಟಮ್ಸ್ ಮತ್ತು ಇತರೆ ಸುಂಕಗಳ ತೆರಿಗೆಯ ರೂಪದಲ್ಲಿ ಬರುವ ಭಾರತೀಯ ಸರ್ಕಾರದ ಆದಾಯಕ್ಕೆ ಭಾರೀ ನಷ್ಟ ಉಂಟು ಮಾಡುತ್ತದೆ. ಇದು ಮೆಗಾ ಜಾಗತಿಕ ಇ–ಕಾಮರ್ಸ್ ಕಂಪನಿಗಳ ವಿರುದ್ಧ ಸ್ಪರ್ಧಿಸುತ್ತಿರುವ ಭಾರತೀಯ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಮೇಲೆ ಸಹ ತೀವ್ರ ಪರಿಣಾಮ ಬೀರುತ್ತದೆ. ಆಫ್ರಿಕನ್ ದೇಶಗಳ ಗುಂಪು ಈ ಕ್ರಮವನ್ನು ವಿರೋಧಿಸಿದೆ. ಆದರೆ ಭಾರತವವು ತನ್ನ ನಿಲುವನ್ನು ಇನ್ನೂ ಸ್ಪಷ್ಟಪಡಿಸಿಲ್ಲ.

1.55 ಈ ಮಾತುಕತೆಗಳ ಸಮಯದಲ್ಲಿ ಸ್ಪಷ್ಟವಾಗಿ ಗೊತ್ತಾಗುವ ಸಂಗತಿಯೆಂದರೆ, ಡಬ್ಲ್ಯೂಟಿಓದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಮುಖ ಧ್ವನಿಯೆಂದು ಪರಿಗಣಿಸಲ್ಪಟ್ಟಿರುವ ಭಾರತವು, ಜಾಗತಿಕ ಬಂಡವಾಳದ ಕಿರಿಯ ಪಾಲುದಾರನಾಗಿ ತನ್ನ ಸ್ಥಾನವನ್ನು ಭದ್ರಪಡಿಸಬೇಕೆಂಬ ಹವಣಿಕೆಯಿಂದ, ಆ ಪಾತ್ರವನ್ನು ಬಿಟ್ಟುಕೊಟ್ಟಿದೆ.

**ಸಮಾಜವಾದಿ ದೇಶಗಳು**

**1.56 ಚೀನಾ** : ಕಳೆದ ನಮ್ಮ ಕಾಂಗ್ರೆಸ್ ನ ನಂತರ, ಚೀನಾದ ಆರ್ಥಿಕತೆಯ ಸರಾಸರಿ ವಾರ್ಷಿಕ ದರ 7.2 ಪ್ರತಿ ಶತದಷ್ಟು ವಿಸ್ತಾರಗೊಂಡಿದೆ ಮತ್ತು ಅದು ವಿಶ್ವದ ಎರಡನೆಯ ಅತಿ ದೊಡ್ಡ ಆರ್ಥಿಕತೆಯಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಜಾಗತಿಕ ಆರ್ಥಿಕ ಬೆಳವಣಿಗೆಗೆ ಶೇ.30ಕ್ಕಿಂತ ಹೆಚ್ಚು ಚೀನಾ ತನ್ನ ಕೊಡುಗೆ ನೀಡಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಉಂಟಾಗುವ ತೊಂದರೆಗಳಿಂದ ಹೊರ ಬರಲು ಚೀನಾವು ತಂದ ಒಂದು ಪ್ರಮುಖ ಬದಲಾವಣೆ ಎಂದರೆ ದೇಶೀಯವಾಗಿ ಬೇಡಿಕೆ ಮತ್ತು ಬಳಕೆಗೆ ಒತ್ತು ಕೊಟ್ಟಿದ್ದು. ಇದನ್ನು ಖಚಿತವಾಗಿ ಸಾಧಿಸಲು ಕನಿಷ್ಟ ವೇತನವನ್ನು ಹೆಚ್ಚಿಸಿದ್ದು ಮಾತ್ರವಲ್ಲದೆ 6 ಕೋಟಿಗಿಂತಲೂ ಹೆಚ್ಚು ಜನರನ್ನು ಬಡತನದಿಂದ ಮೇಲೆತ್ತುವ ಕ್ರಮಗಳನ್ನು ಕ್ರಮೇಣ ಕೈಗೊಂಡಿದ್ದು ಮೂಲ ಕಾರಣ. ಇಲ್ಲಿ ಉದ್ಯೋಗದ ಸೃಷ್ಟಿ ಸ್ಥಿರ ಬೆಳವಣಿಗೆ ದಾಖಲಿಸಿದೆ. ಪ್ರತಿವರ್ಷ 1.3 ಕೋಟಿ ನಗರ ಉದ್ಯೋಗಗಳನ್ನು ಸೃಷ್ಟಿಸುತ್ತಿದೆ.

1.57 ಚೀನಾದ ಬೆಳೆಯುತ್ತಿರುವ ಆರ್ಥಿಕ ಶಕ್ತಿ ಅಂತರಾಷ್ಟ್ರೀಯ ಸಂಬಂಧಗಳ ಮೇಲೆ ಅಗಾಧ ಪ್ರಭಾವವನ್ನು ಬೀರುತ್ತಲಿದೆ. ಪ್ರಾಚೀನ ರೇಷ್ಮೆ ಮಾರ್ಗ ಮತ್ತು ಸಾಂಬಾರು ವಸ್ತುಗಳ ಕಡಲ ವ್ಯಾಪಾರ ಮಾರ್ಗವನ್ನು ಮೂಲಾನ್ವೇಷಣೆ ಮಾಡುವ 'ಒನ್ ಬೆಲ್ಟ್ ಒನ್ ರೋಡ್' (ಒಬೆರೊ) ಉಪಕ್ರಮದ ಯೋಜನೆಗೆ ಅನೇಕ ದೇಶಗಳು ಸೇರಿಕೊಂಡಿವೆ. ಚೀನಾ ಮೂಲದ ಏಶ್ಯನ್ ಮೂಲ ಸೌಕರ್ಯ ಮತ್ತು ಹೂಡಿಕೆ ಬ್ಯಾಂಕ್ ಸಹ ಇದನ್ನು ಸ್ವಾಗತಿಸಿದೆ. 56 ದೇಶಗಳು ಸೇರಿದಂತೆ, ಯು.ಎಸ್.ನ ಹತ್ತಿರದ ಮಿತ್ರರೂ ಅಂದರೆ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ದಕ್ಷಿಣ ಕೊರಿಯಾದಂತ ದೇಶಗಳು ಸಹ 'ಒಬೆರೊ' ಉಪಕ್ರಮಕ್ಕೆ ಸೇರ್ಪಡೆಗೊಂಡಿವೆ. ಶಾಂಘೈ ಸಹಕಾರ ಸಂಸ್ಥೆ (ಎಸ್.ಸಿ.ಓ) ಬ್ರಿಕ್ಸ್ ಮುಂತಾದ ಹಲವು ಬಹುಪಕ್ಷೀಯ ಸಂಘಟನೆಗಳ ಬಲಪಡಿಸುವಿಕೆಯನ್ನು ಚೀನಾ ಸಮರ್ಥಿಸುತ್ತದೆ. ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಚೀನಾದ ಬೆಳೆಯುತ್ತಿರುವ ಪ್ರಭಾವವನ್ನು ತಡೆಗಟ್ಟಲು ಯು.ಎಸ್. ತನ್ನ ಪ್ರಯತ್ನಗಳನ್ನು ಹೆಚ್ಚಿಸುತ್ತಿದೆ. ಹೀಗಾಗಿ ಇದು ದಕ್ಷಿಣ ಚೀನಾ ಸಮುದ್ರ, ಕೊರಿಯನ್ ಪರ್ಯಾಯ ದ್ವೀಪ ಮತ್ತು ಏಷ್ಯಾ–ಫೆಸಿಫಿಕ್ ಪ್ರದೇಶದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸುತ್ತಿದೆ. ಮುಂಬರುವ ದಿನಗಳಲ್ಲಿ ಸಾಮ್ರಾಜ್ಯಶಾಹಿ ಯು.ಎಸ್ ಮತ್ತು ಸಮಾಜವಾದಿ ಚೀನಾ ನಡುವಿನಲ್ಲಿ ತೀವ್ರ ಸ್ಪರ್ಧೆಯನ್ನು ವೀಕ್ಷಿಸಲಿದ್ದೇವೆ.

1.58 ಇತ್ತೀಚೆಗೆ ಕೊನೆಗೊಂಡ ಚೀನಾದ ಕಮ್ಯುನಿಸ್ಟ್ ಪಾರ್ಟಿ (ಸಿಪಿಸಿ) 19ನೇ ಮಹಾಧಿವೇಶನ, ಚೀನಾದ ಬೆಳೆಯುತ್ತಿರುವ ಆತ್ಮವಿಶ್ವಾಸ ಮತ್ತು ಗಟ್ಟಿ ದನಿಯನ್ನು ಬಿಂಬಿಸಿದೆ. ಸಿಪಿಸಿಯ ಪ್ರಧಾನ ಕಾರ್ಯದರ್ಶಿಯಾಗಿ ಕ್ಸಿ ಜಿಂಪಿಂಗ್‌ರನ್ನು ಮರು ಆಯ್ಕೆ ಮಾಡಲಾಗಿದೆ. ಹಾಗೆಯೇ ಹೊಸ ಯುಗದಲ್ಲಿ ಚೀನಿ ಗುಣ ಲಕ್ಷಣಗಳೊಂದಿಗೆ ಸಮಾಜವಾದ ನಿರ್ಮಾಣದ ಮಾರ್ಗದಲ್ಲಿ ರಾಷ್ಟ್ರವನ್ನು ಅಭಿವೃದ್ಧಿಪಡಿಸುವುದಕ್ಕೆ ರೂಪುರೇಷೆಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಹೊಸ ಯುಗವನ್ನು ಮಾರ್ಕ್ಸ್‌ವಾದ–ಲೆನಿನ್‌ವಾದದಿಂದ ಕಟ್ಟಲಾಗುತ್ತದೆ ಎಂದು ಸಿಪಿಸಿ ಪುನರುಚ್ಚರಿಸಿದೆ.

1.59 ಸಿಪಿಸಿಯ ಮಹಾಧಿವೇಶನ ಒಂದು ಹೊಸ ಪರಿಕಲ್ಪನೆಯನ್ನು ವಿವರಿಸಿದೆ. "ಹೊಸ ಯುಗಕ್ಕೆ ಚೀನೀಯ ಗುಣಲಕ್ಷಣಗಳೊಂದಿಗೆ ಸಮಾಜವಾದದ ಬಗ್ಗೆ ಚಿಂತನೆ", "ಹೊಸ ಯುಗದಲ್ಲಿ ಅಸಮತೋಲಿತ ಮತ್ತು ಅಸಮರ್ಪಕ ಬೆಳವಣಿಗೆ ಹಾಗೂ ಜನರ ಜೀವನದಲ್ಲಿ ಉತ್ತಮ ಜೀವನಕ್ಕಾಗಿ ಬೆಳೆಯುತ್ತಿರುವ ಅಗತ್ಯತೆಗಳ ನಡುವಿನ ವೈರುಧ್ಯವೇ, ಚೀನಾದ ಸಮಾಜ ಎದುರಿಸುತ್ತಿರುವ ಪ್ರಧಾನ ವೈರುಧ್ಯ" ಎಂದು ಕಾಂಗ್ರೇಸ್ ಪುನರುಚ್ಚರಿಸಿದೆ. ಹಾಗಾಗಿ ನಾವು ನಮ್ಮ ಜನ–ಕೇಂದ್ರಿತ ಅಭಿವೃದ್ಧಿಯ ತತ್ವಗಳಿಗೆ ಬದ್ಧರಾಗಿ ಮುಂದುವರಿಯಬೇಕು ಮತ್ತು ಎಲ್ಲರಿಗೂ ಉತ್ತಮ ಸರ್ವತೋಮುಖ ಮಾನವ ಅಭಿವೃದ್ಧಿ ಮತ್ತು ಎಲ್ಲರಿಗೂ ಸಾರ್ವತ್ರಿಕ ಸಮೃದ್ಧಿಯನ್ನು ಪ್ರೋತ್ಸಾಹಿಸಲು ಕೆಲಸ ಮಾಡಬೇಕು.

1.60 ತನ್ನ ಸುಧಾರಣೆಯ ಪಥದಲ್ಲಿ ಮುಂದುವರಿಯಲು ಮಹಾಧಿವೇಶನ ನಿರ್ಧರಿಸಿತು. ಹಾಗೆಯೇ ಅದರೊಂದಿಗೆ, ಅಸಮತೋಲಿತ ಮತ್ತು ಅಸಮರ್ಪಕ ಅಭಿವೃದ್ಧಿಯಿಂದ ಉಂಟಾದ ತೀವ್ರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅಭಿವೃದ್ಧಿಯ ಗುಣಮಟ್ಟವನ್ನು ಸುಧಾರಿಸಲು ಗಮನಹರಿಸಲೂ ನಿರ್ಧರಿಸಿತು. ಈ ಅವಧಿಯಲ್ಲಿ ಸಿಪಿಸಿ ಭ್ರಷ್ಟಾಚಾರವನ್ನು ದೊಡ್ಡ ರೀತಿಯಲ್ಲಿ ಎದುರಿಸಲು ಕ್ರಮ ಕೈಗೊಂಡಿದೆ. ಬಂಧಿತರಾಗಿ ಶಿಕ್ಷಿತರಾದವರಲ್ಲಿ ಕೆಲವು ಉನ್ನತ ಮಟ್ಟದ ನಾಯಕರನ್ನೂ ಸಹ ಇದ್ದರು ಎಂದು ಗಮನಿಸಬೇಕು. ಈ ಹೋರಾಟವನ್ನು ಮುಂದುವರಿಸಲು ಪಕ್ಷದ ಮಹಾಧಿವೇಶನ ನಿರ್ಧರಿಸಿತು, ಮತ್ತು ಅಂತಹ ಎಲ್ಲಾ ಕೆಡುಕುಗಳನ್ನು ಸಂಪೂರ್ಣವಾಗಿ ಶುದ್ಧೀಕರಿಸುವ ಮೂಲಕ ಪಕ್ಷವನ್ನು ಬಲಪಡಿಸುವ ನಿರ್ಧಾರ ಕೈಗೊಂಡಿತು.

**1.61 ವಿಯೆಟ್ನಾಂ** : ವಿಯೆಟ್ನಾಂ ಈ ಪ್ರದೇಶದಲ್ಲಿ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರಗಳಲ್ಲಿ ಒಂದಾಗಿ ತನ್ನ ಪಥದಲ್ಲಿ ಮುಂದುವರೆದಿದೆ. ಮತ್ತು ಈ ಅವಧಿಯಲ್ಲಿ ಇದರ ಆರ್ಥಿಕ ಬೆಳವಣಿಗೆಯ ಸರಾಸರಿ ದರ ಶೇ. 6.3ರಷ್ಟು. ಈ ನಡುವೆಯೂ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮದಿಂದಾಗಿ, 2020ರ ಹೊತ್ತಿಗೆ ದೇಶವನ್ನು ಆಧುನಿಕ ಕೈಗಾರಿಕೀಕೃತ ರಾಷ್ಟ್ರವನ್ನಾಗಿ ಮಾಡುತ್ತೇವೆಂದು, ತಾವೆ ನಿರ್ಧರಿಸಿಕೊಂಡಿದ್ದ ಕೆಲವು ಗುರಿಗಳನ್ನು ತಲುಪಲು ವಿಫಲವಾಗಿದೆ. ವಿಯೆಟ್ನಾಂನ ಕಮ್ಯೂನಿಸ್ಟ್ ಪಕ್ಷದ 12ನೇ ಮಹಾಧಿವೇಶನದಲ್ಲಿ ಕೈಗಾರೀಕರಣ ಸ್ಥಾಪನೆಯ ಹಾದಿಯಲ್ಲಿ ದೇಶವನ್ನು ಮುನ್ನಡೆಸಿದ್ದ ಡೊಯಿ–ಮೊಯಿ (ನವೀಕರಣದ) ನೀತಿಯನ್ನು ಮುಂದುವರಿಸಲು ನಿರ್ಧರಿಸಿದೆ. "ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದದ ಗುರಿಯೊಂದಿಗೆ ಸ್ಥಿರವಾಗಿ ಉಳಿಯುವುದು ಮತ್ತು ಮಾರ್ಕ್ಸ್‌ವಾದ–ಲೆನಿನ್‌ವಾದ ಮತ್ತು ಹೋ ಚಿಮಿನ್‌ನನ ಚಿಂತನೆಯನ್ನು ಸೃಜನಾತ್ಮಕವಾಗಿ ಅನ್ವಯಿಸುವ ಮತ್ತು ಅಭಿವೃದ್ಧಿ ಪಡಿಸಲು ಮಾರ್ಗಗಳನ್ನು ಮುಂದುವರಿಸುವುದು ಅತ್ಯಗತ್ಯ" ಎಂದು ಮಹಾಧಿವೇಶನ ತೀರ್ಮಾನಿಸಿದೆ.

1.62 ಸಿಪಿವಿಯ 12ನೇ ಮಹಾಧಿವೇಶನ ನವೀಕೃತ ಡೊಯಿ–ಮೊಯಿ ನೀತಿಗಳ ಅನುಷ್ಠಾನದ ಸಂದರ್ಭದಲ್ಲಿ ಕೆಲವು ತೊಂದರೆಗಳನ್ನು ಮತ್ತು ಸವಾಲುಗಳನ್ನು ಗುರುತಿಸಿದೆ. ಈ ಅವಧಿಯಲ್ಲಿ ಜನರ ತಲಾ ಆದಾಯವು ಹೆಚ್ಚಾಗಿದ್ದರೂ ಸಹ, ನಗರಗಳು ಮತ್ತು ದೂರದ ಹಿತ್ತಲ ಪ್ರದೇಶಗಳ ನಡುವಿನ ಅಸಮಾನತೆ ಹೆಚ್ಚಿದೆ. ಪಕ್ಷವನ್ನು ಬಲಪಡಿಸುವ ಮೂಲಕ ವಿಯೆಟ್ನಾಮಿನ ವಾಸ್ತವಕ್ಕೆ ಅನುಗುಣವಾಗಿ ಮಾರ್ಕ್ಸ್‌ವಾದ–ಲೆನಿನ್‌ವಾದ ಮತ್ತು ಹೋ–ಚಿ–ಮಿನ್ ಚಿಂತನೆಯನ್ನು ಸೃಜನಾತ್ಮಕವಾಗಿ ಅನ್ವಯಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕಾಂಗ್ರೆಸ್ ಅಂತಿಮವಾಗಿ ನಿರ್ಧರಿಸಿತು.

1.63 ಇತ್ತೀಚಿನ ಅವಧಿಯಲ್ಲಿ ಸಿಪಿಸಿ ಮತ್ತು ಸಿಪಿವಿ ಎರಡೂ ಉನ್ನತ ಮಟ್ಟದ ನಿಯೋಗಗಳನ್ನು ವಿನಿಮಯ ಮಾಡಿಕೊಂಡಿವೆ. ಹಾಗೆಯೇ, ಮಾತುಕತೆಗಳ ಮೂಲಕ ಎರಡು ದೇಶಗಳ ನಡುವಿನ ವಿವಾದಾಸ್ಪದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಿರ್ಧರಿಸಿವೆ. ಇದು ಸಕಾರಾತ್ಮಕ ಬೆಳವಣಿಗೆ ಮತ್ತು ಇದರಿಂದ ಈ ಎರಡು ದೇಶಗಳ ಮತ್ತು ದಕ್ಷಿಣ ಚೀನಾ ಸಮುದ್ರದ ನೆರೆಹೊರೆಯ ದೇಶಗಳ ನಡುವಿನ ಉದ್ವಿಗ್ನತೆಯನ್ನು ತಿಳಿಗೊಳಿಸಲು ಸಹಾಯವಾಗುತ್ತದೆ.

**1.64 ಕ್ಯೂಬಾ** : ಯುಎಸ್. ಹೇರಿದ ಅನ್ಯಾಯದ ಮತ್ತು ಅಮಾನವೀಯ ಆರ್ಥಿಕ ದಿಗ್ಬಂದನದಿಂದಾಗಿ, ಕ್ಯೂಬಾದ ಆರ್ಥಿಕತೆಯು ಬಳಲುವುದು ಮುಂದುವರಿದಿದೆ. ಡೋನಾಲ್ಡ್ ಟ್ರಂಪ್ ಎರಡು ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳನ್ನು ಪುನ:ಸ್ಥಾಪಿಸಲು ಉದ್ದೇಶದಿಂದ ಒಬಾಮಾ ಆಡಳಿತದಲ್ಲಿ ಪ್ರಾರಂಭಿಸಿದ ಅನೇಕ ಸಕಾರಾತ್ಮಕ ಕ್ರಮಗಳನ್ನು ರದ್ದುಗೊಳಿಸಲು ಆರಂಭಿಸಿದ್ದು, ಹಾಗೆಯೇ ಆರ್ಥಿಕ ನಿರ್ಬಂಧವನ್ನು ತೀವ್ರಗೊಳಿಸುತ್ತಿದ್ದಾರೆ. ವೆನೆಜುವೆಲಾ ಮುಂತಾದ ಅನೇಕ ಲ್ಯಾಟಿನ್ ಅಮೆರಿಕಾದ ದೇಶಗಳು ಎದುರಿಸುತ್ತಿರುವ ಆರ್ಥಿಕ ತೊಂದರೆಗಳು ಕ್ಯೂಬನ್ ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತವೆ. ಚಂಡಮಾರುತದಂತ ನೈಸರ್ಗಿಕ ವಿಕೋಪಗಳಿಗೆ ಆಗಾಗ ಮರುಕಳಿಸುತ್ತಿರುವುದೂ ಸಹ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಕ್ಯೂಬಾ ದೇಶ ಮತ್ತು ಅದರ ಕಮ್ಯುನಿಸ್ಟ್ ಪಕ್ಷ (ಪಿಸಿಸಿ) ಅವರ ಪೀಳಿಗೆಯ ಅಧಿಕಾರದ ವರ್ಗಾವಣೆಗೆ ಚಾಲನೆ ನೀಡಿದೆ. ರಾವುಲ್ ಕ್ಯಾಸ್ಟ್ರೋ ಅವರು 2018ರಲ್ಲಿ ನಿವೃತ್ತರಾಗಲಿದ್ದಾರೆ ಎಂದು ಪಿಸಿಸಿ ಘೋಷಿಸಿದೆ. ಇವರು ಅತ್ಯುನ್ನತ ನಾಯಕ ಫಿಡೆಲ್ ಕ್ಯಾಸ್ಟ್ರೋರವರ ನಿಧನದ ನಂತರ, ಉತ್ತರಾಧಿಕಾರಿಯಾಗಿದ್ದರು. ಈ ಎಲ್ಲಾ ತೊಂದರೆಗಳ ನಡುವೆಯೂ ಕ್ಯೂಬಾದ ಜನರು ಮಾತ್ರ ಪಕ್ಷದ ಹಿಂದೆ ಅಣಿನೆರೆಯುತ್ತಾ, ಸಮಾಜವಾದಿ ವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಮತ್ತು ಅದನ್ನು ಅಸ್ಥಿರಗೊಳಿಸುವ ಸಾಮ್ರಾಜ್ಯಶಾಹಿಯ ಎಲ್ಲಾ ರೀತಿಯ ಪ್ರಯತ್ನಗಳನ್ನು ದೃಢವಾಗಿ ವಿರೋಧಿಸಲು ಪಣ ತೊಟ್ಟಿದ್ದಾರೆ.

**1.65** ಪಿ.ಸಿ.ಸಿಯ 7ನೇ ಮಹಾಧಿವೇಶನ ಕ್ಯೂಬಾದಲ್ಲಿ ಸಮಾಜವಾದಿ ನಿರ್ಮಾಣ ಮತ್ತು ಆರ್ಥಿಕ ಅಭಿವೃದ್ಧಿಯ ಮಾರ್ಗವನ್ನು ವಿವರಿಸುವ ದಾಖಲೆಗಳನ್ನು ಚರ್ಚಿಸಿ ಅಳವಡಿಸಿಕೊಂಡಿದೆ. ಈ ದಾಖಲೆಗಳು, ಭವಿಷ್ಯದ ಹಾಗೂ ಸಮೃದ್ಧ ಮತ್ತು ಸಮರ್ಥ ಸಮಾಜವಾದಿ ಸಮಾಜದ ನಿರ್ಮಾಣಕ್ಕೆ ಮಾರ್ಗಸೂಚಿ. ಸಾರ್ವಜನಿಕ ಆಸ್ತಿ ಮತ್ತು ಸಾಮಾಜಿಕ ಸೇವೆಗಳಾದ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳ ಖಾಸಗೀಕರಣವನ್ನು ಪ್ರೋತ್ಸಾಹಿಸುವ ನವ ಉದಾರವಾದ ನೀತಿಗಳನ್ನು ಕ್ಯೂಬನ್ ಸಮಾಜವಾದದ ಅಡಿಯಲ್ಲಿ ಅನ್ವಯಿಸಲಾಗುವುದಿಲ್ಲ ಎಂದು ಮಹಾಧಿವೇಶನ ನಿರ್ಧರಿಸಿದೆ. ಮೂಲಭೂತ ಉತ್ಪಾದನೆಯ ಸಾಧನಗಳು ಎಲ್ಲ ಜನರ ಮಾಲಿಕತ್ವದಲ್ಲಿರುವುದು, ರಾಷ್ಟ್ರೀಯ ಆರ್ಥಿಕತೆಯ ಮುಖ್ಯ ರೂಪವಾಗಿ ಮುಂದುವರೆಯಲಿದೆ ಎಂದು ಪಿಸಿಸಿ ಪುನರುಚ್ಚರಿಸಿದೆ.

1.66 ಡಿ.ಪಿ.ಆರ್.ಕೆ: ಡಿಪಿಆರ್‌ಕೆ (ಡೆಮಾಕ್ರಟಿಕ್ ಪೀಪಲ್ಸ್ ರಿಪಬ್ಲಿಕ್ ಕೊರಿಯಾ )ಯು.ಎಸ್ ಬೆದರಿಕೆಗಳನ್ನು ಧಿಕ್ಕರಿಸಿ, ತನ್ನ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮವನ್ನು ಮುಂದುವರೆಸಿ, ಒಂದು ಪರಮಾಣು ಚಾಲಿತ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಿದೆ. ಯು.ಎಸ್. ಬೆಂಬಲಿತ ದಕ್ಷಿಣ ಕೊರಿಯಾದ ಎಂತಹದೇ ಮಿಲಿಟರಿ ದಾಳಿಯಿಂದ ಸ್ವತ: ರಕ್ಷಿಸಿಕೊಳ್ಳಲು ಇದು ಏಕೈಕ ಖಾತರಿಯಾಗಿದೆ ಎಂದು ಡಿಪಿಆರ್‌ಕೆಯ ತರ್ಕವಾಗಿದೆ. ಯು.ಎಸ್.ಎ ಯು ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ಕೊರಿಯಾದ ಪರ್ಯಾಯ ದ್ವೀಪದಲ್ಲಿ ಬಲಪಡಿಸುತ್ತಿದೆ. ಮತ್ತು ದಕ್ಷಿಣ ಕೊರಿಯಾದ ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ಸೇನಾ ಕಾರ್ಯಾಚರಣೆಗಳನ್ನು ನಿಯಮಿತವಾಗಿ ನಡೆಸುತ್ತಿದೆ. ಈ ಹಿಂದೆ ಅಮೆರಿಕಾವು ದಕ್ಷಿಣ ಕೊರಿಯಾದಲ್ಲಿ ಥಾಡ್ ನ್ಯೂಕ್ಲಿಯರ್ ಕ್ಷಿಪಣೆ ರಕ್ಷಣಾ ವ್ಯವಸ್ಥೆಯನ್ನು ಸ್ಥಾಪಿಸಿತ್ತು. ಇದು ಕೊರಿಯಾದ ಪರ್ಯಾಯ ದ್ವೀಪದಲ್ಲಿ ಮತ್ತಷ್ಟು ಬೆದರಿಕೆಯೊಡ್ಡಿದೆ. ಹಾಗೆಯೇ, ಅಮೆರಿಕದ ಈ ಕ್ರಮ ಚೀನಾಕ್ಕೂ ಬೆದರಿಕೆಯನ್ನು ಒಡ್ಡಿದೆ. ತನ್ನ ಕ್ಷಿಪಣಿ ಅಭಿವೃದ್ಧಿ ಇದಕ್ಕೆ ಪ್ರತಿಕ್ರಿಯೆಯಾಗಿದೆ ಎಂದು ಡಿಪಿಆರ್‌ಕೆ ಪ್ರತಿಪಾದಿಸುತ್ತದೆ.

1.67 ಡಿಪಿಆರ್‌ಕೆ ಯ ವಿರುದ್ಧ ಸುಮಾರು ಅರ್ಧ ಶತಮಾನದಿಂದ ಹೇರಿರುವ ಯು.ಎಸ್‌ನ ದಿಗ್ಬಂಧಗಳಿಂದಾಗಿ ಅದರ ಜನರ ಆಹಾರ ಮತ್ತು ಇತರೆ ಅಗತ್ಯಗಳನ್ನು ಒದಗಿಸುವವರಿಗೆ, ಪ್ರತಿಯಾಗಿ ಶ್ರೀಮಂತ ಖನಿಜ ಸಂಪನ್ಮೂಲಗಳನ್ನು ಮಾರಾಟ ಮಾಡುವ ಅಕಾಶವನ್ನು ತಪ್ಪಿಸಿದೆ. ಈ ಸಂದರ್ಭಗಳಲ್ಲಿ ಯು.ಎಸ್– ದಕ್ಷಿಣ ಕೊರಿಯಾ ಮಿಲಿಟರಿ ಅಕ್ಷದ, ಪ್ರಸ್ತುತ ಅಪಾಯದಿಂದ ರಕ್ಷಿಸಿಕೊಳ್ಳಲು, ಡಿಪಿಆರ್‌ಕೆ ತನ್ನ ರಕ್ಷಣಾ ಸನ್ನದ್ಧತೆಯನ್ನು ಬಲಪಡಿಸಲು ದೊಡ್ಡ ಪ್ರಮಾಣದ ಸಂಪನ್ಮೂಲಗಳನ್ನು ವ್ಯಯಿಸುತ್ತಿದೆ. ದಕ್ಷಿಣ ಕೊರಿಯಾದೊಂದಿಗೆ ಸಹಕಾರಕ್ಕಾಗಿ ಹೊಸ ಯೋಜನೆಗಳ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ. ಚಳಿಗಾಲದ ಒಲಂಪಿಕ್ಸ್‌ನಲ್ಲಿ ಇತ್ತೀಚೆಗೆ ಎರಡು ಕೊರಿಯಾಗಳ ಜಂಟಿ ಭಾಗವಹಿಸುವಿಕೆಯ ಘೋಷಣೆ, ಉತ್ತರ ಮತ್ತು ದಕ್ಷಿಣ ಕೊರಿಯಾಗಳ ನಡುವಿನ ಸಂಬಂಧಗಳಲ್ಲಿ ಸ್ವಾಗತಾರ್ಹ ಬೆಳವಣಿಗೆ.

**ನಮ್ಮ ನೆರೆಹೊರೆ ರಾಷ್ಟ್ರಗಳು**

**1.68 ಪಾಕಿಸ್ತಾನ** : ಇಸ್ಲಾಮಿಕ್ ಮೂಲಭೂತವಾದ ಮತ್ತು ಪಾಕಿಸ್ತಾನದ ಜನರ ನಡುವಿನ ಯುದ್ಧದಲ್ಲಿ ಅಸಂಖ್ಯಾತ ಭಯೋತ್ಪಾದಕ ದಾಳಿಗಳು ಮತ್ತು ಮುಗ್ಧ ಜನರ ಸಾವುಗಳು ಮುಂದುವರಿಯುತ್ತಿದೆ. ಆಫ್ಘಾನಿಸ್ತಾನದಿಂದ ಅಮೆರಿಕಾ ತನ್ನ ಮಿಲಿಟರಿ ಹಿಂತೆಗೆದುಕೊಳ್ಳುವುದಾಗಿ ಒಬಾಮಾ ಘೋಷಿಸಿದ್ದ ನಂತರ, ಮೂಲಭೂತವಾದಿಗಳ ಕಾರ್ಯಾಚರಣೆಗೆ ಹೆಚ್ಚು ಸಂಕೀರ್ಣ ಪರಿಸ್ಥಿತಿ ಉಂಟಾಯಿತು. ಅದಾಗ್ಯೂ, ಡೊನಾಲ್ಡ್ ಟ್ರಂಪ್ ಇದೀಗ ಯು.ಎಸ್ ನಿಯೋಜನೆಯನ್ನು ಬಲಪಡಿಸುವುದಾಗಿ ನಿರ್ಧರಿಸುವುದರಿಂದ, ಪಾಕಿಸ್ತಾನದಲ್ಲಿ ಇದು ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನೋಡಬೇಕಾಗಿದೆ. ಇತ್ತೀಚೆಗೆ, ಪಾಕಿಸ್ತಾನವು ವಿಶ್ವಸಂಸ್ಥೆಯಲ್ಲಿ, ಆಫ್ಘಾನಿಸ್ತಾನದ ಬಗ್ಗೆ ಅಂತರಾಷ್ಟ್ರೀಯವಾಗಿ ಮೇಲ್ವಿಚಾರಣೆಯಲ್ಲಿ ಮಾತುಕತೆ ಹಾಗೂ ಒಪ್ಪಂದಕ್ಕೆ ಕರೆ ನೀಡಿದೆ.

1.69 ರಾಜಕೀಯವಾಗಿ, ಪನಾಮ ಪೇಪರ್ಸ್ ನಲ್ಲಿ ಮಾಡಿದ ಭ್ರಷ್ಟಾಚಾರದಿಂದಾಗಿ ಅಧ್ಯಕ್ಷ ನವಾಜ್ ಶರೀಫ್‌ರವರ ಬಲವಂತದ ರಾಜೀನಾಮೆ ನಂತರ, ಸೇನಾ ಪ್ರಾಬಲ್ಯ ಮತ್ತಷ್ಟು ಹೆಚ್ಚಾಗಿದೆ. ಚೀನಾವನ್ನು ತಡೆಗಟ್ಟಲು ತನ್ನ ನೀತಿಗಳೊಂದಿಗೆ ದೃಢ ಮಿತ್ರ ರಾಷ್ಟ್ರವನ್ನಾಗಿ ಭಾರತವನ್ನು ಸೆಳೆದುಕೊಳ್ಳುವ ನಿಟ್ಟಿನಲ್ಲಿ ಯು.ಎಸ್.ಎ.ಯು ತನ್ನ ಪ್ರಯತ್ನಗಳನ್ನು ಮುಂದುವರೆಸುತ್ತಿದ್ದರೂ ಸಹ, ಅದು ಆಗೊಮ್ಮೆ ಈಗೊಮ್ಮೆ ಕೆಲವು ಪ್ರತಿಕೂಲವಾದ ಪ್ರತಿಕ್ರಿಯೆಗಳ ಹೊರತಾಗಿಯೂ, ಈಗಲೂ ಪಾಕಿಸ್ತಾನದೊಂದಿಗೆ ತನ್ನ ಸಂಬಂಧವನ್ನು ಕಾಪಾಡಿಕೊಳ್ಳುತ್ತಿದೆ. ಆದರೆ, ಪಾಕಿಸ್ತಾನದೊಂದಿಗೆ ಭಾರತದ ಸಂಬಂಧಗಳು ಮತ್ತಷ್ಟು ಹದಗೆಡುತ್ತಿದೆ. ಸೆಪ್ಟೆಂಬರ್ 2016ರ 'ಸರ್ಜಿಕಲ್ ಸ್ಟ್ರೈಕ್'ಗಳಿಂದ, ಗಣನೀಯ ಪ್ರಮಾಣದಲ್ಲಿ ಭಯೋತ್ಪಾದಕ ದಾಳಿಗಳಲ್ಲಿ ಯಾವುದೇ ಕಡಿತ ಕಂಡು ಬಂದಿಲ್ಲ. ಮೂರನೇ ಜಗತ್ತಿನ ದೇಶಗಳಲ್ಲಿನ ರಾಷ್ಟ್ರೀಯ ಭದ್ರತಾ ಸಲಹೆಗಾರರ ನಡುವಿನ ಸಭೆಗಳ ವರದಿಗಳು ಇದ್ದಾಗ್ಯೂ, ಎರಡೂ ದೇಶಗಳ ನಡುವಿನ ಮಾತುಕತೆಗಳು ಎಲ್ಲಾ ಹಂತಗಳಲ್ಲಿಯೂ ಅಧಿಕೃತವಾಗಿ ಅಮಾನತ್ತುಗೊಂಡಿವೆ. ಹಾಗೆಯೇ, ಸಂಬಂಧಗಳು ಸುಧಾರಿಸುವಲ್ಲಿ ಯಾವುದೇ ಪ್ರಗತಿ ತಕ್ಷಣದಲ್ಲಿ ಕಾಣಿಸುತ್ತಿಲ್ಲ. ಬಿಜೆಪಿ–ಆರ್.ಎಸ್.ಎಸ್. ಗಳ ರಾಷ್ಟ್ರೀಯ ನಿಲುವನ್ನು ಕ್ರೋಢೀಕರಿಸಲು, ಹಿಂದುತ್ವ ರಾಷ್ಟ್ರೀಯತೆಯ ಮತ್ತು ಕೋಮು ಧ್ರುವೀಕರಣದ ಆಯುಧಗಳನ್ನು, ಭಾರತ ಸರ್ಕಾರದ ಕಟುವಾದ ಪಾಕಿಸ್ತಾನ–ವಿರೋಧಿ ನಿಲುವು ಇನ್ನಷ್ಟು ಬಲಪಡಿಸುತ್ತದೆ.

**1.70 ಬಾಂಗ್ಲಾದೇಶ** : ಬಾಂಗ್ಲಾ ದೇಶದ ಚುನಾವಣೆಗಳು ಹತ್ತಿರವಾಗುತ್ತಿರುವಂತೆ, ಆ ದೇಶದಲ್ಲಿ ಮೂಲಭೂತವಾದಿ ದಾಳಿಗಳ ಭರಾಟೆ ಹೆಚ್ಚಾಗಿ ಬೆಳೆದಿದೆ. ಬಾಂಗ್ಲಾ ದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ ಅವರು 2017ರ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಸುದೀರ್ಘ ಕಾಲದ ನಂತರ ಬಾಂಗ್ಲಾದೇಶದ ಮುಖ್ಯಸ್ಥರು ದೇಶದ ಭೇಟಿ ಮಾಡಿದ್ದಾಗಿತ್ತು. ಆದಾಗ್ಯೂ, ಈ ಎರಡೂ ದೇಶಗಳು ಈ ಭೇಟಿಯನ್ನು ಯಶಸ್ಸು ಎಂದು ಹೇಳಿಕೊಂಡಿದ್ದರೂ ಸಹ, ತೀಸ್ತಾ ನದಿಯ ನೀರನ್ನು ಹಂಚಿಕೊಳ್ಳುವುದರ ಕುರಿತಾದ ಒಪ್ಪಂದ ಇನ್ನೂ ಸಮಸ್ಯೆಯಲ್ಲಿ ಸಿಲುಕಿಕೊಂಡಿರುವುದು ಕಂಡು ಬಂದಿದೆ. ಯುಪಿಎ ಸರ್ಕಾರ ಮತ್ತು ಶೇಖ್ ಹಸೀನಾ ಸರ್ಕಾರದ ನಡುವಿನ ಹಿಂದಿನ ಕರಡು ಒಪ್ಪಂದವನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬಹಿರಂಗವಾಗಿಯೇ ವಿರೋಧಿಸಿದ್ದರು. ಆದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಪರಿಹರಿಸಲು ಯಾವುದೇ ಮಹತ್ವದ ಪ್ರಯತ್ನಗಳನ್ನು ಮಾಡಲಿಲ್ಲ. ಭಾರತೀಯ ನಾಗರೀಕತ್ವ ಕಾಯಿದೆಗೆ, ಪ್ರಸ್ತಾಪಿಸಿದ ತಿದ್ದುಪಡಿಗಳಲ್ಲಿ ಬಿಜೆಪಿ

ಸರ್ಕಾರವು, ಭಾರತಕ್ಕೆ ಆಗಮಿಸಿರುವ ಹಿಂದೂ ನಿರಾಶ್ರೀಕರಿಗೆ ಮಾತ್ರ ಪೌರತ್ವವನ್ನು ನೀಡಿದೆ. ಆದರೆ ಇದೇ ಬಿಜೆಪಿ ಸರ್ಕಾರವು ಮುಸ್ಲಿಂ ನಿರಾಶ್ರಿತರಿಗೆ ಪೌರತ್ವನ್ನು ನಿರಾಕರಿಸುವ ಮೂಲಕ ಈ ಎರಡೂ ದೇಶಗಳ ನಡುವಿನ ಸಂಬಂಧಗಳಿಗೆ ಗಂಭೀರ ಸಮಸ್ಯೆ ಸೃಷ್ಟಿಸಿದೆ. ಈ ಮೂಲಕ ಭಾರತದಲ್ಲಿನ ಹಿಂದುತ್ವ ಕೋಮುವಾದವು, ಮುಸ್ಲಿಂ ಮೂಲಭೂತವಾದವನ್ನು ಬಾಂಗ್ಲಾ ದೇಶದಲ್ಲಿ ಬಲಪಡಿಸಲು ಅನುವು ಮಾಡಿಕೊಡುತ್ತಿದೆ. 2018ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಈ ವಿಷಯಗಳು ಭಾರತ ವಿರೋಧಿ ಅಭಿಯಾನವನ್ನು ಬಾಂಗ್ಲಾ ದೇಶದಲ್ಲಿ ಉಂಟು ಮಾಡುವ ಸಾಧ್ಯತೆ ಇದ್ದು, ಇದರ ಪರಿಣಾಮದಿಂದಾಗಿ, ಉಭಯ ದೇಶಗಳ ಸ್ನೇಹ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

1.71 ರೋಹಿಂಗ್ಯಾ ಬಿಕ್ಕಟ್ಟಿನಲ್ಲಿ ಮತ್ತು ಬೃಹತ್ ನಿರಾಶ್ರಿತರ ಒಳಹರಿವು ಬಾಂಗ್ಲಾದೇಶಕ್ಕೆ ಬರುತ್ತಿರುವಾಗ, ಮ್ಯಾನ್ಮಾರ್ ಜೊತೆ ಮಧ್ಯಸ್ತಿಕೆ ವಹಿಸಲು ಬಾಂಗ್ಲಾದೇಶದ ಕೋರಿಕೆಗೆ, ಭಾರತ ನಿರುತ್ಸಾಹ ತೋರಿತ್ತು. ಇತ್ತೀಚೆಗೆ ಚೀನಾ ಈ ಮಾನವೀಯ ಬಿಕ್ಕಟ್ಟಿನ ಪರಿಹಾರಕ್ಕೆ ಸಂಬಂಧಿಸಿದಂತೆ, ಮೂರು ಹಂತದ ಯೋಜನೆಯನ್ನು ಮುಂದಿಟ್ಟಿದೆ. (ಎ) ಕದನ ವಿರಾಮವನ್ನು ಸಾಧಿಸುವುದು (ಈಗಾಗಲೇ ಇದು ಜಾರಿಯಲ್ಲಿದೆ), (ಬಿ) ಮ್ಯಾನ್ಮಾರ್ ಮತ್ತು ಬಾಂಗ್ಲಾ ದೇಶ ಎರಡೂ ಸಂವಹನ ಮಾರ್ಗಗಳನ್ನು ತೆರೆಯಬೇಕು ಹಾಗೂ ನಿರಾಶ್ರಿತರ ವಾಪಾಸಾತಿಗೆ ಶಾಂತಿಯುತ ಪರಿಹಾರಕ್ಕಾಗೆ ಚರ್ಚೆಗಳನ್ನು ಮುಂದುವರಿಸಬೇಕು ಮತ್ತು (ಸಿ) ಈ ಸಂಘರ್ಷದ ಮೂಲ ಕಾರಣವಾದ ರಾಖೈನ್ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಖಾತರಿಪಡಿಸುವ ನಿಟ್ಟಿನಲ್ಲಿ ದೀರ್ಘಕಾಲದ ಪರಿಹಾರವನ್ನು ಕಂಡು ಕೊಳ್ಳುವುದು. ಇತ್ತೀಚೆಗೆ ಬಾಂಗ್ಲಾ ದೇಶಕ್ಕೆ ಬೇಟಿ ನೀಡಿದ್ದ ಚೀನಾದ ವಿದೇಶಾಂಗ ಸಚಿವರ ಈ ಯೋಜನೆಯನ್ನು ಬಾಂಗ್ಲಾ ದೇಶ ಸ್ವಾಗತಿಸಿದೆ. ಚೀನಾದ ಒನ ಬೆಲ್ಟ್, ಒನ್ ರೋಡ್ ಉಪಕ್ರಮದಲ್ಲಿ ಬಾಂಗ್ಲಾದೇಶ ಸೇರ್ಪಡೆಗೊಂಡಿದ್ದು, ದಕ್ಷಿಣ ಏಷ್ಯಾದಲ್ಲಿ ಮೊದಲ ಬಾರಿಗೆ ಅಂತರ–ರಾಜ್ಯ ವಿವಾದವನ್ನು ಪರಿಹರಿಸಲು ಚೀನಾದ ರಾಜತಾಂತ್ರಿಕ ಕ್ರಮವನ್ನು ಬಾಂಗ್ಲಾದೇಶವು ಸ್ವಾಗತಿಸಿದೆ.

**1.72 ನೇಪಾಳ**: ದೀರ್ಘಾವಧಿಯ ರಾಜಕೀಯ ಅನಿಶ್ಚಿತತೆ ಮತ್ತು ಸರ್ಕಾರಗಳ ನಿರಂತರ ಬದಲಾವಣೆಗಳ ನಂತರ, ಇದೀಗ ನೇಪಾಳವು ಕಳೆದ ನವೆಂಬರ್ 2017ರಲ್ಲಿ ರಿಪಬ್ಲಿಕನ್ ಸಂವಿಧಾನವನ್ನು ಘೋಷಿಸಿಕೊಂಡ ನಂತರ, ಅದರಡಿಯಲ್ಲಿ ಚುನಾವಣೆಯನ್ನು ನಡೆಸಿತ್ತು.

1.73 ನೇಪಾಳದ ಚುನಾವಣೆಯಲ್ಲಿ ಸ್ಪರ್ಧಿಸಲು, ಎರಡು ಕಮ್ಯುನಿಸ್ಟ್ ಪಕ್ಷಗಳು ಅಂದರೆ, ಕಮ್ಯೂನಿಸ್ಟ್ ಪಾರ್ಟಿ ಆಫ್ ನೇಪಾಳ (ಯು.ಎಂ.ಎಲ್) ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ನೇಪಾಳ (ಎಂ.ಸಿ) ಮೈತ್ರಿಕೂಟ ರಚಿಸಲು ನಿರ್ಧರಿಸಿದ್ದು, ಇತ್ತೀಚೆಗೆ ನೇಪಾಳದಲ್ಲಿ ನಡೆದ ಮಹತ್ವದ ಹಾಗೆಯೇ ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಈ ಕಮ್ಯೂನಿಸ್ಟ್ ಮೈತ್ರಿಕೂಟ ಚುನಾವಣೆಗಳಲ್ಲಿ ಪ್ರಮುಖ ಗೆಲುವು ಸಾಧಿಸಿದೆ ಮತ್ತು ಫೆಡರಲ್ ಸಂಸತ್ತಿನಲ್ಲಿ ಸುಮಾರು 2/3 ರಷ್ಟು ಬಹುಮತವನ್ನು ಗಳಿಸಿವೆ. ಏಳು ಪ್ರಾಂತೀಯ ಶಾಸನ ಸಭೆಗಳ ಪೈಕಿ, ಆರರಲ್ಲಿ ಈ ಕಮ್ಯುನಿಸ್ಟ್ ಮೈತ್ರಿಕೂಟ ಬಹುಮತವನ್ನು ಗಳಿಸಿದೆ. ಈ ಫಲಿತಾಂಶಗಳು ನೇಪಾಳದ ರಾಜಕೀಯ ಚುನಾವಣಾ ಅವಧಿಯಲ್ಲಿ ಸ್ಥಿರತೆಯ ನೂತನ ಆರಂಭದ ವಿಶ್ವಾಸವನ್ನು ಮೂಡಿಸಿವೆ. ನೇಪಾಳ ಗಣರಾಜ್ಯದ ಜಾತ್ಯಾತೀತ ಪ್ರಜಾಪ್ರಭುತ್ವದ ಪಾತ್ರವನ್ನು ಕ್ರೋಢೀಕರಿಸುವ ನೇಪಾಳದ ಪ್ರಗತಿ ದಿಕ್ಕಿಗೆ ಮಾತ್ರವಲ್ಲದೆ, ದಕ್ಷಿಣ ಏಷ್ಯಾದಲ್ಲಿ ಸ್ಥಿರತೆ ಮತ್ತು ದೀರ್ಘಕಾಲಿಕ ಶಾಂತಿಯ ಸ್ಥಾಪನೆಗೆ ಪ್ರಭಾವ ಬೀರುತ್ತದೆ. ಸಿಪಿಎನ್(ಯುಎಂಎಲ್) ಮತ್ತು ಸಿಪಿಎನ್ (ಎಂಸಿ) ಈ ಎರಡೂ ಕಮ್ಯುನಿಸ್ಟ್ ಪಕ್ಷಗಳು ಆದಷ್ಟು ಶೀಘ್ರವಾಗಿ, ವಿಲೀನಗೊಂಡು ಒಂದೇ ಕಮ್ಯುನಿಸ್ಟ್ ಪಕ್ಷವಾಗಿ ಹೊರಹೊಮ್ಮಲು ನಿರ್ಧರಿಸಿರುವುದು, ಒಂದು ಮಹತ್ವಪೂರ್ಣ ಬೆಳವಣಿಗೆಯಾಗಿದೆ.

**1.74 ಶ್ರೀಲಂಕಾ** : ಶ್ರೀಲಂಕಾದಲ್ಲಿನ ಎಸ್.ಎಸ್.ಎಫ್.ಪಿ ಮತ್ತು ಯು.ಎನ್.ಪಿ ನಡುವಿನ ಸಮ್ಮಿಶ್ರ ಸರ್ಕಾರವು, ಪ್ರಸ್ತುತ ಹೊಸ ಕರಡು ಸಂವಿಧಾನ ರೂಪಿಸಲು ಕಾರ್ಯನಿರತವಾಗಿವೆ. ಇದರಿಂದ ದೀರ್ಘಕಾಲದ ತಮಿಳು ಪ್ರಶ್ನೆಗೆ, ಒಂದು ರಾಜಕೀಯ ಇತ್ಯರ್ಥ ಒದಗಿಸಲು ಸಾಧ್ಯವಾಗುತ್ತದೆ. ಶ್ರೀಲಂಕಾದ ಐಕ್ಯತೆಗೆ ಪೂರಕವಾದ, ತಮಿಳು ಭಾಷಿಕ ಪ್ರದೇಶಗಳಿಗೆ ಗರಿಷ್ಠ ಸ್ವಾಯುತ್ತತೆ ನೀಡುವ ನಿಟ್ಟಿನಲ್ಲಿ ಈ ಪ್ರಯತ್ನಗಳು ಯಶಸ್ವಿಯಾಗಬಹುದೆಂದು ಆಶಿಸಲಾಗಿದೆ. ಇತ್ತೀಚೆಗೆ ಶ್ರೀಲಂಕಾದ ಪ್ರಧಾನಿ ರಣಿಲ್ ವಿಕ್ರೆಮಿಸಿಂಗೆ ಅವರು ಭಾರತಕ್ಕೆ ಬೇಟಿ ಕೊಟ್ಟಿದ್ದಾಗ, ಇದರ ಕುರಿತಂತೆ ವ್ಯಾಪಕ ಮಾತುಕತೆ ನಡೆಸಿದ್ದರು.

**1.75 ಭೂತಾನ್** : ಇತ್ತೀಚೆಗೆ ಭಾರತ–ಚೀನಾ 'ದೊಕ್ಲಾಮ್' ವಿಚಾರದಲ್ಲಿ ಎದುರಾಳಿಗಳಾಗಿ ನಿಂತ್ತಿದ್ದರು. ಅಂತಿಮವಾಗಿ ಎರಡೂ ಕಡೆಗಳಲ್ಲಿ ವಿಜಯ ತಮ್ಮದಾಯಿತು ಎಂಬ ಘೋಷಣೆಗಳ ಮೂಲಕ ಸಮಸ್ಯೆ ಪರಿಹರಿಸಲಾಯಿತು. ವಿವಾದವು ಭೂತಾನ್ ಮತ್ತು ಚೀನಾವು ತಮ್ಮದೆಂಬ ಭೂಮಿಯ ಹಕ್ಕಿನ ಸುತ್ತಾ ಕೇಂದ್ರೀಕೃತವಾಗಿತ್ತು. ಈ ವಿಷಯದಲ್ಲಿ ಭೂತಾನ್ ವಾಸ್ತವಿಕವಾಗಿ ತಟಸ್ಥ ನಿಲುವನ್ನು ತಾಳಿತ್ತು. ಭೂತಾನ್ ಇತ್ತೀಚೆಗೆ ಬಾಂಗ್ಲಾದೇಶದೊಂದಿಗೆ 'ಎರಡು ತೆರಿಗೆ ತಡೆಯುವ' (ಡಬಲ್ ಟ್ಯಾಕ್ಸೇಶನ್ ಅವಾಯ್ಡನ್ಸ್) ಒಪ್ಪಂದಕ್ಕೆ ಸಹಿ ಹಾಕಿತ್ತು. ಭಾರತವು ಕೂಡಾ ಬಿಟ್ಟರೆ ಸಾರ್ಕ್ ದೇಶಗಳಲ್ಲಿ ಭೂತಾನ ಮಾತ್ರ ಚೀನಾದ 'ಒನ್ ಬೆಲ್ಟ್ ಒನ್ ರೋಡ್' ಉಪಕ್ರಮದಲ್ಲಿ ಸೇರದ ಏಕೈಕ ರಾಷ್ಟ್ರ. ಮಿಕ್ಕೆಲ್ಲಾ ದೇಶಗಳು 'ಒಬೊರೊ' ಉಪಕ್ರಮಕ್ಕೆ ಸೇರಿರುವುದರಿಂದ, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಚೀನಾದ ಸಂಪನ್ಮೂಲಗಳ ಹೆಚ್ಚಿನ ಹರಿವನ್ನು ನಿರೀಕ್ಷಿಸುತ್ತಿದ್ದಾರೆ ಹಾಗೂ ಭಾರತವು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವುದು, ಭವಿಷ್ಯದಲ್ಲಿ ನಮ್ಮ ನೆರೆಹೊರೆಯ ಸಂಬಂಧಗಳು ಸಂಕೀರ್ಣಗೊಳ್ಳುವ ಸಾಧ್ಯತೆಗಳಿವೆ.

**1.76 ಮಾಲ್ಡೀವ್ಸ್** : ಮಾಲ್ಡೀವ್ಸ್‌ನಲ್ಲಿ ಗಂಭೀರ ಬೆಳವಣಿಗೆಗಳು ಉಂಟಾಗಿವೆ. ಮಾಲ್ಡೀವ್ಸ್‌ನಲ್ಲಿ ಗಡಿಪಾರು ಮಾಡಿದ್ದ ಮಾಜಿ ಅಧ್ಯಕ್ಷ ಮೊಹಮದ್ ನಶೀದ್ ಅವರನ್ನು 2015ರ ಭಯೋತ್ಪಾದನೆ ಆರೋಪದ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಅವರನ್ನು ಬಿಡುಗಡೆ ಮಾಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ ಹಾಗೂ 12 ಮಂದಿ ಸಂಸತ್ತಿನ ಸದಸ್ಯರನ್ನು ಕೂಡಾ ಮರುಸ್ಥಾಪಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಮಾಲ್ಡೀವಿಯನ್ ಅಧ್ಯಕ್ಷ ಅಬ್ದುಲಾ ಯಮೀನ್ ಸುಪ್ರೀಂ ಕೋರ್ಟಿನ ಈ ಆದೇಶವನ್ನು ಪಾಲಿಸಲು ನಿರಾಕರಿಸಿದ್ದಾರೆ. ಹಾಗೆಯೇ, ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಇದು ವ್ಯಾಪಕ ಪ್ರತಿಭಟನೆಗೆ ಮತ್ತು ಅನಿಶ್ಚಿತತೆಗೆ ಕಾರಣವಾಗಿದೆ. ಸಾರ್ಕ್‌ಗೆ ಸೇರಿದ ಒಂದು ರಾಷ್ಟ್ರದಲ್ಲಿ ಈ ಬೆಳವಣಿಗೆಗಳನ್ನು ನಿಕಟವಾಗಿ ಗಮನಿಸಬೇಕಾಗಿದೆ.

**ಕಮ್ಯೂನಿಸ್ಟ್ ಸೌಹಾರ್ದತೆ**

1.77 ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಅಂತರರಾಷ್ಟ್ರೀಯ ಸಭೆ ವಾರ್ಷಿಕವಾಗಿ ನಡೆಯುತ್ತಿದೆ. ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ನೆನೆಪಿಗಾಗಿ 2017ರಲ್ಲಿ ರಷ್ಯಾದಲ್ಲಿ ನಡೆದ ಸಮಾರಂಭವು ಈ ಅವಧಿಯಲ್ಲಿ ಪ್ರಮುಖವಾಗಿತ್ತು. ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಅನೇಕ ರಾಷ್ಟ್ರಗಳಲ್ಲಿ ಬೆಳೆಯುತ್ತಿರುವ ಜನಪ್ರಿಯ ಪ್ರತಿಭಟನೆಗಳನ್ನು ನೋಡಬಹುದು. ಈ ಹಿಂದೆ ಗುರುತಿಸಿದಂತೆ, ಜನರ ಹೆಚ್ಚುತ್ತಿರುವ ಅತೃಪ್ತಿಗಳನ್ನು ಸಜ್ಜುಗೊಳಿಸುವ ಮತ್ತು ಬಂಡವಾಳಶಾಹಿ ಆಳ್ವಿಕೆಯ ವಿರುದ್ಧ ಕಾರ್ಮಿಕವರ್ಗದ ಮುಂಚೂಣಿಯಲ್ಲಿ ದಾಳಿಗಳನ್ನು ಮಾಡುವ ಮೂಲಕ, ವರ್ಗ ಹೋರಾಟಗಳ ಮೊನಚನ್ನು ಹೆಚ್ಚಿಸಿ, ಕಮ್ಯೂನಿಸ್ಟ್ ಮತ್ತು ಎಡಪಕ್ಷಗಳು ಬಂಡವಾಳಶಾಹಿಗೆ ಎದುರಾಗಿ ರಾಜಕೀಯ ಪರ್ಯಾಯವನ್ನು ರೂಪಿಸಿ ಬಲಪಡಿಸದೆ, ಈ ದಯೆಯಿಲ್ಲದ ಶೋಷಣೆಯ ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಕೊನೆಗಾಣಿಸಲು ಸಾಧ್ಯವಿಲ್ಲ ಎಂಬ ಅಂಶ ಸ್ಪಷ್ಟಗೊಂಡಿದೆ.

1.78 ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ನಿಶ್ಚಿತ ಭಾಗವಾಗಿರುವ ಸಿಪಿಐ(ಎಂ), ಈ ಜಾಗತಿಕ ಹೋರಾಟಕ್ಕೆ ಭಾರತದಲ್ಲಿ ತನ್ನನ್ನು ಬಲಪಡಿಸಿಕೊಳ್ಳುವ ಮೂಲಕ ತನ್ನ ಕೊಡುಗೆ ನೀಡಬೇಕು ಮತ್ತು ಈ ದಾಳಿಗಳ ಆರ್ಥಿಕ, ರಾಜಕೀಯ ಹಾಗೂ ಇನ್ನಿತರೆ ರೂಪಗಳ ವಿರುದ್ಧ, ಭಾರತದ ಜನತೆಯ ಹೋರಾಟಗಳನ್ನು ವಿಸ್ತರಿಸಲು ಮತು ಬಲಪಡಿಸಲು ತನ್ನ ಎಲ್ಲಾ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

**ಸಾಮ್ರಾಜ್ಯಶಾಹಿ–ವಿರೋಧಿ ಐಕ್ಯತೆ ಬಲಪಡಿಸಿ**

1.79 ಯು.ಎಸ್. ಸಾಮ್ರಾಜ್ಯಶಾಹಿಗೆ ಬಿಜೆಪಿ ಸರ್ಕಾರದ ವಿಪರೀತ ಅಸಹ್ಯಕರ ಶರಣಾಗತಿಯ ಮತ್ತು ಭಾರತವನ್ನು ಯು.ಎಸ್. ಸಾಮ್ರಾಜ್ಯಶಾಹಿಯ ಅಧೀನ ವ್ಯೂಹಾತ್ಮಕ ಸಹಚರ ರಾಷ್ಟ್ರದ ಮಟ್ಟಕ್ಕೆ ಇಳಿಸುವುದರ ವಿರುದ್ಧ, ಭಾರತೀಯ ಜನತೆಯ ಮಧ್ಯೆ ಸಿಪಿಐ(ಎಂ) ತೀವ್ರ ಅಭಿಯಾನ ನಡೆಸುತ್ತದೆ. ಆರ್ಥಿಕ, ಕೌಶಲ್ಯ, ರಕ್ಷಣಾ ಮತ್ತು ವಿದೇಶಿ ನೀತಿಗಳು ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಈ ಅಧೀನತೆಯ ರೂಪಗಳನ್ನು ಸಿಪಿಐ(ಎಂ) ವಿರೋಧಿಸುತ್ತದೆ.

1.80 ಇಸ್ರೇಲ್ ಅತಿಕ್ರಮಣದ ವಿರುದ್ಧ ತಮ್ಮ ತಾಯ್ನಾಡಿನ ಹಕ್ಕಿಗಾಗಿ ಹೋರಾಡುತ್ತಿರುವ ಪ್ಯಾಲೇಸ್ತೇನ್ ಜನರ ಹೋರಾಟಕ್ಕೆ ಮತ್ತು ದೀರ್ಘಕಾಲ ಅದಕ್ಕೆ ನಿರಾಕರಿಸಲಾಗಿರುವ ತಾಯ್ನಾಡು ಹೊಂದುವ ಹಕ್ಕನ್ನು ಸಾಕಾರಗೊಳಿಸುವಲ್ಲಿ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲವನ್ನು ಸಾರುತ್ತದೆ

1.81 ಸಿಪಿಐ(ಎಂ) ಈಗಿನ ಬಿಜೆಪಿ ಸರಕಾರವು ಪ್ರಸ್ತುತಪಡಿಸುತ್ತಿರುವ ಯು.ಎಸ್.–ಇಸ್ರೇಲ್–ಇಂಡಿಯಾ ಶಾಮೀಲು ನೀತಿಯನ್ನೂ ತೀವ್ರವಾಗಿ ವಿರೋಧಿಸುತ್ತದೆ.

1.82 ವೈಯುಕ್ತಿಕ ಗುಂಪುಗಳು ಅಥವಾ ಪ್ರಭುತ್ವಗಳಿಂದ ಪ್ರಾಯೋಜಿತವಾದ ಎಲ್ಲಾ ಸ್ವರೂಪಗಳ ಎಲ್ಲಾ ವಿಧಗಳ ಭಯೋತ್ಪಾದನೆಯನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸುತ್ತದೆ.

1.83 ಚೀನಾ, ವಿಯೆಟ್ನಾಂ, ಡಿಪಿಆರ್‌ಕೆ, ಕ್ಯೂಬಾ ಮತ್ತು ಲಾವೋಸ್‌ನ ಸಮಾಜವಾದಿ ದೇಶಗಳೊಂದಿಗೆ ಸಿಪಿಐ(ಎಂ) ಸೌಹಾರ್ಧತೆ ವ್ಯಕ್ತಪಡಿಸುತ್ತದೆ ಮತ್ತು ಅವರ ದೇಶಗಳಲ್ಲಿ ಸಮಾಜವಾದವನನು ಬಲಪಡಿಸುವ ಎಲ್ಲಾ ಪ್ರಯತ್ನಗಳನ್ನು ಬೆಂಬಲಿಸುತ್ತದೆ.

1.84 ಸಿಪಿಐ(ಎಂ) ಮೂಲಭೂತವಾದ, ಧಾರ್ಮಿಕ ಮತಾಂಧತೆ, ಗೊಡ್ಡು ಸಂಪ್ರದಾಯ, ಮತ್ತು ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಡುವ ಎಲ್ಲಾ ಶಕ್ತಿಗಳಿಗೆ ತನ್ನ ಸೌಹಾರ್ದ ಬೆಂಬಲ ವ್ಯಕ್ತಪಡಿಸುತ್ತದೆ.

1.85 ವಿಶ್ವದಾದ್ಯಂತ, ವಿಶೇಷವಾಗಿ ದಕ್ಷಿಣ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕದಲ್ಲಿ, ಎಡಪಂಥೀಯ ಕ್ರಾಂತಿಕಾರಿ ಚಳುವಳಿಗಳೊಂದಿಗಿನ ತನ್ನ ಸಂಪರ್ಕವನ್ನು ಸಿಪಿಐ(ಎಂ) ಮತ್ತಷ್ಟು ಬಲಪಡಿಸುತ್ತದೆ.

1.86 ಸಾಮ್ರಾಜ್ಯಶಾಹಿಯಿಂದ ವಿವಿಧ ರೀತಿಗಳಲ್ಲಿ ಆಕ್ರಮಣಗಳಿಗೆ ಗುರಿಯಾಗಿರುವ, ಸಮಾಜವಾದಿ ರಾಷ್ಟ್ರಗಳೊಂದಿಗೆ ಸಿಪಿಐ(ಎಂ) ಸಂಪೂರ್ಣ ಸೌಹಾರ್ದತೆ ವ್ಯಕ್ತಪಡಿಸುತ್ತದೆ.

1.87 ಜಾಗತಿಕ ಮಟ್ಟದಲ್ಲಿ – ಯು.ಎಸ್. ಮಧ್ಯಪ್ರವೇಶಗಳು ಮತ್ತು ಆಕ್ರಮಣಗಳ, ನವ–ಉದಾರವಾದದ, ಸಾಮ್ರಾಜ್ಯಶಾಹಿಯ, ಹವಾಮಾನ ಮತ್ತು ಪರಿಸರದ ಅಪಾಯಕಾರಿ ವಿಘಟನೆಗಳ ವಿರುದ್ಧ; ಸಾರ್ವತ್ರಿಕ ಹವಾಮಾನ ನ್ಯಾಯದ ಪರವಾಗಿ; – ಇರುವ ಎಲ್ಲಾ ಚಳುವಳಿಗಳ ರೂಪಗಳ ಜತೆ ಸಹಕರಿಸುತ್ತಾ ಹಾಗೂ ಸೌಹಾರ್ದ ಬೆಂಬಲ ಕೊಡುತ್ತಾ, ಎಲ್ಲಾ ತೊರೆಗಳನ್ನು ಒಟ್ಟಿಗೆ ತಂದು ಜಗತ್ತಿನಲ್ಲಿ ಎಲ್ಲವನ್ನೂ ಒಳಗೊಳ್ಳುವ ಪ್ರಬಲವಾದ, ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಯನ್ನು ಕಟ್ಟಲು ಸಿಪಿಐ(ಎಂ) ಪ್ರಯತ್ನಿಸುತ್ತದೆ.

## ರಾಷ್ಟ್ರೀಯ ಸನ್ನಿವೇಶ

2.1 ಸುಮಾರು ನಾಲ್ಕು ವರ್ಷಗಳ ಮೋದಿ ಸರ್ಕಾರವು ಒಂದು ಬಲಪಂಥೀಯ ಸರ್ವಾಧಿಕಾರಿಶಾಹಿ–ಕೋಮುವಾದಿ ಆಳ್ವಿಕೆ ಆರಂಭವಾಗಲು ಹಾದಿ ಮಾಡಿಕೊಟ್ಟಿದೆ. ಈ ಆಳ್ವಿಕೆಯ ಮುಖ್ಯಲಕ್ಷಣಗಳೆಂದರೆ, ನವ–ಉದಾರವಾದಿ ಧೋರಣೆಗಳನ್ನು ಇನ್ನೂ ಹೆಚ್ಚು ತೀವ್ರತೆಯಿಂದ ಅನುಸರಿಸುವುದು. ಅದರ ಫಲಿತಾಂಶವಾಗಿ ದುಡಿಯುವ ಜನಗಳ ಮೇಲೆ ಸರ್ವತೋಮುಖ ಪ್ರಹಾರಗಳು; ಪ್ರಭುತ್ವದ ಜಾತ್ಯತೀತ ಪ್ರಜಾಸತ್ತಾತ್ಮಕ ಚೌಕಟ್ಟಿಗೆ ಬೆದರಿಕೆ ಒಡ್ಡುವ ಆರ್.ಎಸ್.ಎಸ್.ನ ಹಿಂದುತ್ವ ಕಾರ್ಯಸೂಚಿಯ ಜಾರಿಗೆ ಎಡೆಬಿಡದ ಪ್ರಯತ್ನ, ಜತೆಗೆ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿಗಳು; ಅಮೇರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಬಲಪಡಿಸುವ ಮತ್ತು ಒಬ್ಬ ಅಡಿಯಾಳು ಮಿತ್ರನ ಪಾತ್ರವನ್ನು ನಿರ್ವಹಿಸುವುದು; ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ನಿರ್ಬಂಧಿಸುವ ಮೂಲಕ, ಸಾಂವಿಧಾನಿಕ ಸಂಸ್ಥೆಗಳು ಮತ್ತು ಪ್ರಜಾಪ್ರಭುತ್ವದ ಹಕ್ಕುಗಳನ್ನು ಬುಡಮೇಲು ಮಾಡುವ ಮೂಲಕ ಒಂದು ಸರ್ವಾಧಿಕಾರಶಾಹಿ ವಿನ್ಯಾಸವನ್ನು ಕಟ್ಟುವುದು.

2.2 ಪಕ್ಷದ 21 ನೇ ಮಹಾಧಿವೇಶನ ರಾಜಕೀಯ ಪರಿಸ್ಥಿತಿಯನ್ನು ಈ ಕೆಳಕಂಡಂತೆ ನಿರ್ಣಯಿಸಿತ್ತು:

"2014 ರ ಲೋಕಸಭಾ ಚುನಾವಣೆ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತಂದಿತು. ಮೊದಲ ಬಾರಿಗೆ, ಲೋಕಸಭೆಯಲ್ಲಿ ಕೇವಲ 31% ರಷ್ಟು ಮತಗಳನ್ನು ಪಡೆದುಕೊಂಡು ಭಾರತೀಯ ಜನತಾ ಪಕ್ಷವು ಸಂಪೂರ್ಣ ಬಹುಮತವನ್ನು ಗಳಿಸಿದೆ. ಇದು ನವ–ಉದಾರವಾದಿ ನೀತಿಗಳ ಆಕ್ರಮಣಕಾರಿ ಜಾರಿಗೆ ಮತ್ತು ಆರ್.ಎಸ್.ಎಸ್. ನೇತೃತ್ವದ ಹಿಂದುತ್ವ ಪಡೆಗಳು ತಮ್ಮ ಕೋಮುವಾದಿ ಕಾರ್ಯಸೂಚಿಯನ್ನು ಮುನ್ನಡೆಸುವಂತಹ ಬಲಪಂಥೀಯ ಪ್ರಹಾರಕ್ಕೆ ವೇದಿಕೆಯನ್ನು ರೂಪಿಸಿದೆ. ಇಂತಹ ಒಂದು ಪ್ರಸಂಗವು ಬೆಳೆಯುತ್ತಿರುವ ಸರ್ವಾಧಿಕಾರಶಾಹಿಯ ಮುನ್ಸೂಚನೆ ನೀಡುತ್ತದೆ. ". (ಪ್ಯಾರಾ 2.1)

2.3 ಈ ನಿರ್ಣಯವು ಈ ಕೆಳಕಂಡ ಪ್ರಮುಖ ಲಕ್ಷಣಗಳನ್ನು ಕೂಡಾ ಗಮನಿಸಿದೆ:

(i) "ಬಿಜೆಪಿ ಸರ್ಕಾರದ ಹನ್ನೊಂದು ತಿಂಗಳ ಅವಧಿಯ ಗುರುತುಗಳೆದರೆ ಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳವನ್ನು ಹೆಚ್ಚಿಸುವುದರ ಮೇಲೆ ಒತ್ತು ನೀಡುವುದರೊಂದಿಗೆ ನವ–ಉದಾರವಾದಿ ನೀತಿಗಳನ್ನು ಆಕ್ರಮಣಕಾರಿಯಾಗಿ ಅನುಸರಿಸುವುದು; ಹೆಚ್ಚಿದ ಖಾಸಗೀಕರಣ; ಕಾರ್ಮಿಕ ಕಾನೂನುಗಳು ಮತ್ತು ಭೂ ಸ್ವಾಧೀನ ಕಾನೂನುಗಳನ್ನು ದುರ್ಬಳಗೊಳಿಸುವುದು. "

(ii) "ಜನರ ಮೇಲಿನ ಈ ಎಲ್ಲಾ ದಾಳಿಗಳು, ಪ್ರಸ್ತುತ ಸಂದರ್ಭಲ್ಲಿ ಆಳುವ ವರ್ಗಗಳಿಗೆ ಸರ್ವಾಧಿಕಾರಶಾಹಿಯನ್ನು ಅವಶ್ಯಕವಾಗಿಸುತ್ತದೆ".

(iii) "ಬಿಜೆಪಿಯು ಸರಕಾರದಲ್ಲಿದ್ದು ಮತ್ತು ಆರ್.ಎಸ್.ಎಸ್. ಆಟದ ಯೋಜನೆಯನ್ನು ಕಾರ್ಯಗತಗೊಳಿಸುವುದರೊಂದಿಗೆ ಪರಿಸ್ಥಿತಿಯಲ್ಲಿ ಒಂದು ಗುಣಾತ್ಮಕ ಬದಲಾವಣೆಯು ಕಂಡುಬಂದಿದೆ".

(iv) "ಗಣತಂತ್ರದ ಜಾತ್ಯತೀತ–ಪ್ರಜಾಪ್ರಭುತ್ವದ ಆಧಾರಕ್ಕೆ ಬೆದರಿಕೆ ಮೂಡಿಸುವಂತ ವಿಚ್ಛಿದಕಾರ್ರಿ ಹಿಂದುತ್ವ ಯೋಜನೆಯನ್ನು ಮುನ್ನಡೆಸುವ ಒಂದು ಬಹುವಿಧಗಳ ಪ್ರಯತ್ನ ಅನಾವರಣಗೊಳ್ಳುತ್ತಿದೆ".

(v) "ಮೋದಿ ಸರ್ಕಾರ ಅಮೇರಿಕಾದೊಂದಿಗೆ ವ್ಯೂಹಾತ್ಮಕ ಸಂಬಂಧಗಳನ್ನು ಬಲಪಡಿಸುವುದನ್ನು ತೀವ್ರಗೊಳಿಸುತ್ತಿದೆ."

(vi) "ಬೆಳೆಯುತ್ತಿರುವ ಸರ್ವಧಿಕಾರಶಾಹಿ ಪ್ರವೃತ್ತಿಗಳು ಪ್ರಜಾಸತ್ತಾತ್ಮಕ ಹಕ್ಕುಗಳಲ್ಲಿ ಗಂಭೀರ ಅತಿಕ್ರಮಣ ಮತ್ತು ನಾಗರಿಕ ಸ್ವಾತಂತ್ರಗಳ ಮೇಲಿನ ಧಾಳಿಗಳಲ್ಲಿ ಪ್ರತಿಬಿಂಬಿತವಾಗಿವೆ."

**ಪ್ರಸ್ತುತ ಪರಿಸ್ಥಿತಿ :**

2.4 ರಾಜಕೀಯ ಪರಿಸ್ಥಿತಿಯ ಈ ವಿಶ್ಲೇಷಣೆ ಮತ್ತು ತಿಳುವಳಿಕೆ ಸರಿಯಾಗಿವೆ ಎಂಬುದನ್ನು ಪಕ್ಷದ ಮಹಾಧಿವೇಶನದ ನಂತರದ ಸುಮಾರು ಮೂರು ವರ್ಷಗಳು ಪೂರ್ಣವಾಗಿ ದೃಢೀಕರಿಸಿವೆ. ನಂತರದ ಅವಧಿ ಬಲಪಂಥೀಯ ಪ್ರಹಾರದ ಎಲ್ಲಾ ಘಟಕಗಳು ತೀವ್ರಗೊಳ್ಳುತ್ತಿರುವುದನ್ನು ಅನಾವರಣಗೊಳಿಸುತ್ತಿದೆ.

**ಆರ್ಥಿಕ ಪರಿಸ್ಥಿತಿ**

2.5 ಕಳೆದ ಮೂರು ವರ್ಷಗಳು ಮತ್ತು ಒಂಭತ್ತು ತಿಂಗಳುಗಳ ಅವಧಿಯಲ್ಲಿ, ಮೋದಿ ಸರ್ಕಾರವು ಭಾರತೀಯ ಆರ್ಥಿಕತೆಯನ್ನು ಬಿಕ್ಕಟ್ಟಿನ ಅಂಚಿಗೆ ತಂದಿದೆ. ಅಂಕಿ–ಅಂಶಗಳನ್ನು ತಿರುಚುವ ಮೂಲಕ ಆರ್ಥಿಕ ಮಂದಗತಿಯನ್ನು ಮರೆಮಾಚಲು ಸರ್ಕಾರ ಎಷ್ಟೇ ಪ್ರಯತ್ನಿಸಿದರೂ, ಸತ್ಯ ಹೊರಬಿದ್ದಿದೆ. ಜಿಡಿಪಿ ಸರಣಿಯನ್ನು ಉತ್ತಮವಾಗಿ ಕಾಣುವಂತೆ ಪರಿಷ್ಕರಿಸಿದರೂ ಪರಿಷ್ಕೃತ ಜಿಡಿಪಿ ಸರಣಿಯಲ್ಲೂ, ಬೆಳವಣಿಗೆ 2015–16ರಲ್ಲಿದ್ದ ಶೇ. 8% ದಿಂದ 2017–18 ಕ್ಕೆ ಅಂದಾಜು ಬೆಳವಣಿಗೆ ಶೇ. 6.5% ಕ್ಕೆ ಸತತವಾಗಿ ಇಳಿದಿದೆ. ಇದು ನಾಲ್ಕು ವರ್ಷಗಳಲ್ಲಿ ಅತಿ ಕಡಿಮೆ ಬೆಳವಣಿಗೆಯಾಗಿದೆ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ, 2013–14 ಮತ್ತು 2016–17ರ ನಡುವೆ ಒಟ್ಟಾರೆ ಉದ್ಯೋಗ ಮಟ್ಟ ಸಂಕುಚಿತಗೊಂಡಿದೆ ಎಂದು ಲೇಬರ್ ಬ್ಯೂರೊದ ಅಂಕಿಅಂಶಗಳು ತೋರಿಸುತ್ತವೆ.

2.6 ಆರ್ಥಿಕ ಮಂದಗತಿಯು ಆರ್ಥಿಕತೆಯ ನಿಜ ಕ್ಷೇತ್ರಗಳಲ್ಲಿ ಮತ್ತು ನಿರ್ದಿಷ್ಟವಾಗಿ ಅನೌಪಚಾರಿಕ ಕ್ಷೇತ್ರಗಳಲ್ಲಿ ತೀವ್ರವಾಗಿದೆ. ಮೋದಿ ಸರಕಾರದ ಮೊದಲ ಮೂರು ವರ್ಷಗಳಲ್ಲಿ ಕೃಷಿ ಜಿಡಿಪಿ ವರ್ಷಕ್ಕೆ ಕೇವಲ 1.7 ರಷ್ಟು ಬೆಳವಣಿಗೆ ದಾಖಲಿಸಿತು. ಸಾರ್ವಜನಿಕ ವೆಚ್ಚಗಳಲ್ಲಿನ ಕಡಿತ, ಬೆಂಬಲ ಬೆಲೆಗಳ ದರಗಳಲ್ಲಿ ಇಳಿಕೆ, ಸಾರ್ವಜನಿಕ ಖರೀದಿಯಲ್ಲಿ ಕಡಿತ, ಮತ್ತು ಲಾಗುವಾಡುಗಳ ಪೂರೈಕೆಯಲ್ಲಿ ಹೆಚ್ಚೆಚ್ಚು ಖಾಸಗೀಕರಣ ಹಾಗೂ ಕೆಲವು ಪ್ರಮುಖ ಲಾಗುವಾಡುಗಳ ಪೂರೈಕೆಗಳ ಮೇಲೆ ಹೆಚ್ಚಿನ ಪರೋಕ್ಷ ತೆರಿಗೆಗಳಿಂದಾಗಿ ಉತ್ಪಾದನಾ ವೆಚ್ಚದಲ್ಲಿ ತೀವ್ರ ಏರಿಕ, ಇವೆಲ್ಲವುಗಳಿಂದಾಗಿ ಕೃಷಿ ಆದಾಯಗಳು ತೀವ್ರವಾಗಿ ಕುಸಿದಿವೆ. ಬೆಳೆ ವಿಮೆಯನ್ನು ಖಾಸಗಿ ವಿಮಾ ಕಂಪೆನಿಗಳಿಗೆ ಒಂದು ಬಕ್ಷೀಸಾಗಿ ಪರಿವರ್ತಿಸಲಾಗಿದ್ದರೆ, ಇತ್ತ ರೈತರಿಗೆ ವ್ಯಾಪಕ ಬೆಳೆ ನಷ್ಟಗಳಿಗೆ ಪರಿಹಾರ ನಿರಾಕರಿಸಲಾಗಿದೆ.

2.7 ವಿವಿಧ ಮೂಲಗಳನ್ನು ಆಧರಿಸಿದ ತಯಾರಿಕಾ ಕ್ಷೇತ್ರದ ಬೆಳವಣಿಗೆಯ ಅಂದಾಜುಗಳು ವೈರುಧ್ಯಮಯ ಪ್ರವೃತ್ತಿಗಳನ್ನು ತೋರಿಸುತ್ತಿದ್ದು ಇವು ಆರ್ಥಿಕತೆಯ ಸುಂದರ ಚಿತ್ರಣವನ್ನು ತೋರಿಸಲು ಈ ಅಂಕಿಅಂಶಗಳನ್ನು ತೀಡಲಾಗುತ್ತಿದೆ ಎಂಬ ವ್ಯಾಪಕ ಸಂಶಯವನ್ನು ನಂಬಲರ್ಹಗೊಳಿಸುತ್ತಿವೆ. ಅಲ್ಪಾವಧಿಯ ಅಧಿಕೃತ ಅಂಕಿ–ಅಂಶಗಳು ಅನಾಣ್ಯೀಕರಣ ಮತ್ತು ಜಿಎಸ್‌ಟಿ ಅನುಷ್ಠಾನ ಅತ್ಯಂತ ಹೆಚ್ಚಾಗಿ ತಟ್ಟಿರುವ ಅನೌಪಚಾರಿಕ ವಲಯದ ತಯಾರಿಕೆಯಲ್ಲಿ ಬದಲಾವಣಗಳನ್ನು ಹಿಡಿದಿಡುವುದಿಲ್ಲ, ಆದರೆ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ (ಐಐಪಿ)ದಂತಹ ಸೂಚ್ಯಂಕಗಳು ಕೂಡ ವಿಭಿನ್ನ ವರ್ಷಗಳಲ್ಲಿ ಕೆಲವು ಕೈಗಾರಿಕಾ ಕ್ಷೇತ್ರಗಳಲ್ಲಿ ಬಿರುಸನ್ನು ಹೊರತುಪಡಿಸಿ, ಕಳೆದ ಮೂರು ವರ್ಷಗಳಿಂದ ಹೆಚ್ಚಿನ ಪ್ರಮುಖ ಕೈಗಾರಿಕೆಗಳು ನಿಧಾನ ಬೆಳವಣಿಗೆಯನ್ನು ಕಂಡಿವೆ ಎಂಬುದನ್ನು ತೋರಿಸುತ್ತವೆ.

2.8 ಬ್ಯಾಂಕಿಂಗ್ ವಲಯವು ಅನುತ್ಪಾದಕ ಆಸ್ತಿ(ಎನ್‌ಪಿಎ)ಗಳ ಹೊರೆಯಲ್ಲಿ ಭಾರಿ ಏರಿಕೆಯಿಂದ ತತ್ತರಿಸುತ್ತಿದೆ. ಕಾರ್ಪೊರೇಟ್ ಸುಸ್ತಿದಾರರಿಗೆ ಬ್ಯಾಂಕುಗಳು ಮೃದುದೊರಣೆ ತೋರಿಸುವಂತೆ ಮಾಡಿರುವುದರಿಂದ ಡಿಸೆಂಬರ್ 2014 ರಲ್ಲಿ ಒಟ್ಟು ಎನ್‌ಪಿಎಗಳು 2.6 ಲಕ್ಷ ಕೋಟಿ ರೂ.ಗಳಿದ್ದದ್ದು ಸೆಪ್ಟಂಬರ್ 2017 ರಲ್ಲಿ 8.37 ಲಕ್ಷ ಕೋಟಿ ರೂ.ಗೆ ಏರಿದೆ. ನೋಟುರದ್ಧತಿಯಿಂದ ದೊಡ್ಡ ಪ್ರಮಾಣದ ಠೇವಣಿಗಳು ಬ್ಯಾಂಕುಗಳಲ್ಲಿ ಸಂಗ್ರಹವಾಗಿ, ಸಾಲದ ಬೇಡಿಕೆ ಕಡಿಮೆಯಾದ ಕಾರಣದಿಂದ ಸಾಲ ನೀಡಿಕೆ ಕಳಮಟ್ಟಕ್ಕೆ ಇಳಿದಿದೆ. ಈ ಠೇವಣಿಗಳ ಮೇಲಿನ ಬಡ್ಡಿಯ ಹೊರೆ ಸಾರ್ವಜನಿಕ ವಲಯದ ಬ್ಯಾಂಕುಗಳ ಲಾಭದಾಯಕತೆ ಮತ್ತಷ್ಟು ಕುಸಿಯುವಂತೆ ಮಾಡಿದೆ.

2.9 ಆರ್ಥಿಕ ಮಂದಗತಿಗೆ ಕಾರಣವಾದ ಹಲವಾರು ವಲಯ–ನಿರ್ದಿಷ್ಟ ಅಂಶಗಳಿದ್ದರೂ, ಅನಾಣ್ಯೀಕರಣ ಮತ್ತು ಜಿಎಸ್‌ಟಿ ವ್ಯವಸ್ಥೆಯ ಅನುಷ್ಠಾನವು ಎಲ್ಲಾ ಪ್ರಮುಖ ಕ್ಷೇತ್ರಗಳ ಮೇಲೆ ವಿನಾಶಕಾರೀ ಪರಿಣಾಮ ಬೀರಿದ ಧೋರಣಾ ಉಪಕ್ರಮಗಳಾಗಿ ಎದ್ದು ಕಾಣುತ್ತವೆ.

**ಅನಾಣ್ಯೀಕರಣ**

2.10 ನವೆಂಬರ್ 2016 ರಲ್ಲಿ ಕೇಂದ್ರ ಸರಕಾರ ಉನ್ನತ ಮೌಲ್ಯಗಳ ಕರೆನ್ಸಿ ನೋಟುಗಳ ಅನಾಣ್ಯೀಕರಣವನ್ನು ಪ್ರಕಟಿಸಿತು. ಈ ಕ್ರಮವು ಭ್ರಷ್ಟಾಚಾರ, ಕಪ್ಪು ಹಣ ಮತ್ತು ನಕಲಿ ಕರೆನ್ಸಿಯ ಚಲಾವಣೆಯನ್ನು ಹತ್ತಿಕ್ಕುತ್ತದೆ ಮತ್ತು ಭಯೋತ್ಪಾದನೆಯನ್ನು ಎದುರಿಸುತ್ತದೆ ಎಂದು ಸರ್ಕಾರ ಹೇಳಿಕೊಂಡಿತು. ಆರ್‌ಬಿಐ ಬಿಡುಗಡೆ ಮಾಡಿದ ಮಾಹಿತಿ ರೂ .500 ಮತ್ತು ರೂ 1000ದ ನೋಟುಗಳ 98.96 ಶೇಕಡ ಅನಾಣ್ಯೀಕರಣದ ಕ್ರಮದಿಂದ ಬ್ಯಾಂಕಿಗೆ ಹಿಂದುರಿಗಿ ಬಂದಿವೆ ಎಂದು ತೋರಿಸಿದೆ. ಈ ಮೂಲಕ ಕನಿಷ್ಠ 4–5 ಲಕ್ಷ ಕೋಟಿ ರೂಪಾಯಿಆವೆಗಳನ್ನು ಹುಸಿಗೊಳಿಸಿದೆ . ವಾಸ್ತವವಾಗಿ, ಅನಾಣ್ಯೀಕರಣದಿಂದ ಸರ್ಕಾರ ಹೇಳಿದ ಯಾವುದೇ ಉದ್ದೇಶ ಈಡೆರಲಿಲ್ಲ.

2.11 ಅನಾಣ್ಯೀಕರಣದ ನಿಜವಾದ ಉದ್ದೇಶ, ಅನಂತರದ ಹಂತದಲ್ಲಿ ಸರಕಾರವೇ ಸ್ವತಃ ಬಹಿರಂಗಪಡಿಸಿದಂತೆ, ಅನೌಪಚಾರಿಕ ಆರ್ಥಿಕತೆಯನ್ನು ಔಪಚಾರಿಕ ಆರ್ಥಿಕತೆಯಾಗಿ ಪರಿವರ್ತಿಸುವುದು. ಅನಾಣ್ಯೀಕರಣ ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಲಾಭದಾಯಕ ವ್ಯಾಪಾರ ಅವಕಾಶಗಳನ್ನು ತೆರೆದು ಕೊಡುವ ಒಂದು ಬಹು ಲೆಕ್ಕಾಚಾರದ ನಡೆ. ಅದು, ವಾಸ್ತವದಲ್ಲಿ, ಕ್ರೆಡಿಟ್/ ಡೆಬಿಟ್ ಕಾರ್ಡುಗಳು ಮತ್ತು ಇ–ವ್ಯಾಲೆಟ್‌ಗಳನ್ನು ನಡೆಸುವ ದೊಡ್ಡ ಕಾರ್ಪೋರೇಟ್‌ಗಳು ಮತ್ತು

ಬ್ಯಾಂಕುಗಳಿಗೆ ಸೌಕರ್ಯ ಒದಗಿಸಲಿಕ್ಕಾಗಿ ಒಂದು ಡಿಜಿಟಲ್ ಆರ್ಥಿಕತೆಯತ್ತ ತಳ್ಳುವ ಸರ್ಕಾರದ ಬಹು ಅಬ್ಬರದ ಸುಧಾರಣಾ ಕ್ರಮಗಳ ಒಂದು ಭಾಗವಾಗಿತ್ತು. ಡಿಜಿಟಲ್ ಆರ್ಥಿಕತೆಗೆ ಈ ಪಲ್ಲಟ ನಮ್ಮ ಹಣಕಾಸು ಚಿಲ್ಲರೆ ಕ್ಷೇತ್ರಗಳಲ್ಲಿ ವಿದೇಶಿ ಕಾರ್ಪೊರೇಟ್‌ಗಳ ಪ್ರವೇಶಕ್ಕೆ ಸಹಾಯ ಮಾಡುವ ಆಶಯವನ್ನು ಹೊಂದಿದೆ. ಅದು ಭಾರತೀಯ ಕಾರ್ಪೊರೇಟ್‌ಗಳಿಗೆ ಇನ್ನಷ್ಟು ಸಾಲಗಳನ್ನು ಒದಗಿಸಲು ಸಂಪನ್ಮೂಲಗಳನ್ನು ಸಜ್ಜುಗೊಳಿಸಿ ಅವುಗಳಿಗೆ ಪರೋಕ್ಷವಾಗಿ ಪ್ರಯೋಜನವನ್ನು ನೀಡುವ ಪ್ರಯತ್ನವೂ ಆಗಿತ್ತು. ಠೇವಣಿಯಾದ ಹಣವನ್ನು ಈ ಕಾರ್ಪೊರೇಟ್‌ಗಳು ಮರುಪಾವತಿ ಮಾಡದ ಮತ್ತು ಸರಕಾರ ಕೆಟ್ಟ ಸಾಲಗಳೆಂದು ಲೆಕ್ಕದಿಂದ ತೆಗೆದು ಹಾಕಿದ ಸಾಲಗಳಿಂದ ಬಾಧಿತವಾದ ಬ್ಯಾಂಕುಗಳ ಮರುಬಂಡವಾಳೀಕರಣಕ್ಕೆ ಬಳಸಲಾಗಿದೆ.

2.12 ಅನಾಣ್ಯೀಕರಣ ಸಣ್ಣ ಚಿಲ್ಲರೆ ವ್ಯಾಪಾರಿಗಳಿಗೆ ಪ್ರತಿಕೂಲ ಪರಿಣಾಮ ಬೀರಿದೆ ಮತ್ತು ಹಲವಾರು ಸಣ್ಣ ಮತ್ತು ಮಧ್ಯಮ ಉದ್ಯಮ(ಎಸ್‌ಎಂಇ)ಗಳು ಮುಚ್ಚಿ ಹೋಗಿ ಬೃಹತ್ ಉದ್ಯೋಗ ನಷ್ಟಗಳಿಗೆ ಕಾರಣವಾಗಿದೆ. ಅಸಂಘಟಿತ ಕಾರ್ಮಿಕರ ಜೀವನೋಪಾಯಗಳ ಮೇಲೆ ತೀವ್ರ ದುಷ್ಪರಿಣಾಮ ಉಂಟಾಗಿದೆ. ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲಾಗಲಿ, ಅಥವಾ ಮುಂದಿನ ಬಿತ್ತನೆ ಋತುವಿಗೆ ಬೀಜಗಳನ್ನು ಮತ್ತು ರಸಗೊಬ್ಬರಗಳನ್ನು ಖರೀದಿಸಲಾಗಲಿ ಸಾಧ್ಯವಾಗದಂತಾಯಿತು. ನೋಟು ವಿನಿಮಯಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಜನರ ಪೈಕಿ ಸುಮಾರು ನೂರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ಸಹಕಾರಿ ಬ್ಯಾಂಕುಗಳ ವಹಿವಾಟಿನ ಮೇಲೆ ಹೇರಿದ ನಿರ್ಬಂಧಗಳು ಕೂಡ ಗ್ರಾಮೀಣ ಜನರ, ವಿಶೇಷವಾಗಿ ಕೇರಳದಂತಹ ರಾಜ್ಯಗಳಲ್ಲಿ, ತೊಂದರೆಗಳನ್ನು ಮತ್ತಷ್ಟು ಜಟಿಲ ಗೊಳಿಸಿದವು. ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಜನರ ವಿಶ್ವಾಸಕ್ಕೆ ತೀವ್ರವಾದ ಧಕ್ಕೆ ಉಂಟಾಗುವಂತೆ ಮಾಡಲಾಗಿದೆ.

**ಜಿಎಸ್‌ಟಿ**

2.13 ಜಿಎಸ್‌ಟಿಯನ್ನು ತಂದಿರುವುದು ಒಂದು ಕಾರ್ಪೊರೇಟ್–ಪರವಾದ ಕ್ರಮವಾಗಿದ್ದು ಅದು ಜನರ ಮೇಲಿನ ಹೊರೆಗಳನ್ನು ಹೆಚ್ಚಿಸಿದೆ ಮತ್ತು ಸರ್ಕಾರದ ನವ–ಉದಾರವಾದಿ ಪ್ರಹಾರಗಳ ಒಂದು ಭಾಗವಾಗಿದೆ. ಜಿಎಸ್‌ಟಿ ವ್ಯವಸ್ಥೆ ಒಕ್ಕೂಟ ರಚನೆಯನ್ನು ಬುಡಮೇಲು ಮಾಡಿ ರಾಜ್ಯಗಳ ಹಕ್ಕುಗಳನ್ನು ಪ್ರತಿಕೂಲವಾಗಿ ತಟ್ಟಿದೆ ಮತ್ತು ಪರೋಕ್ಷ ತೆರಿಗೆಯ ಪ್ರಮಾಣವನ್ನು ಹೆಚ್ಚಿಸಿದೆ. ಜಿಎಸ್‌ಟಿ ಸಾಮಾನ್ಯ ಜನರು, ಸಣ್ಣ ಮತ್ತು ಪುಟ್ಟ ಉದ್ಯಮಗಳು, ವ್ಯಾಪಾರಿಗಳು ಮತ್ತು ಅಸಂಘಟಿತ ವಲಯದ ವೃತ್ತಿಗಳ ಮೇಲೆ ಹೊಸ ಹೊರೆಗಳನ್ನು ಹಾಕಿದೆ. ಕೈಗಾರಿಕೆಗಳು ಮತ್ತು ಸೇವೆಗಳ ಹಲವಾರು ಕ್ಷೇತ್ರಗಳ ಮೇಲೆ ಬಹಳ ಕೆಟ್ಟ ಪರಿಣಾಮ ಉಂಟಾಗಿದೆ. ವ್ಯವಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಕ್ಷೇತ್ರಗಳು ಕೂಡ ಜಿಎಸ್‌ಟಿಯ ಹೊರೆಯನ್ನು ಹೊರಬೇಕಾಗಿ ಬಂದಿದೆ. ಜಿಎಸ್‌ಟಿ ಹಲವು ಸರಕುಗಳ ಬೆಲೆಗಳನ್ನು ತಗ್ಗಿಸಿದೆ ಎಂಬ ದಾವೆಗಳಿಗೆ ವ್ಯತಿರಿಕ್ತವಾಗಿ, ವಾಸ್ತವವಾಗಿ, ಅಸಮ ತೆರಿಗೆ ರಚನೆಯಿಂದಾಗಿ, ಅನೇಕ ಸರಕುಗಳು ಮತ್ತು ಸೇವೆಗಳ ಬೆಲೆಗಳಲ್ಲಿ ಏರಿಕೆ ಕಂಡುಬಂದಿದೆ.

**ಬ್ಯಾಂಕಿಂಗ್ ವಲಯ ಮತ್ತು ಚಮಚಾ ಬಂಡವಾಳಶಾಹಿ**

2.14 ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಬೃಹತ್ ಮೊತ್ತದ ಕೆಟ್ಟ ಸಾಲಗಳ ಹೊರೆ ಬಿದ್ದಿದೆ. ಇದು ಹಿಂದಿನ ಯುಪಿಎ ಸರಕಾರ ಮತ್ತು ಪ್ರಸಕ್ತ ಮೋದಿ ಸರಕಾರವು ಪ್ರಾಯೋಜಿಸಿರುವ ಚಮಚಾ ಬಂಡವಾಳಶಾಹಿಯ ಒಂದು ಲಕ್ಷಣವಾಗಿದೆ. ಏಕೆಂದರೆ ಶೇ 85. ಎನ್‌ಪಿಎಗಳು ಕಾರ್ಪೊರೆಟ್‌ಗಳು ಮತ್ತು ದೊಡ್ಡ ವ್ಯವಹಾರಗಳು ತೆರಬೇಕಾದಂತವುಗಳು. ಮೋದಿ ಸರ್ಕಾರದ ಅಡಿಯಲ್ಲಿ ಕಳೆದ ಮೂರೂವರೆ ವರ್ಷಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ರೂ 2,29,082 ಕೋಟಿ ಮೌಲ್ಯದ ಸಾಲಗಳನ್ನು ಲೆಕ್ಕದಿಂದ ತೆಗೆಯಲಾಗಿದೆ.

2.15 ಇದಲ್ಲದೆ 'ಹಣಕಾಸು ಇತ್ಯರ್ಥ ಮತ್ತು ಠೇವಣಿ ವಿಮಾ ಮಸೂದೆ'(ಎಫ್‌ಆರ್‌ಡಿಐ ಬಿಲ್)ಯನ್ನು ಸರ್ಕಾರವು ಮಂಡಿಸಿದೆ. ಇದು 'ಹಣಕಾಸು ಇತ್ಯರ್ಥ ಕಾರ್ಪೊರೇಷನ್'ಗೆ ಒಂದು ಬ್ಯಾಂಕನ್ನು ಮಾರಾಟ ಮಾಡುವ ವಿಲೀನಗೊಳಿಸುವ, ಅಥವಾ 'ಬೇಲ್–ಇನ್' ಒದಗಿಸುವ ಅಧಿಕಾರವನ್ನು ನೀಡುತ್ತದೆ. ಈ ಹೊಸ ಕಾನೂನು ಮತ್ತು ವ್ಯವಸ್ಥೆಯನ್ನು ಖಾಸಗೀಕರಣವನ್ನು ಮುಂದೊತ್ತಲಿಕ್ಕಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ಮುಚ್ಚಲು ಅಥವಾ ವಿಲೀನಗೊಳಿಸಲು ಒಂದು ಸಾಧನವಾಗಿ ಬಳಸುವ ಪ್ರಸ್ತಾವ ಇಡಲಾಗಿದೆ. ಇದಲ್ಲದೆ 'ಬೇಲ್–ಇನ್' ಅಂಶದಿಂದ ದೊಡ್ಡ ವ್ಯಾಪಾರಿಗಳಿಗೆ ಭರ್ಜರಿ ಸಾಲಗಳನ್ನು ಕೊಟ್ಟ ಬ್ಯಾಂಕುಗಳನ್ನು ಎತ್ತಿ ನಿಲಿಸಲು ಠೇವಣಿದಾರರ ಹಣವನ್ನು ಬಳಸಿಕೊಳ್ಳಬಹುದಾಗಿದೆ.

**ಖಾಸಗೀಕರಣದ ಸವಾರಿ**

2.16 ನವ–ಉದಾರವಾದಿ ನೀತಿಗಳ ಆಕ್ರಮಣಕಾರಿ ಜಾರಿಯ ಭಾಗವಾಗಿ, ಮೋದಿ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣವನ್ನು ಪ್ರಾರಂಭಿಸಿದೆ. ಇದು ಮೂರು ಅಂಶಗಳನ್ನು ಹೊಂದಿದೆ: (ಅ ರಕ್ಷಣಾ ಉತ್ಪಾದನೆ, ರೈಲ್ವೆ, ಬ್ಯಾಂಕಿಂಗ್ ಮತ್ತು ಇನ್ನಿತರ ಪ್ರಭುತ್ವ–ಸ್ವಾಮ್ಯದ ಕ್ಷೇತ್ರಗಳನ್ನು ಖಾಸಗೀಕರಿಸುವುದು; (ಆ) ಪ್ರಭುತ್ವ ವಲಯವನ್ನು 100% ಎಫ್‌ಡಿಐಗೆ ತೆರೆಯುವುದು; ಮತ್ತು (ಇ)ವಿದ್ಯುತ್ ವಿತರಣೆ, ನೀರು ಪೂರೈಕೆ ಮತ್ತು ಸಾರಿಗೆ ಮುಂತಾದ ಮೂಲಭೂತ ಸೇವೆಗಳ ಖಾಸಗೀಕರಣ. ಹೀಗೆ, ಮೋದಿ ಸರ್ಕಾರವು ಭಾರತೀಯ ಮತ್ತು ವಿದೇಶಿ ೊಡ್ಡ ಬಂಡವಾಳಿಗರಿಗೆ ಒಂದು ಬಕ್ಷೀಸನ್ನು ಕೊಡಮಾಡುತ್ತಿದೆ.

2.17 ನೀತಿ ಆಯೋಗ ಖಾಸಗೀಕರಣದ ಸವಾರಿಯ ಪ್ರಧಾನ ಚಾಲಕನಾಗಿ ಬಿಟ್ಟಿದೆ. ಒಟ್ಟು 235 ಕೇಂದ್ರ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ 74 ನ್ನು ಮುಚ್ಚಬೇಕು ಅಥವಾ ಆಯಕಟ್ಟಿನ ಮಾರಾಟ ಮಾರ್ಗದಲ್ಲಿ ಮಾರಾಟ ಮಾಡಬೇಕೆಂದು ಅದು ಶಿಫಾರಸು ಮಾಡಿದೆ. 20 ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಆಯಕಟ್ಟಿನ ಬಂಡವಾಳ ಹಿಂಪಡಿಕೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ಸರಕಾರೀ ಏಕಾಧಿಕಾರ ಇರುವ ರೈಲ್ವೆ, ಬ್ಯಾಂಕುಗಳು ಮತ್ತು ವಿದ್ಯುತ್ ಸರಬರಾಜು ಕಂಪೆನಿಗಳಂತವುಗಳನ್ನು ಖಾಸಗಿ ಭಾಗವಹಿಸುವಿಕೆಗೆ ತೆರೆಯಬೇಕು ಎಂದು ನೀತಿ ಆಯೋಗ ಹೇಳಿದೆ.

2.18 ಖಾಸಗೀಕರಣದ ಸವಾರಿಯು ಸಾರ್ವಜನಿಕ ವಲಯದ ಉದ್ಯಮಗಳ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ. ರಕ್ಷಣಾ ಉತ್ಪಾದನಾ ಕ್ಷೇತ್ರ ಪ್ರಧಾನ ಗುರಿಯಾಗಿದೆ. ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್‌ನ್ನು ಆಯಕಟ್ಟಿನ ಮಾರಾಟಕ್ಕೆ ಇಡಲಾಗಿದೆ. ಆಯಕಟ್ಟಿನ ಪಾಲುದಾರರ ಕಾರ್ಯಕ್ರಮದಡಿಯಲ್ಲಿ, ಪ್ರಮುಖ ಭಾರತೀಯ ಖಾಸಗಿ ಕಂಪೆನಿಗಳನ್ನು ಸಬ್‌ಮೆರೀನ್‌ಗಳು, ಹೆಲಿಕಾಪ್ಟರ್‌ಗಳು, ಯುದ್ಧ ವಿಮಾನಗಳು ಇತ್ಯಾದಿಗಳನ್ನು ಉತ್ಪಾದಿಸಲು ವಿದೇಶಿ ಶಸ್ತ್ರಾಸ್ತ್ರ ತಯಾರಕರೊಂದಿಗೆ ಒಪ್ಪಂದಕ್ಕೆ ಆಹ್ವಾನಿಸಲಾಗುತ್ತಿದೆ.

2.19 ಉಕ್ಕಿನ ವಲಯದಲ್ಲಿ, ದುರ್ಗಾಪುರ ಮಿಶ್ರಲೋಹದ ಉಕ್ಕು ಸ್ಥಾವರ ಮತ್ತು ಸೇಲಂ ಹಾಗೂ ಭದ್ರಾವತಿ ವಿಶೇಷ ಉಕ್ಕು ಸ್ಥಾವರಗಳನ್ನು ಮಾರಲಾಗುತ್ತದೆ. ರೈಲ್ವೆಯಲ್ಲಿ, ರೈಲ್ವೆ ಮಾರ್ಗಗಳು ಮತ್ತು ಇತರ ಸೇವೆಗಳನ್ನು ಖಾಸಗಿ ವಲಯಕ್ಕೆ ತೆರೆಯಲು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಈಗಾಗಲೇ, ಪಿಪಿಪಿ (ಸರ್ವಜನಿಕ–ಖಾಸಗಿ ಭಾಗೀದಾರಿಕೆ) ಮಾದರಿಯಡಿಯಲ್ಲಿ, 400 ರೈಲ್ವೆ ನಿಲ್ದಾಣಗಳನ್ನು ಪುನರಾಭಿವೃದ್ಧಿಗಾಗಿ ಇಡಲಾಗಿದೆ.. ಕಲ್ಲಿದ್ದಲು ನಿಕ್ಷೇಪಗಳನ್ನು ಖಾಸಗಿಯವರಿಗೆ ಹರಾಜು ಮಾಡಲಾಗುತ್ತಿದೆ ಮತ್ತು ಅಸ್ತಿತ್ವದಲ್ಲಿರುವ ಕಲ್ಲಿದ್ದಲು ಗಣಿಗಳನ್ನು ಖಾಸಗೀಕರಿಸಲಾಗುತ್ತಿದೆ.

2.20 ಮೂಲಭೂತ ಸೇವೆಗಳ ಖಾಸಗೀಕರಣದ ಮೂಲಕ, ನವ–ಉದಾರವಾದವು ನೀರು, ವಿದ್ಯುತ್, ಸಾರಿಗೆ, ಶಿಕ್ಷಣ ಮತ್ತು ಆರೋಗ್ಯದಂತಹ ಎಲ್ಲಾ ಅವಶ್ಯಕ ಮತ್ತು ಮೂಲಭೂತ ಸೇವೆಗಳನ್ನು ಮಾರುಕಟ್ಟೆಯಲ್ಲಿನ ಸರಕುಗಳಾಗಿ ಪರಿಗಣಿಸಲು ಪ್ರಯತ್ನಿಸುತ್ತದೆ. ಶಿಕ್ಷಣ ಮತ್ತು ಆರೋಗ್ಯವನ್ನು ವಿಶೇಷವಾಗಿ ಖಾಸಗೀಕರಣಕ್ಕೆ ಗುರಿಪಡಿಸಲಾಗಿದೆ. ನೀತಿ ಆಯೋಗ ತನ್ನ ಮೂರು ವರ್ಷಗಳ ಕಾರ್ಯಸೂಚಿಯಲ್ಲಿ ಎಲ್ಲಾ ಹಂತಗಳಲ್ಲಿ ಆರೋಗ್ಯ ಸೇವೆಗಳನ್ನು ಖಾಸಗೀಕರಣಗೊಳಿಸಲು ಬಯಸುತ್ತದೆ. ಇದು ಜಿಲ್ಲೆಯ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಖಾಸಗಿ ಭಾಗವಹಿಸುವಿಕೆಯನ್ನು ಪ್ರಸ್ತಾಪಿಸಿದೆ. ಪಿಪಿಪಿ ಮಾದರಿಯಡಿಯಲ್ಲಿ 50 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಶಾಲೆಗಳನ್ನು ಖಾಸಗೀಯವರಿಗೆ ಹಸ್ತಾಂತರಿಸುವುದನ್ನು ಕೂಡ ಅದು ಪ್ರಸ್ತಾಪಿಸಿದೆ.

**ಕರ್ಷಕ ಬಿಕ್ಕಟ್ಟು**

2.21 ಗ್ರಾಮೀಣ ಭಾರತದಲ್ಲಿ ದುಡಿಯುವ ಜನರ ಜೀವನ ಮತ್ತು ಆರ್ಥಿಕ ಚಟುವಟಿಕೆಯ ಪ್ರತಿಯೊಂದು ಕ್ಷೇತ್ರ – ಉದಾಹರಣೆಗೆ, ಭೂಸ್ವಾಧೀನ ಮತ್ತು ಭೂ ಸುಧಾರಣಾ ನೀತಿ, ಸಾಗುವಳಿ ಖರ್ಚುಗಳು ಮತ್ತು ಉತ್ಪಾದನೆಯ ಬೆಲೆಗಳು, ಬಡವರಿಗೆ ಲಭ್ಯವಾಗುವ ಸಾಲ ಮತ್ತು ವಿಮೆ ವ್ಯಾಪ್ತಿ, ಆಹಾರ ಭದ್ರತೆ, ಪ್ರಾಣಿ ಸಂಪನ್ಮೂಲಗಳು (ವಿಶೇಷವಾಗಿ ಜಾನುವಾರು ಸಂಪನ್ಮೂಲಗಳು) ಮತ್ತು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಪಟ್ಟವುಗಳು – ಇವುಗಳಲ್ಲಿ ಮೋದಿ ಸರಕಾರದ ನೀತಿಗಳಿಂದ ತೀವ್ರವಾಗಿ ಹಿನ್ನಡೆ ಉಂಟಾಗಿದೆ. ಅನಾಣ್ಯೀಕರಣ ದಿನನಿತ್ಯದ ಗ್ರಾಮೀಣ ಆರ್ಥಿಕ ಜೀವನದಲ್ಲಿ ಅತ್ಯಂತ ಆಳವಾಗಿ ಹಾನಿಯ ಮತ್ತು ಸಂಕೋಚನದ ಪರಿಣಾಮವನ್ನು ಬೀರಿದೆ. ಏಕೆಂದರೆ ಕೃಷಿ ಆರ್ಥಿಕತೆಯಲ್ಲಿ ನಗದು ವಹಿವಾಟುಗಳದ್ದೇ ಪ್ರಾಬಲ್ಯವಿದೆ. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಎಲ್ಲ ರೀತಿಗಳ ಜಾನುವಾರು ವಧೆಯ ಮೇಲೆ ನಿಷೇಧ ಮತ್ತು ಜಾನುವಾರು ವ್ಯಾಪಾರದ ಮೇಲೆ ನಿರ್ಬಂಧಗಳು ರೈತರ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ.

2.22 ಒಟ್ಟಾರೆಯಾಗಿ, ರೈತರು ಒಂದು ಕಡೆ ಹೆಚ್ಚುತ್ತಿರುವ ಬೇಸಾಯದ ವಚ್ಚಗಳು ಮತ್ತು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಈ ಇಕ್ಕುಳದಲ್ಲಿ ಸಿಲುಕ್ಕಿದ್ದಾರೆ. ಹೆಚ್ಚುತ್ತಿರುವ ಬೇಸಾಯದ ವಚ್ಚಗಳು ಮತ್ತು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದರ ಪರಿಣಾಮ ಹಳ್ಳಿಗಾಡಿನ ವಿವಿಧ ವರ್ಗಗಳ ಮೇಲೆ ಏಕರೂಪವಾಗಿಲ್ಲ. ಈ ಪರಿಣಾಮಗಳಲ್ಲಿ ವಿಪರೀತ ಭಿನ್ನತೆಗಳಿವೆ, ಹೆಚ್ಚುತ್ತಿರುವ ಬೇಸಾಯ ವೆಚ್ಚಗಳ ಅತಿ ಹೆಚ್ಚಿನ ಭಾರ ಬಡ ಮತ್ತು ಮಧ್ಯಮ ರೈತರ ಹೆಗಲ ಮೇಲೆ ಬೀಳುತ್ತದೆ.

2.23 ಕಳೆದ ಮೂರು ವರ್ಷಗಳಲ್ಲಿ ಎರಡು ವಿದ್ಯಮಾನಗಳು ಬೆಲೆ ನೀತಿಯನ್ನು ನಿರೂಪಿಸುತ್ತವೆ. ಮೊದಲನೆಯದು, ಅಸಮರ್ಪಕತೆ: ಬೆಲೆಗಳು ಹೆಚ್ಚಾಗಿ ರೈತರ ಉತ್ಪಾದನಾ ವೆಚ್ಚಗಳನ್ನು ಸಹ ಒಳಗೊಂಡಿರುವುದಿಲ್ಲ. ಎರಡನೆಯದಾಗಿ, ವರ್ಷದಿಂದ ವರ್ಷಕ್ಕೆ (ಅಸಮರ್ಪಕವಾಗಿಯಾದರೂ) ಏರುತ್ತ ಬಂದಿರುವ ಕನಿಷ್ಠ ಬೆಂಬಲ ಬೆಲೆಗಳು, ಸ್ಥಗಿತತೆ ಕಾಣುತ್ತಿವೆ. 2014 ರ ಚುನಾವಣಾ ಪ್ರಚಾರದ ಸಮಯದಲ್ಲಿ, ನರೇಂದ್ರ ಮೋದಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಕುರಿತಂತೆ ಉತ್ಪಾದನಾ ವೆಚ್ಚಕ್ಕಿಂತ 50 ಪ್ರತಿಶತದಷ್ಟು ಹೆಚ್ಚು ಇರಬೇಕೆಂಬ ರಾಷ್ಟ್ರೀಯ ರೈತರ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವುದಾಗಿ ಪ್ರಕಟಿಸಿದರು. ಅಧಿಕಾರಕ್ಕೆ ಬಂದ ಸ್ವಲ್ಪ ಕಾಲದಲ್ಲೇ ಬಿಜೆಪಿ ಸರಕಾರ ಫೆಬ್ರವರಿ 2015 ರಲ್ಲಿ ಸುಪ್ರೀಂ ಕೋರ್ಟ್ ಮುಂದೆ ಒಂದು ಅಫಿಡವಿಟ್ ಸಲ್ಲಿಸಿತು. ಇದರಲ್ಲಿ ಆ ಭರವಸೆಯನ್ನು ಪೂರೈಸುವುದು ಅಸಾಧ್ಯವೆಂದು ಅದು ಹೇಳಿತು. ಕಳೆದ ಮೂರು

ವರ್ಷಗಳಲ್ಲಿ ಅಕ್ಕಿ ಮತ್ತು ಗೋಧಿಗಳಿಗೆ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆಯಲ್ಲಿನ ಹೆಚ್ಚಳ ಹಿಂದಿನ ಐದು ವರ್ಷಗಳಿಗೆ ಹೋಲಿಸಿದರೆ ಬಹಳ ಕಡಿಮೆ.

2.24 ನವ–ಉದಾರವಾದದ ಅಡಿಯಲ್ಲಿ ಆಂತರಿಕ ಮತ್ತು ಜಾಗತಿಕ ಬೆಲೆಗಳ ನಡುವೆ ಹೆಚ್ಚೆಚ್ಚಾಗಿ ಹೊಂದಾಣಿಕೆ ಕಾಣುತ್ತಿರುವುದು, ಅತ್ಯಂತ ಏಕಸ್ವಾಮ್ಯದ ಮಾರುಕಟ್ಟೆ ವಾತಾವರಣದಲ್ಲಿ ಉಂಟಾಗುವ ಅಂತರ್ರಾಷ್ಟ್ರೀಯ ಬೆಲೆಗಳಲ್ಲಿನ ತೀವ್ರ ಏರಿಳಿಕೆಗಳನ್ನು ಭಾರತೀಯ ಕೃಷಿಗೆ ಸಕ್ರಿಯವಾಗಿ ಆಮದು ಮಾಡುತ್ತಿದೆ. ಭಾರತ ಸರ್ಕಾರವು ಈಗಿರುವ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ಮತ್ತು ಧಾನ್ಯ ಖರೀದಿ ಧೋರಣೆ ಡಬ್ಲ್ಯುಟಿಒದ ನಿಬಂಧನೆಗಳನ್ನು ಅಥವ ನಿರ್ದಿಷ್ಟ ಉತ್ಪನ್ನಗಳಿಗೆ ಬೆಂಬಲದ ಮಿತಿಯನ್ನು ಉಲ್ಲಂಘಿಸುತ್ತಿವೆ ಎಂಬ ಕಾರಣಕ್ಕೆ ಅವನ್ನು ಕಡಿತ ಮಾಡಬೇಕು ಎಂಬ ಡಬ್ಲ್ಯುಟಿಒ ವ್ಯವಸ್ಥೆಯ ಒತ್ತಡಕ್ಕೆ ಒಳಗಾಗಿದೆ. ಪ್ರಸಕ್ತ ಸರಕಾರದ ಆಶಯಗಳು ಭಾರತ ಆಹಾರ ನಿಗಮ(ಎಫ್‌ಸಿಐ)ವನ್ನು ಖಾಸಗೀಕರಿಸಬೇಕು ಮತ್ತು ಧಾನ್ಯ ಖರೀದಿ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು ಎಂಬ 2015ರ ಶಾಂತಕುಮಾರ್ ಸಮಿತಿಯ ವರದಿಯ ಕರೆಯಿಂದ ಹಾಗೂ ರಾಜ್ಯಸರಕಾರಗಳು ಕೇಂದ್ರದಿಂದ ಪ್ರಕಟಿಸಿದ ಎಂಎಸ್‌ಪಿ ಗಿಂತ ಹೆಚ್ಚಿನ ಒಂದು ಬೋನಸನ್ನು ಅಥವ ಎಂಎಸ್‌ಪಿ ಯನ್ನು ಘೋಷಿಸದಂತೆ ತಡೆಯುವ ಆದೇಶದಿಂದ ಸ್ಪಷ್ಟವಾಗಿವೆ. ಈ ಆದೇಶ ಕೇಂದ್ರೀಯ ಎಂಎಸ್‌ಪಿಗಿಂತ ಹೆಚ್ಚಿನ ಎಂಎಸ್‌ಪಿ ಪ್ರಕಟಿಸುವ ರಾಜ್ಯಗಳಿಂದ ಖರೀದಿ ಕಾರ್ಯಾಚರಣೆಗಳನ್ನು ಎಫ್‌ಸಿಐ ನಿಲ್ಲಿಸುತ್ತದೆ ಎಂಬ ಬೆದರಿಕೆಯೊಂದಿಗೆ ಬಂದಿದೆ. ಇವು ಭಾರತ ಸರಕಾರ ಡಬ್ಲ್ಯುಟಿಒ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒತ್ತಡದಿಂದ ಕೋಟ್ಯಂತರ ರೈತರಿಗೆ ಬೆಲೆ ಬೆಂಬಲ ಮತ್ತು ಧಾನ್ಯ ಖರೀದಿಯ ತನ್ನ ವಚನದಿಂದ ಹಿಂದಕ್ಕೆ ಹೋಗುತ್ತಿದೆ ಎಂಬುದರ ಸ್ಪಷ್ಟ ಎಚ್ಚರಿಕೆಗಳು.

2.25 ಎನ್‌ಡಿಎ ಸರ್ಕಾರ ಗ್ರಾಮೀಣ ಮತ್ತು ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಯುಪಿಎ ನೀತಿಗಳನ್ನು ತೀವ್ರಗೊಳಿಸಿದೆ. 2000ದ ದಶಕದಲ್ಲಿ ಕೃಷಿ ಸಾಲದ ಪುನರುಜ್ಜೀವನದ ಪ್ರಮುಖ ಫಲಾನುಭವಿಗಳು ಕಾರ್ಪೊರೇಟ್ ಗುಂಪುಗಳು, ಜಾಯಿಂಟ್–ಸ್ಟಾಕ್ ಕಂಪನಿಗಳು ಮತ್ತು ಇತರ ಸಂಘಟನೆಗಳಾಗಿದ್ದವು. ಸಾಮಾನ್ಯವಾಗಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಕೃಷಿಯು ವಾಣಿಜ್ಯ ಪ್ರಾಮುಖ್ಯತೆಯ ಒಂದು ಚಟುವಟಿಕೆಯಾಗಿ ಉಳಿದಿಲ್ಲ, ಇದು ಬಹಳ ಕಳವಳಕಾರಿ ವಿಷಯವಾಗಿದೆ.

2.26 ಉದಾರೀಕರಣದ ನಂತರದ ಅವಧಿಯಲ್ಲಿ, ಬೆಲೆ ಏರುಪೇರು ಮತ್ತು ಪರಿಣಾಮವಾಗಿ ಆದಾಯದ ಅಸ್ಥಿರತೆ ರೈತರ ಆತ್ಮಹತ್ಯೆಗಳು ಮತ್ತು ಕರ್ಷಕ ಹತಾಶೆಗಳಿಗೆ ಪ್ರಮುಖ ಕಾರಣಗಳಾಗಿವೆ. ಆದರೆ, ಸರಕಾರ ರೈತ ಸಂಘಟನೆಗಳು ಮಾಡಿದ ಬೇಡಿಕೆಗಳ ಹೊರತಾಗಿಯೂ, ಸಮಗ್ರ ಬೆಳೆ ಮತ್ತು ಆದಾಯ ವಿಮಾ ಯೋಜನೆಯ ವಿಚಾರವನ್ನು ನಿರ್ಲಕ್ಷಿಸಿದೆ. 'ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನಾ'(ಪಿಎಂಎಫ್‌ಬಿವೈ) ಸೈದ್ಧಾಂತಿಕವಾಗಿ ಮಾತ್ರ ಸಾಲಗಾರರಲ್ಲದ ರೈತರನ್ನು ಒಳಗೊಳ್ಳುತ್ತದೆ. ಸಣ್ಣ ಮತ್ತು ಅಂಚಿನ ರೈತರು, ಅದರಲ್ಲೂ ವಿಶೇಷವಾಗಿ ದಲಿತ ಮತ್ತು ಆದಿವಾಸಿ ವರ್ಗಗಳಿಗೆ ಸೇರಿದವರನ್ನು ಹೀಗೆ ಹೊರತುಪಡಿಸುತ್ತದೆ, ಏಕೆಂದರೆ ಅವರಿಗೆ ಪ್ರೀಮಿಯಂ ತೆರುವ ಶಕ್ತಿಯಿಲ್ಲ.

**ನೈಸರ್ಗಿಕ ಸಂಪನ್ಮೂಲಗಳು ಮತ್ತು ಪರಿಸರದ ಲೂಟಿ**

2.27 ಮೋದಿ ಆಳ್ವಿಕೆ ಆರಂಭವಾದಂದಿನಿಂದ ಈಗಾಗಲೇ ದುರ್ಬಲವಾಗಿರುವ ಪರಿಸರ ನಿಯಂತ್ರಣ ಚೌಕಟ್ಟಿನ ಮೇಲೆ ತೀವ್ರ ಪ್ರಹಾರಗಳು ನಡೆಯುತ್ತಿವೆ ಮತ್ತು ಆಡಳಿತಾತ್ಮಕ ಕಾರ್ಯವಿಧಾನಗಳನ್ನು ಬುಡಮೇಲು ಮಾಡಿ ಕಾರ್ಪೊರೇಟ್ ಹಿತಾಸಕ್ತಿಗಳು ಹಾಗೂ ಶ್ರೀಮಂತ–ಪರ ಅಭಿವೃದ್ಧಿ ಕಾರ್ಯಸೂಚಿಯನ್ನು ಸುಗಮಗೊಳಿಸುವತ್ತ ನಿರ್ದೇಶಿಸಲಾಗುತ್ತಿದೆ. ಪ್ರಸಕ್ತ ವ್ಯವಸ್ಥೆಯ ಅಡಿಯಲ್ಲಿ, ಹಲವಾರು ಪರಿಸರಿ ಸಂಬಂಧಿ ನಿಬಂಧನೆಗಳನ್ನು ತೀವ್ರವಾಗಿ ದುರ್ಬಲಗೊಳಿಸಲಾಗಿದೆ, ಮತ್ತು ಪರಿಸರ ಸೂಕ್ಷ್ಮ ಅರಣ್ಯ, ಕರಾವಳಿ ಪ್ರದೇಶಗಳಲ್ಲಿಯೂ ಸೇರಿದಂತೆ ಕೈಗಾರಿಕಾ ಅಥವಾ ಮೂಲಸೌಕರ್ಯ ಯೋಜನೆಗಳಿಗೆ ಪರಿಸರ ಅನುಮತಿಗಳನ್ನು ನೀಡುವುದು ವಾಡಿಕೆಯಾಗಿ ಬಿಟ್ಟಿದೆ, ಶ್ರದ್ಧಾಪೂರ್ಣ ಪರಿಸರ ಮೌಲ್ಯಮಾಪನ ವಿರಳವಾಗಿದೆ. ಅರಣ್ಯ ಮತ್ತು ಕರಾವಳಿ ಪ್ರದೇಶಗಳಲ್ಲಿ ಕಲ್ಲಿದ್ದಲು ಗಣಿಗಾರಿಕೆ ಸೇರಿದಂತೆ ಅಗೆದು ತೆಗೆಯುವ ಉದ್ದಿಮೆಗಳಿಗೆ ಮತ್ತು ಜತೆಗೆ ರಸ್ತೆಗಳು ಮತ್ತು ಇತರ ಮೂಲರಚನೆಗಳಿಗೆ ಮುಖ್ಯವಾದ ವನ್ಯಜೀವಿ ಮೀಸಲು ಪ್ರದೇಶಗಳಲ್ಲೂ ಪರವಾನಗಿಗಳನ್ನು ಶರವೇಗದಲ್ಲಿ ಕೊಡಲಾಗುತ್ತಿದೆ. ಅರಣ್ಯ ಹಕ್ಕುಗಳ ಕಾಯಿದೆ, ಪರಿಶಿಷ್ಟ ಪಂಗಡಗಳು ಕಾಯಿದೆ, ವನ್ಯಜೀವಿ ಕಾಯಿದೆ, ಕರಾವಳಿ ವಲಯ ನಿಬಂಧನೆಗಳು ಮತ್ತು ಇತರ ಶಾಸಕಾಂಗದ ಅಂಶಗಳನ್ನು ತುಳಿದು ಹಾಕಲಾಗುತ್ತಿದೆ ಅಥವಾ ಸಂಪೂರ್ಣವಾಗಿ ಉಲ್ಲಂಘಿಸಲಾಗುತ್ತಿದೆ. ಪರಿಸರೀಯ ಪ್ರಭಾವದ ಮೌಲ್ಯಮಾಪನ (ಇಐಎ)ಕ್ಕೆ ಇರುವ ಸಾಂಸ್ಥಿಕ ವ್ಯವಸ್ಥೆಗಳನ್ನು ಇಐಎ ಯನ್ನು ರಾಜ್ಯಗಳಿಗೆ ವರ್ಗಾಯಿಸುವ ಮೂಲಕ 'ಇಂತಹ ಸಂರಚನೆಯನ್ನೇ ಬುಡಮೇಲು ಮಾಡುವ ಪ್ರಯತ್ನ ಈಗ ನಡೆದಿದೆ. ಹೀಗೆ ನೈಸರ್ಗಿಕ ಸಂಪನ್ಮೂಲಗಳ ದುರಾಶಾಪೂರ್ಣ ಸುಲಿಗೆಗೆ ಮತ್ತು ಪರಿಸರಕ್ಕೆ ವ್ಯಾಪಕ ಹಾನಿಯನ್ನುಂಟುಮಾಡುವುದಕ್ಕೆ ಬಾಗಿಲುಗಳನ್ನು ಪೂರ್ಣವಾಗಿ ತೆರೆದು ಕೊಡಲಾಗಿದೆ; ಇದು ಅರಣ್ಯವಾಸಿಗಳು, ಬುಡಕಟ್ಟು ಜನಗಳು, ಮೀನುಗಾರರು ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಬದುಕು ಮತ್ತು ಜೀವನೋಪಾಯಗಳನ್ನು ಬಹುವಾಗಿ ಬಾಧಿಸುತ್ತಿದೆ.

## ಜನರ ಪರಿಸ್ಥಿತಿಗಳು

### ನಿರುದ್ಯೋಗ

2.28 ಮೋದಿ ಸರಕಾರದ ಅತ್ಯಂತ ದೊಡ್ಡ ವೈಫಲ್ಯ ಉದ್ಯೋಗ ಕುರಿತಾದ್ದು. ಸಿಎಂಐಇ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ–ಭಾರತೀಯ ಆರ್ಥಿಕದ ನಿಗಾ ಕೇಂದ್ರ) ಮಾಹಿತಿಯ ಪ್ರಕಾರ, ಜನವರಿ–ಏಪ್ರಿಲ್ 2017 ರ ಅವಧಿಯಲ್ಲಿ ಅದರ ಹಿಂದಿನ ನಾಲ್ಕು ತಿಂಗಳ, ಅಂದರೆ ಸೆಪ್ಟೆಂಬರ್– ಡಿಸೆಂಬರ್ 2016 ಅವಧಿಗೆ ಹೋಲಿಸಿದರೆ, ಸುಮಾರು 1.5 ಮಿಲಿಯನ್ (15 ಲಕ್ಷ) ಉದ್ಯೋಗಗಳು ನಷ್ಟಗೊಂಡಿವೆ. ಪ್ರತಿ ತಿಂಗಳು ಸುಮಾರು 10 ಲಕ್ಷ ಜನರು ಉದ್ಯೋಗ ಮಾರುಕಟ್ಟೆಯನ್ನು ಪ್ರವೇಶಿಸುತ್ತಿದ್ದಾರೆ. ಅನೇಕರು ಉದ್ಯೋಗ ಪಡೆಯಲು ಸಾಧ್ಯವಾಗದೆ ನಿರುದ್ಯೋಗಿಗಳಾಗಿ ಉಳಿಯುತ್ತಾರೆ. ಅನಾಣ್ಯೀಕರಣದ ಫಲಿತಾಂಶವಾಗಿ ಕಾರ್ಮಿಕರ ಭಾಗವಹಿಸುವಿಕೆಯ ದರ ಜನವರಿ–ಅಕ್ಟೋಬರ್ 2016 ರ ಅವಧಿಯ ಸರಾಸರಿ ಶೇ. 46.9 ದಿಂದ ಎಪ್ರಿಲ್ 2017 ರಲ್ಲಿ ಶೇ.43.5ಗೆ ಕುಸಿಯಿತು. ಅನಾಣ್ಯೀಕರಣದ ಆಘಾತವಲ್ಲದೆ, ಹೊಸ ಹೂಡಿಕೆಗಳ ಅಭಾವ ಮತ್ತು ಆರ್ಥಿಕ ಮಂದಗತಿ ಕಾರ್ಮಿಕ ಭಾಗವಹಿಸುವಿಕೆಯ ದರಗಳು ಕುಸಿಯಲು ಮುಖ್ಯ ಕಾರಣಗಳು. ಇದು ನಿರುದ್ಯೋಗಿಗಳ ಸಂಖ್ಯೆಯಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತದೆ. ಒಇಸಿಡಿಯ ಯ ಭಾರತ ಆರ್ಥಿಕ ಸಮೀಕ್ಷೆ 2017 ರ ಪ್ರಕಾರ, 15–29 ವರ್ಷ ವಯಸ್ಸಿನ 30ಶೇ. ಯುವಕರು ಉದ್ಯೋಗ ಅಥವಾ ಶಿಕ್ಷಣ ಅಥವಾ ತರಬೇತಿಯಲ್ಲಿ ಇಲ್ಲ. ್ಸ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಅಡಿಯಲ್ಲಿ ಕೆಲಸದ ದಿನಗಳ ಕಡಿತದಿಂದಾಗಿ ಗ್ರಾಮೀಣ ನಿರುದ್ಯೋಗದಲ್ಲಿನ ಬಿಕ್ಕಟ್ಟು ಉಲ್ಬಣಗೊಂಡಿದೆ. ಒಂದು ಹೊಸ ಲಕ್ಷಣ ಎಂದರೆ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ದೊಡ್ಡ ಪ್ರಮಾಣದ ರಿಟ್ರೆಂಚ್‌ಮೆಂಟ್. ಇಲ್ಲಿ ಸಾವಿರಾರು ನೌಕರರನ್ನು ತೆಗೆದು ಹಾಕಲಾಗಿದೆ.

### ಅಸಮಾನತೆಗಳು

2.29 25 ವರ್ಷಗಳ ಉದಾರೀಕರಣದ ನಂತರ, ಭಾರತವು ವಿಶ್ವದಲ್ಲೇ ಅತ್ಯಂತ ಅಸಮಾನ ಸಮಾಜಗಳಲ್ಲಿ ಒಂದಾಗಿದೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆ(ಎನ್‌ಎಸ್‌ಎಸ್‌ಒ) ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ 2016 ರ ಒಂದು ಅಧ್ಯಯನವು ಶೇಕಡ 1 ರಷ್ಟು ಅತ್ಯಂತ ಶ್ರೀಮಂತ ಭಾರತೀಯರು ದೇಶದ ಎಲ್ಲಾ ಸಂಪತ್ತಿನ ಶೇ 28 ರಷ್ಟು ಪಾಲನ್ನು ಹೊಂದಿದ್ದಾರೆ ಎಂದು ತೋರಿಸಿದೆ. 1991 ರಲ್ಲಿ ಇದು ಶೇಕಡಾ 11 ಇತ್ತು. ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಮೇಲಿನ 10ಶೇ.ರಷ್ಟು ಮಂದಿ ಹೊಂದಿರುವ ಸರಾಸರಿ ಆಸ್ತಿ ತಳಮಟ್ಟದ 10ಶೇ. ರಷ್ಟು ಜನರ ಸರಾಸರಿ ಆಸ್ತಿಗಿಂತ 228 ಪಟ್ಟು ಹೆಚ್ಚಿದ್ದರೆ, ನಗರಪ್ರದೇಶಗಳಲ್ಲಿ ಅತ್ಯಂತ ಮೇಲಿನ 10ಶೇ. ರಷ್ಟು ಜನ ಹೊಂದಿರುವ ಸರಾಸರಿ ಆಸ್ತಿ ತಳಮಟ್ಟದ 10ಶೇ. ಜನಗಳಿಗಿಂತ ಸುಮಾರು 50,000 ಪಟ್ಟು ಹೆಚ್ಚಿದೆ. ಆಸ್ತಿ ವಿತರಣೆಯಲ್ಲಿನ ಅಸಮಾನತೆಯು ನಗರ ಭಾರತದಲ್ಲಿ ಹೆಚ್ಚು ಗೋಚರವಾಗಿದ್ದು, ಅತ್ಯಂತ ಮೇಲಿನ 'ಶೇ .10 ರಷ್ಟು ಜನ ಒಟ್ಟು ಆಸ್ತಿಯ ಶೇಕಡಾ 63ರಷ್ಟು ಹೊಂದಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಮೇಲಿನ ಶೇ.10 ಮಂದಿ ಒಟ್ಟು ಆಸ್ತಿಗಳ 48ಶೇ. ಹೊಂದಿದ್ದಾರೆ. ಕ್ರೆಡಿಟ್ ಸ್ಯೂಸೆಯ ಕುಟುಂಬ ಸಂಪತಿನ ವರದಿ ತೀವ್ರವಾದ ಅಸಮಾನತೆಯ ಮತ್ತೊಂದು ಸೂಚಕವಾಗಿದೆ. ಶೇ. 1 ಅತ್ಯಂತ ಶ್ರೀಮಂತ ಭಾರತೀಯರು ಕುಟುಂಬ ಸಂಪತ್ತಿನ ಶೇ 58.4 ರಷ್ಟು ಪಾಲನ್ನು ಹೊಂದಿದ್ದಾರೆ.

### ಆಹಾರ ಭದ್ರತೆ ಮತ್ತು ಆಧಾರ್

2.30 ಪಡಿತರ ರೇಷನ್ ಪಡೆಯಲು ಆಧಾರ್ ಬಯೋ–ಮೆಟ್ರಿಕ್ ಗುರುತನ್ನು ಕಡ್ಡಾಯ ಮಾಡುತ್ತಿರುವುದು ಲಕ್ಷಾಂತರ ಕುಟುಂಬಗಳನ್ನು ಅದರಿಂದ ಹೊರಹಾಕಲು ಒಂದು ಸಾಧನವಾಗಿದೆ. ಬಯೋ–ಮೆಟ್ರಿಕ್ ದೃಢೀಕರಣ ಮತ್ತು ಆಧಾರ್ ಜೋಡಣೆಯ ವೈಫಲ್ಯವು ಬೃಹತ್ ಸಂಖ್ಯೆಯ ಬಡಜನರು ಪಡಿತರ ಆಹಾರಗಳನ್ನು ಪಡೆಯುವುದನ್ನು ತಪ್ಪಿಸುತ್ತಿದೆ. ರೇಷನ್ ಒದಗಿಸುವಲ್ಲಿ ನಿರಾಕರಣೆ ಜಾರ್ಖಂಡ್ ಮತ್ತು ಇತರ ಸ್ಥಳಗಳಲ್ಲಿ ಹಸಿವಿಗೆ ಸಂಬಂಧಪಟ್ಟ ಸಾವುಗಳಿಗೆ ಕಾರಣವಾಗಿದೆ. ಅನೇಕ ರಾಜ್ಯಗಳಲ್ಲಿ ಆಹಾರ ಭದ್ರತಾ ಕಾಯಿದೆಯ ಅಂಶಗಳನ್ನು ಸರಿಯಾಗಿ ಕಾರ್ಯಗತಗೊಳಿಸಲಾಗುತ್ತಿಲ್ಲ ಮತ್ತು ಕೇಂದ್ರ ಮಾರ್ಗದರ್ಶಿ ಸೂತ್ರಗಳು ಅರ್ಹ ಜನರು ದೊಡ್ಡ ಸಂಖ್ಯೆಯಲ್ಲಿ ಆದ್ಯತೆಯ ಸ್ಥಾನಮಾನ ಪಡೆಯದಂತೆ ತಪ್ಪಿಸುತ್ತಿವೆ. ಇದು ಕೇರಳದಲ್ಲಿ ಪಡಿತರ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಪರಿಣಾಮವನ್ನು ಉಂಟುಮಾಡಿದೆ. ಇವೆಲ್ಲವುಗಳಿಂದಾಗಿ ಜನಗಳಿಗೆ ಆಹಾರ ಭದ್ರತೆ ಗಂಭೀರ ಅಪಾಯಕ್ಕೆ ಈಡಾಗಿದೆ.

2.31 ಒಟ್ಟಾರೆಯಾಗಿ, ಆಧಾರ್ ಒಂದು ಸಮಗ್ರ ಕಣ್ಗಾವಲು ವ್ಯವಸ್ಥೆಯಾಗಿ ಬಿಟ್ಟಿದೆ ಮತ್ತು ನಾಗರಿಕರ ಖಾಸಗಿತನದ ಹಕ್ಕನ್ನು ಉಲ್ಲಂಘಿಸುವಂತದ್ದಾಗಿದೆ. ಇದಲ್ಲದೆ, ಯುಐಡಿಎಐನ ಮಾಹಿತಿ ಭಂಡಾರವನ್ನು ಖಾಸಗಿ ಹಿತಾಸಕ್ತಿಗಳಿಗೆ ವ್ಯಾಪಾರೀ ಲಾಭ ದೋಚಲಿಕ್ಕೆ ಲಭ್ಯಗೊಳಿಸಲಾಗುತ್ತಿದೆ.

### ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ

2.32 2014ರಿಂದೀಚೆಗೆ ಅಂತರಾಷ್ಟ್ರೀಯ ತೈಲ ಬೆಲೆಗಳ ತೀವ್ರ ಇಳಿಕೆಯ ಪ್ರಯೋಜನವನ್ನು ಜನರು ಪಡೆಯದಂತೆ ವಂಚಿಸಲಾಗಿದೆ. ಏಕೆಂದರೆ ಮೋದಿ ಸರಕಾರವು ಕಳೆದ ಮೂರು ವರ್ಷಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ

ಸುಂಕಗಳನ್ನು ಒಂಬತ್ತು ಬಾರಿ ಹೆಚ್ಚಿಸಿದೆ. ಇದರಿಂದಾಗಿ ಒಂದು ಲೀಟರ್ ಪೆಟ್ರೋಲ್‌ನ ಬೆಲೆಯಲ್ಲಿ ತೆರಿಗೆಯ ಭಾಗ ರೂ. 21.48 ಮತ್ತು ಡೀಸೆಲ್‌ನಲ್ಲಿ ರೂ. 17.33. ಅಂತರರಾಷ್ಟ್ರೀಯ ತೈಲ ಬೆಲೆಗಳಲ್ಲಿ ಏರಿಕೆಯ ಪ್ರವೃತ್ತಿಯೊಂದಿಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಮತ್ತೆ ಏರುತ್ತಿವೆ. ಅಬಕಾರಿ ಸುಂಕಗಳನ್ನು ಕಡಿತಗೊಳಿಸುವುದರ ಮೂಲಕ ಜನರಿಗೆ ಪರಿಹಾರವನ್ನು ಒದಗಿಸಲು ಸರ್ಕಾರ ನಿರಾಕರಿಸುತ್ತಿದೆ.

**ಕಾರ್ಮಿಕರ ಮೇಲೆ ದಾಳಿಗಳು**

2.33 ನವ ಉದಾರವಾದಿ ನೀತಿಗಳನ್ನು ಅನುಸರಿಸುವ ಪ್ರಯತ್ನದಲ್ಲಿ, ಬಿಜೆಪಿ ನೇತೃತ್ವದ ಸರ್ಕಾರವು ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿದೆ. ಇದು ಉದ್ಯೋಗದಾತರರಿಗೆ ಪ್ರಯೋಜನವಾಗುವಂತೆ ಮತ್ತು 'ವ್ಯಾಪಾರ ಮಾಡುವಲ್ಲಿ ಸುಗಮತೆ'ಯನ್ನು ಉತ್ತಮ ಪಡಿಸಲು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸಿದೆ. ಅಪ್ರೆಂಟಿಸ್ (ತಿದ್ದುಪಡಿ) ಕಾಯಿದೆ ಮತ್ತು ಕಾರ್ಮಿಕ ಕಾನೂನುಗಳ ತಿದ್ದುಪಡಿ ಕಾಯಿದೆಯನ್ನು ಈಗಾಗಲೇ ತರಲಾಗಿದೆ. ಸಂಸತ್ತಿನಲ್ಲಿ ಮಂಡಿಸಲಾದ ವೇತನಗಳ ಕುರಿತ ಸಂಹಿತೆ ಮಸೂದೆ ಮತ್ತು ಕೈಗಾರಿಕಾ ಸಂಬಂಧಗಳು ಹಾಗೂ ಸಾಮಾಜಿಕ ಭದ್ರತೆಯ ಕುರಿತಾದ ಪ್ರಸ್ತಾವಿತ ಸಂಹಿತೆಗಳು, ಸಂಘಟನೆಯ, ಸಾಮೂಹಿಕ ಚೌಕಾಶಿಯ ಮತ್ತು ಸಾಮಾಜಿಕ ಭದ್ರತೆಯ ಹಕ್ಕುಗಳು ಸೇರಿದಂತೆ ಮೂಲಭೂತ ಹಕ್ಕುಗಳಿಂದ ಕಾರ್ಮಿಕರನ್ನು ವಂಚಿಸುತ್ತವೆ. ಹಲವಾರು ಬಿಜೆಪಿ ಆಳ್ವಿಕೆಯ ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿವೆ. ಭಾರತ ಸರಕಾರ ಎಲ್ಲಾ ರಾಜ್ಯ ಸರ್ಕಾರಗಳನ್ನು ಇದನ್ನು ಅನುಸರಿಸಲು ನಿರ್ದೇಶಿಸಿದೆ.

2.34 ಸಂಘಟಿತ ವಲಯದಲ್ಲಿನ ಕಾಂಟ್ರಾಕ್ಟ್ ಮತ್ತು ಕ್ಯಾಶುವಲ್ ಕಾರ್ಮಿಕರ ಪಾಲು ಹೆಚ್ಚಾಗಿದೆ. ಲೇಬರ್ ಬ್ಯೂರೋದ ಐದನೇ ವಾರ್ಷಿಕ ಉದ್ಯೋಗ–ನಿರುದ್ಯೋಗ ಸಮೀಕ್ಷೆಯ ವರದಿ 2015–16, (ಏಪ್ರಿಲ್ ಮತ್ತು ಡಿಸೆಂಬರ್ 2015 ರ ನಡುವೆ ನಡೆಸಿದ್ದು) ಪ್ರಕಾರ ದೇಶದಲ್ಲಿ 77% ರಷ್ಟು ಕುಟುಂಬಗಳು ಖಾಯಂ ಕೂಲಿ/ಸಂಬಳ ಪಡೆಯುವ ವ್ಯಕ್ತಿಯನ್ನು ಹೊಂದಿಲ್ಲ. ನಿಯಮಿತ ಕೂಲಿ /ಸಂಬಳದ ಕಾರ್ಮಿಕರಲ್ಲಿ ಶೇ 57.2% ರಷ್ಟು ತಿಂಗಳಿಗೆ 10,000 ರೂ.ಕ್ಕಿಂತ ಕಡಿಮೆ ಸಂಪಾದಿಸುತ್ತಾರೆ. 38.5% ಗುತ್ತಿಗೆ ಕಾರ್ಮಿಕರು ಮತ್ತು 59.3% ರಷ್ಟು ಕ್ಯಾಶುಯಲ್ ಕೆಲಸಗಾರರು 5,000 ಕ್ಕಿಂತಲೂ ಕಡಿಮೆ ಹಣ ಸಂಪಾದಿಸುತ್ತಾರೆ.

2.35 ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ 23.7% ಕ್ಕೆ ಇಳಿದಿದೆ. ಸರ್ಕಾರಿ ಯೋಜನೆಗಳಲ್ಲಿ ಕೆಲಸ ಮಾಡುವ, ಬಹುಪಾಲು ಮಹಿಳೆಯರೇ ಇರುವ ಲಕ್ಷಾಂತರ ಕಾರ್ಮಿಕರನ್ನು "ಕಾರ್ಮಿಕರು" ಎಂದು ಗುರುತಿಸಿ, ಅವರಿಗೆ ಕನಿಷ್ಠ ವೇತನವನ್ನು ಪಾವತಿಸಿ, ಸಾಮಾಜಿಕ ಭದ್ರತೆಯಪ್ರಯೋಜನಗಳನ್ನು ಒದಗಿಸುವಂತೆ ಐಎಲ್‌ಸಿ ಮಾಡಿರುವ ಶಿಫಾರಸನನು ಜಾರಿಗೊಳಿಸಲು ಸರ್ಕಾರ ನಿರಾಕರಿಸಿದೆ. ಈ ಯೋಜನೆಗಳನ್ನು ಖಾಸಗೀಕರಣಗೊಳಿಸಲು ಮತ್ತು ಅವುಗಳನ್ನು ಕಳಚಿ ಹಾಕಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

2.36 ಲಕ್ಷಾಂತರ ಕಾರ್ಮಿಕರು ನೋಟು ರದ್ದತಿಯಿಂದಾಗಿ ತಮ್ಮ ಉದ್ಯೋಗ ಮತ್ತು ಆದಾಯವನ್ನು ಕಳೆದುಕೊಂಡರು. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ)ಯ ಮಾಹಿತಿ ಪ್ರಕಾರ, ಅಕ್ಟೋಬರ್ 2016 ಮತ್ತು ಅಕ್ಟೋಬರ್ 2017 ರ ನಡುವೆ 90 ಲಕ್ಷ ಉದ್ಯೋಗಗಳು ಕಳೆದುಹೋಗಿವೆ. ಪಟ್ಟಿಮಾಡಿದ ಕಂಪನಿಗಳಲ್ಲಿ ಬಹುಪಾಲು ಕಂಪನಿಗಳು 2016–17ರಲ್ಲಿ ತಮ್ಮ ಉದ್ಯೋಗಗಳಲ್ಲಿ ನಿವ್ವಳ ಇಳಿಕೆಯನ್ನು ತೋರಿಸಿವೆ.

**ಮಹಿಳೆಯರ ಸ್ಥಾನಮಾನ – ಹಿನ್ನಡೆ**

2.37 ಕಳೆದ ನಾಲ್ಕು ವರ್ಷಗಳಲ್ಲಿ ಮಹಿಳೆಯರ ಹಕ್ಕುಗಳು ಆರ್ಥಿಕ ಸ್ವಾತಂತ್ರ್ಯ, ಭದ್ರತೆ ಹಾಗೂ ಸ್ವಾಯತ್ತತೆಯ ವಿಷಯಗಳಲ್ಲಿ ಹಿನ್ನಡೆ ಕಾಣಬಂದಿದೆ. ಮಹಿಳೆಯರ ವಿರುದ್ಧ ಲೈಂಗಿಕ, ಕೌಟುಂಬಿಕ ಹಿಂಸಾಚಾರಗಳು, ಸೈಬರ್ ಅಪರಾಧಗಳು ಮತ್ತು ದಲಿತ ಮಹಿಳೆಯರ ವಿರುದ್ಧ ಜಾತಿ ಆಧಾರಿತ ಹಿಂಸಾಚಾರಗಳು ಹೆಚ್ಚಿವೆ. 2016ರಲ್ಲಿ ಪ್ರತಿದಿನ ಸರಾಸರಿ 106 ರಂತೆ ಅತ್ಯಾಚಾರದ ಪ್ರಕರಣಗಳು ದಾಖಲಾಗಿ, ಮಹಿಳೆಯರ ವಿರುದ್ಧ ಹಿಂಸಾಚಾರ ಹಿಂದಿನ ವರ್ಷ 2015ಕ್ಕೆ ಹೋಲಿಸಿದರೆ ಶೇ 2.9 ರಷ್ಟು ಹೆಚ್ಚಾಗಿದೆ. ಹೆಣ್ಣು ಶಿಶುಗಳ ಮೇಲಿನ ಅತ್ಯಾಚಾರ ಶೇ 82ರಷ್ಟು ಹೆಚ್ಚಿರುವುದು ಅತ್ಯಂತ ಆತಂಕಕಾರಿ ಲಕ್ಷಣ. ದುಡಿಮೆಯ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಕಿರುಕುಳವಿಪರೀತವಾಗಿ ಹೆಚ್ಚಿವೆ. ಆದರೆ ಶಿಕ್ಷೆಯಾಗಿರುವ ಪ್ರಮಾಣ ಈಗಲೂ ಬಹಳ ಕಡಿಮೆ. ಇನ್ನೊಂದೆಡೆಯಲ್ಲಿ, ಮಹಿಳೆಯರಿಗೆ ರಕ್ಷಣೆ ಒದಗಿಸುವ ಐಪಿಸಿ ಯ ಸೆಕ್ಷನ್ 498ಎ ನಂತಹ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದು ಮಹೀಲೆಯರ ಭದ್ರತೆಗೆ ಆದ್ಯತೆ ಕೊಡುವಲ್ಲಿ ಮತ್ತು ವರ್ಮಾ ಸಮಿತಿಯ ಶಿಫಾರಸುಗಳನ್ನು ಕಾರ್ಯಗತ ಮಾಡುವುದರಲ್ಲಿ ಮೋದಿ ಸರ್ಕಾರದ ಸಂಪೂರ್ಣ ವಿಫಲತೆಯನ್ನು ತೋರಿಸುತ್ತದೆ.

2.38 ಬಡ, ಪರಿಶಿಷ್ಟ ಜಾತಿ ಮತ್ತು ಆದಿವಾಸಿ ಮಹಿಳೆಯರು ತಮ್ಮ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳ ಮೇಲಾಗುತ್ತಿರುವ ದ್ವಿಮುಖ ಪ್ರಹಾರಗಳಿಗೆ ಅತಿ ಹೆಚ್ಚಾಗಿ ಗುರಿಯಾಗುವವರು. ಬೆಲೆ ಏರಿಕೆ, ಆಹಾರ ಭದ್ರತೆಯನ್ನು

ದುರ್ಬಲಗೊಳಿಸಿರುವುದು, ಮಹಿಳಾ ಸ್ವಸಹಾಯ ಗುಂಪುಗಳ ಅವಶ್ಯಕತೆಗಳ ಕ್ರಿಮಿನಲ್ ಉಪೇಕ್ಷೆ, ಮಹಿಳೆಯರನ್ನು ವಿಪರೀತ ಬಾಧಿಸಿವೆ. ಸಾಂಸ್ಥಿಕ ಸಾಲ ದೊರೆಯದ ಕಾರಣ ಇವರು ದುಬಾರಿ ಬಡ್ಡಿ ಕೀಳುವ ಲೇವಾದೇವಿಗಾರರು ಮತ್ತು ಕಿರುಸಾಲ ಸಂಸ್ಥೆ(ಎಂಎಫ್ಐ)ಗಳ ಮರ್ಜಿಗೆ ಒಳಗಾಗಿದ್ದಾರೆ. ಈ ಅವಧಿಯಲ್ಲಿ ಹೆಚ್ಚೆಚ್ಚು ಮಹಿಳೆಯರು ಉದ್ಯೋಗ ಹುಡುಕುತ್ತಿದ್ದರೂ, ಕೆಲಸಗಳು ಲಭ್ಯವಿಲ್ಲದ ಕಾರಣದಿಂದಾಗಿ ಇವರು ಉದ್ಯೋಗಗಳಲ್ಲಿ ಭಾಗಿಗಳಾಗುವ ದರಗಳು ಕಡಿಮೆಯಾಗಿವೆ. ಅನಾಣ್ಯೀಕರಣದಿಂದಾಗಿ ಅಸಂಘಟಿತ ಕ್ಷೇತ್ರದ ಮಹಿಳೆಯರು ಭಾರೀ ಸಂಕಷ್ಟಗೀಡಾದರು.

2.39 ಧಾರ್ಮಿಕ ನಂಬಿಕೆಗಳು ಮತ್ತು ಪರಂಪರೆಯ ಹೆಸರಿನಲ್ಲಿ ಹಿಂದುತ್ವದ ಸಿದ್ಧಾಂತಗಳನ್ನು ಅತ್ಯಂತ ಆಕ್ರಮಣಕಾರಿ ರೀತಿಯಲ್ಲಿ ಮಹಿಳಾ ಸಮುದಾಯದ ನಡುವೆ ಪಸರಿಸಲಾಗುತ್ತಿದೆ. ಕೌಟುಂಬಿಕ ಹಿಂಸೆಯ ವಿರುದ್ಧದ ಮತ್ತು ಭ್ರೂಣ ಪರೀಕ್ಷಾ ಪತ್ತೆ ಕಾಯ್ದೆಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳಲ್ಲಿ ಇದು ಬಿಂಬಿತವಾಗಿದೆ. ಪ್ರಜಾಪ್ರಭುತ್ವವಾದಿ ಮಹಿಳಾ ಚಳುವಳಿಗಳ ಚಟುವಟಿಕೆಗಳು ಇವನ್ನು ಬಲವಾಗಿ ಪ್ರತಿರೋಧಿಸುತ್ತಿವೆ. ವೈಯಕ್ತಿಕ ಕಾನೂನುಗಳ ಒಳಗೆ ನ್ಯಾಯ ಕೇಳುತ್ತಿರುವ ಮುಸ್ಲಿಂ ಮಹಿಳೆಯರ ಹೋರಾಟಗಳನ್ನು ಅಪಹರಿಸಿಕೊಂಡು ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು ಪ್ರಯತ್ನಿಸುವ ಈ ಸರ್ಕಾರ, ಹೆಚ್ಚುತ್ತಿರುವ ಮರ್ಯಾದಾ ಅಪರಾಧಗಳ ವಿರುದ್ಧ ಯಾವುದೇ ಶಾಸನ ತರಲು ನಿರಾಕರಿಸುತ್ತಿದೆ. ಆರ್.ಎಸ್.ಎಸ್. ಮತ್ತದರ ಅಂಗ ಸಂಸ್ಥೆಗಳ ಸಾಮಾನ್ಯ ಕೋಮು ಆಕ್ರಮಣಗಳ ಫಲಶ್ರುತಿಯಾಗಿ ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳು ಹೆಚ್ಚುವಂತಾಗಿದೆ. ಮಹಿಳೆಯರ ಸಮಾನ ನಾಗರಿಕ ಹಕ್ಕುಗಳನ್ನು ಇವೆರಡೂ ಗುರಿಯಾಗಿಸಿಕೊಂಡಿವೆ.

2.40 ಮಹಿಳಾ ಮೀಸಲಾತಿ ಮಸೂದೆಯನ್ನು ಮೋದಿ ಸರ್ಕಾರ ವಸ್ತುತಃ ಮೂಲೆಗುಂಪು ಮಾಡಿದೆ. ಈ ಎಲ್ಲ ಪ್ರಶ್ನೆಗಳ ಮೇಲೆ ಮಹಿಳೆಯರ ಎಡ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳು ಮಹಿಳೆಯರ ಹಕ್ಕುಗಳು ಮತ್ತು ಸ್ಥಾನಮಾನವನ್ನು ರಕ್ಷಿಸುವ ಹೋರಾಟದಲ್ಲಿ ಮುಂಚೂಣಿಯಲ್ಲಿವೆ.

**ದಲಿತರು: ಪಾಡು ಮತ್ತಷ್ಟು ದುರ್ಭರ**

2.41 ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಕ್ರಮಣಕಾರಿಯಾಗಿ ಅನುಸರಿಸುತ್ತಿರುವ ನವ ಉದಾರವಾದಿ ಸುಧಾರಣೆಗಳಿಂದ ಅತ್ಯಂತ ಹೆಚ್ಚು ಸಂಕಷ್ಟಕ್ಕೀಡಾಗಿರುವವರು ದಲಿತರು. ಸಾಮಾಜಿಕ ಕಲ್ಯಾಣ ಮತ್ತು ಬಡತನ ನಿರ್ಮೂಲನೆ ಶಿಕ್ಷಣ ಮತ್ತು ಆರೋಗ್ಯ ಕಾರ್ಯಕ್ರಮಗಳಿಗೆ ಬಜೆಟ್ ನೀಡಿಕೆಗಳಲ್ಲಿ ಭಾರೀ ಕಡಿತದಿಂದಾಗಿ ಬಡವರ, ಅದರಲ್ಲೂ ಮುಖ್ಯವಾಗಿ ದಲಿತರ ಹೊಟ್ಟೆಪಾಡಿನ ಸ್ಥಿತಿ ಅಲ್ಲೋಲಕಲ್ಲೋಲವಾಗಿದೆ. ಕೇಂದ್ರ ಬಜೆಟಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಘಟಕ ಯೋಜನೆಗಳನ್ನು ಕೈಬಿಟ್ಟಿರುವ ಎನ್.ಡಿ.ಎ. ಸರ್ಕಾರ, ಈ ವಿಭಾಗಗಳ ಬೆಳವಣಿಗೆಗೆ ಭಾರಿ ಹೊಡೆತ ನೀಡಿದೆ. ಉದ್ಯೋಹೀನ ಅಭಿವೃದ್ಧಿ, ಸರ್ಕಾರಿ ನೇಮಕಾತಿಯ ಮೇಲಿನ ನಿಷೇಧ, ಕಾಂಟ್ರಾಕ್ಟೀಕರಣ, ಸರ್ವವ್ಯಾಪಿ ಖಾಸಗೀಕರಣ ಮತ್ತು ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಕೊಡದಿರುವ ಕಾರಣಳಿಂದಾಗಿ ದುರ್ಬಲ ವಿಭಾಗಗಳಿಗೆ ಮೀಸಲಾತಿಗಳು ಇಲ್ಲವಾಗುತ್ತಿದೆ ಮತ್ತು ಇದರಿಂದಾಗಿ ವಿದ್ಯಾವಂತ ದಲಿತ ಯುವಕರ ಮಧ್ಯೆ ನಿರೋದ್ಯೋಗ ಗಾಬರಿ ಹುಟ್ಟಿಸುವಂತಾಗಿದೆ.

2.42 ದಲಿತರ ವಿರುದ್ಧ ಅಪರಾಧಗಳ ಸಂಖ್ಯೆ ಅಡೆತಡೆಯಿಲ್ಲದೆ ಏರುತ್ತಿದೆ. 2016ರ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋ–ಎನ್‌ಸಿಆರ್‌ಬಿ) ದ 2016ರ ಅಂಕಿಅಂಶಗಳ ಪ್ರಕಾರ, ದಲಿತರ ಮೇಲಿನ ದೌರ್ಜನ್ಯ 2015ರ ಪ್ರಕರಣಗಳಿಗಿಂತ ಹೆಚ್ಚಿದೆ. 2016ರಲ್ಲಿ ಒಟ್ಟು 40801 ದಲಿತ ವಿರೋಧೀ ಅಪರಾಧಗಳು ವರದಿಯಾಗಿದ್ದರೆ, 2015ರಲ್ಲಿ ಅದು 38,670 ಇತ್ತು. ಸನಾತನ ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ, ಜಾತಿ ಪೂರ್ವಾಗ್ರಹಗಳಿಗೆ ಯಾವುದೇ ನಾಚಿಕೆಯಿಲ್ಲದೆ ಪ್ರೋತ್ಸಾಹ ನೀಡುವ ಹಿಂದುತ್ವ ಪಡೆಗಳಿಂದಾಗಿ ಧೈರ್ಯ ತುಂಬಿಕೊಂಡಿರುವ ಮೇಲ್ಜಾತಿಗಳು ದಲಿತರ ವಿರುದ್ಧ ಅವ್ಯಾಹತವಾಗಿ ಬೇಧಭಾವ ಮತ್ತು ದೌರ್ಜನ್ಯ ಎಸಗುತ್ತಿದ್ದಾರೆ. ದಲಿತರು ಗೋರಕ್ಷಕ ಕಾವಲುಕೋರರ ಧಾಳಿಗಳಿಗೆ ಗುರಿಯಾಗಿದ್ದಾರೆ. ಎಲ್ಲರೀತಿಯ ಜಾನುವಾರುಗಳ ವಧೆ ಮತ್ತು ವ್ಯಾಪಾದ ನಿಷೇದ ಚರ್ಮ ತಯಾರಿಕೆ ಮತ್ತು ವ್ಯಾಪಾರದಲ್ಲಿ ಹಲವಾರು ದಲಿತರ ಜೀವನೋಪಾಯಗಳನ್ನು ತಟ್ಟಿದೆ.

2.43 ಜಾತಿ ಬೇಧಭಾವಗಳಿಂದಾಗಿ, ದಿನಂಪ್ರತಿ ದಮನ ಮತ್ತು ಸರ್ಕಾರದ ಧೋರಣೆಗಳ ಪರಿಣಾಮವಾಗಿ ಅವರು ಅಂಚಿಗೆ ತಳ್ಳಲ್ಪಡುತ್ತಿರುವುದು ಇವುಗಳಿಂದಾಗಿ 'ದಲಿತರ ನಡುವೆ ಅಸಮಾಧಾನ ಮತ್ತು ಆಕ್ರೋಶ ಹೆಚ್ಚಾಗುತ್ತಿದೆ. ಅವರ ಕೋಪ ಈ ದೌರ್ಜನ್ಯ ಮತ್ತು ತೇಜೋವಧೆಗಳ ವಿರುದ್ಧ ಹೆಚ್ಚುತ್ತಿರುವ ಪ್ರತಿರೋಧಗಳಲ್ಲಿ ವ್ಯಕ್ತವಾಗುತ್ತಿದೆ. ಈ ಪ್ರತಿರೋಧದ ಕೆಲವು ಪ್ರಮುಖ ಉದಾಹರಣೆಗಳು – ಮುಂಬೈನಲ್ಲಿ ಅಂಬೇಡ್ಕರ್ ಭವನ ಕೆಡವಿದರ ವಿರುದ್ಧ ಅಣಿನೆರಿಕೆ,; ಉನಾದಲ್ಲಿ ನಡೆದ ಚಾಟಿ ಏಟಿನ ಘಟನೆಯನ್ನು ವಿರೋಧಿಸಿ ನಡೆದ ವಿಸ್ತೃತ ಚಳುವಳಿ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ರೋಹಿತ್ ವೇಮುಲನ ಸಾಂಸ್ಥಿಕ ಕೊಲೆಯನ್ನು ಖಂಡಿಸಿ ದೇಶದಾದ್ಯಂತ ನಡೆದ ಪ್ರತಿಭಟನಾ ಆಂದೋಲನ, ಪೂರ್ವ ಉತ್ತರ ಪ್ರದೇಶದಲಿ ದಲಿತರ ಮೇಲಿನ ಧಾಳಿಗಳನ್ನು ಪ್ರತಿಭಟಿಸಿ ಭೀಮಸೇನೆ ನಡೆಸಿದ ಕಾರ್ಯಾಚರಣೆ ಮತ್ತು ಭೀಮ–ಕೋರೆಗಾಂವ್ ವಾರ್ಷಿಕೋತ್ಸವದಲ್ಲಿ ಹಾಜರಿದ್ದ ದಲಿತರ ಮೇಲಿನ ಧಾಳಿಗಳನ್ನು ಪ್ರತಿಭಟಿಸಿ ನಡೆದ ಮಹಾರಾಷ್ಟ್ರ ಬಂದ್.

2.44 ಜನರನ್ನು ಕೋಮು ಆಧಾರದಲ್ಲಿ ಧೃವೀಕರಣಗೊಳಿಸುವ ತಮ್ಮ ಯೋಜನೆ ಸಾಕಾರಗೊಳಿಸಲು, ಬಿಜೆಪಿ ಮತ್ತು ಆರ್.ಎಸ್.ಎಸ್ ಅಂಬೇಡ್ಕರ್ ಅವರ ಪರಂಪರೆಯನ್ನು ವಾರಸುದಾರಿಕೆಯನ್ನು ಸ್ವಾಧೀನ ಪಡಿಸಿಕೊಳ್ಳಲು ಮತ್ತು ಅವರನ್ನು ಹಿಂದುತ್ವದ ಒಬ್ಬ ಭಕ್ಯ ಮತ್ತು ಇಸ್ಲಾಂ ವಿರೋಧಿ ಎಂದು ಬಿಂಬಿಸಲು ಪ್ರಯತ್ನಿಸುತ್ತಿವೆ. ಎಲ್ಲ ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳು ಈ ಕುಟಿಲೋಪಾಯಗಳನ್ನು ಅರಿತುಕೊಂಡು, ಈ ಶಕ್ತಿಗಳ ದುರುದ್ದೇಶಪೂರಿತ ಯೋಜನೆಗಳನ್ನು ಬಯಲು ಮಾಡಬೇಕು. ಸಾಮಾಜಿಕ ನ್ಯಾಯಕ್ಕೋಸ್ಕರ ದಲಿತರು ಮತ್ತು ಇತರ ದುರ್ಬಲ ವಿಭಾಗಗಳನ್ನು ಅಣಿ ನೆರೆಸುವುದು ಹಿಂದುತ್ವ ಕೋಮುವಾದಿ ಶಕ್ತಿಗಳ ನಮ್ಮ ಹೋರಾಟದಲ್ಲಿ ಒಂದು ಮುಖ್ಯ ವೇದಿಕೆಯಾಗಬೇಕು.

**ಆದಿವಾಸಿಗಳ ಹಕ್ಕುಗಳ ಮೇಲೆ ಧಾಳಿ**

2.45 ಬುಡಕಟ್ಟು ಅಸ್ಮಿತೆಯನ್ನು ಮತ್ತು ಜೀವನ ವಿಧಾನಗಳನ್ನು ಹಿಂದುತ್ವದ ಸಿದ್ಧಾಂತಗಳ ವಾಹಕಗಳ ಧಾಳಿಗಳು ಮತ್ತು ಆದಿವಾಸಿ ಸಂಘಟನೆಗಳ ಮೂಲಕ ಏಕರೂಪಕ್ಕಿಳಿಸುವ ಸಂಸ್ಕೃತೀಕರಿಸುವ ಪ್ರಯತ್ನ ಮಾಡಲಾಗುತ್ತಿದೆ. ಅದೇ ವೇಳೆಗೆ, ಸಣ್ಣ ಅರಣ್ಯ ಉತ್ಪನ್ನಗಳ ಲಭ್ಯತೆ ಸೇರಿದಂತೆ ಪಾರಂಪರಿಕ ಜೀವನೋಪಾಯಗಳನ್ನು ಬುಡಕಟ್ಟು ಜನಗಳು ವಾಸಿಸುವ ಪ್ರದೇಶಗಳಲ್ಲಿ ವ್ಯವಹಾರಗಳನ್ನು ಸುಗಮಗೊಳಿಸುವ ಹೆಸರಿನಲ್ಲಿ ಆಕ್ರಮಣಕಾರಿ ಬಂಡವಾಳಶಾಹಿ ಧೋರಣೆಗಳ ಮೂಲಕ ಛಿದ್ರಗೊಳಿಸಲಾಗುತ್ತಿದೆ, ಇದರಿಂದಾಗಿ ಬಿಜೆಪಿ ಆಳ್ವಿಕೆಯ ಅಡಿಯಲ್ಲಿ ಭಾರತದ ಹೆಚ್ಚಿನ ಭಾಗಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬುಡಕಟ್ಟು ಸಮುದಾಯಗಳ ಸ್ಥಳಾಂತರ, ವಲಸೆ ಮತ್ತು ಕೂಲಿಜೀವಿಗಳಾಗಿಸುವ ಒಂದು ಅಮಾನುಷ ಪ್ರಕ್ರಿಯೆ ನಡೆಯುತ್ತಿದೆ. ಇದು ಈ ಸಮುದಾಯಗಳ ಮೇಲೆ, ಇವುಗಳ ಮೇಲೆ ಅರ್ಥಿಕ ದುಸ್ಥಿತಿ, ಆಹಾರ ಅಭದ್ರತೆ, ಕಳಪೆ ಆರೋಗ್ಯ ಮಟ್ಟ, ಅಪೌಷ್ಟಿಕತೆಯಲ್ಲಿ ಹೆಚ್ಚಳ ಮುಂತಾದ ದೂರಗಾಮಿ ದುಷ್ಪರಿಣಾಮಗಳನ್ನು ಉಂಟು ಮಾಡುತ್ತದೆ. ಆದಿವಾಸಿ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲುಗಳ ಪರಿಸ್ಥಿತಿ ಶೋಚನೀಯವಾಗಿದೆ ಮತ್ತು ವಿದ್ಯಾರ್ಥಿವೇತನಗಳಲ್ಲಿ ಕ್ರಿಮಿನಲ್ ವಿಳಂಬ ಹಾಗೂ ಅವನ್ನು ಹೆಚ್ಚಿಸಲು ನಿರಾಕರಣೆ ಆದಿವಾಸಿ ವಿದ್ಯಾರ್ಥಿಗಳ ವಿರುದ್ಧ ಪಕ್ಷಪಾತದ ಒಂದು ನೇರ ಸ್ವರೂಪವಾಗಿದೆ. ಇವು ವಿಕಟ ಪ್ರಶ್ನೆಗಳು, ಇವುಗಳ ಮೇಲೆ ಹೋರಾಟಗಳನ್ನು ಕಟ್ಟಬೇಕಾಗಿದೆ.

2.46 ಸಿಎಎಂಪಿಎ (ಪರಿಹಾರಾತ್ಮಕ ಅರಣ್ಯೀಕರಣ ನಿಧಿ ನಿರ್ವಹಣಾ ಮತ್ತು ಯೋಜನಾ ಪ್ರಾಧಿಕಾರ ಕಾಯ್ದೆ) ಮುಂತಾದ ಕಾಯ್ದೆಗಳನ್ನು ತರುವುದು, ಖನಿಜಗಳು ಮತ್ತು ಗಣಿಗಳು(ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಗೆ ಬುಡಕಟ್ಟೇತರ ತಿದ್ದುಪಡಿಗಳು ಬುಡಕಟ್ಟು ಭೂಕಬಳಿಕೆಗೆ ಒಂದು ಮಂಜೂರಾತಿಯನ್ನು ನೀಡಿ ಅಗಾಧ ಪ್ರಮಾಣದಲ್ಲಿ ಸ್ಥಳಾಂತರಗಳಿಗೆ ಹಾದಿ ಮಾಡಿಕೊಡುತ್ತಿವೆ. ಝಾರ್ಖಂಡ್‌ನಲ್ಲಿ ಬಿಜೆಪಿ ಸರಕಾರ ಛೋಟಾನಾಗ್ಪುರ ಮತ್ತು ಸಂತಾಲ್ ಪರಗಣ ಗೇಣಿ ಕಾನೂನುಗಳನ್ನು ಬುಡಕಟ್ಟು ಭೂಮಿಗಳನ್ನು ವಹಿಸಿಕೊಳ್ಳಲು ಅನುಮತಿ ಸಿಗುವಂತೆ ತಿದ್ದುಪಡಿ ಮಾಡಲು ಪ್ರಯತ್ನಿಸಿತು. ಆದರೆ ಆದಿವಾಸಿಗಳ ಐಕ್ಯ ಹೋರಾಟಗಳಿಂದಾಗಿ ಅದು ಅದನ್ನು ಹಿಂತೆಗೆದುಕೊಳ್ಳಬೇಕಾಯಿತು. ಆದರೆ ಅವನ್ನು ಹೊಸ ಸ್ವರೂಪಗಳಲ್ಲಿ ಮತ್ತೆ ತರುವ ಪ್ರಯತ್ನ ನಡೆಯುತ್ತಿದೆ. ಒಂದು ಮೈಲಿಗಲ್ಲಾಗಿರುವ ಶಾಸನವಾದ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಅದರ ನಿಯಮಗಳನ್ನು ಸ್ವಲ್ಪಸ್ವಲ್ಪವೇ ಬದಲಿಸುವ ಮೂಲಕ ಗ್ರಾಮಸಭೆಗಳ ಪಾತ್ರ ಇಲ್ಲದಂತೆ ಮಾಡಿ ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ. ಪಿಇಎಸ್ಎ [ಪಂಚಾಯತುಗಳು(ಪರಿಶಿಷ್ಟ ಪ್ರದೇಶಗಳಿಗೆ ವಿಸ್ತರಣೆ) ಕಾಯ್ದೆ]ಯನ್ನು ಮತ್ತು ಐದನೇ ಶೆಡ್ಯೂಲಿನ ಅಂಶಗಳನ್ನು ದುರ್ಬಲಗೊಳಿಸುತ್ತಿರುವುದು ಮೋದಿ ಸರಕಾರ ಆದಿವಾಸಿಗಳ ಸಂವಿಧಾನಿಕ ಹಕ್ಕುಗಳ ಬಗ್ಗೆ ಹೊಂದಿರುವ ತಿರಸ್ಕಾರವನ್ನು ತೋರಿಸುತ್ತದೆ.

2.47 ಈ ಅವಧಿಯಲ್ಲಿ ಮೋದಿ ಸರಕಾರ ಮತ್ತು ಬಿಜೆಪಿ ರಾಜ್ಯ ಸರಕಾರಗಳು ಆರ್ಥಿಕ, ಕಾನೂನು, ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಬುಡಕಟ್ಟು ಹಕ್ಕುಗಳ ಮೇಲೆ ಆರಂಭಿಸಿರುವ ಸರ್ವತೋಮುಖ ದಾಳಿಗೆ ಎದುರಾಗಿ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಸಮರಶೀಲ ಮತ್ತು ಕೆಲವು ಸಂದರ್ಭಗಳಲ್ಲಿ ಯಶಸ್ವಿಯಾದ ಆದಿವಾಸಿ ಹೋರಾಟಗಳನ್ನು ಕಂಡಿದೆ. ಇವುಗಳಲ್ಲಿ ಹಲವು ಚಳುವಳಿಗಳು ಪೋಲೀಸ್ ದಮನವನ್ನು ಮತ್ತು ಗೋಲೀಬಾರನ್ನು ಎದುರಿಸಿವೆ.

**ಮುತ್ತಿಗೆಗೊಳಗಾಗಿರುವ ಅಲ್ಪಸಂಖ್ಯಾತರು**

2.48 ಬಲಪಂಥೀಯ ಕೋಮುವಾದಿ ಪ್ರಹಾರ ಮುಸ್ಲಿಂ ಅಲ್ಪಸಂಖ್ಯಾತರ ನಡುವೆ ಒಂದು ಭಯ ಮತ್ತು ಅಭದ್ರತೆಯ ವಾತಾವರಣವನ್ನು ಸೃಷಿಸಿದೆ. ಮುಗ್ಧ ಮುಸ್ಲಿಂ ಗಂಡಸರು ಮತ್ತು ಹುಡುಗರನ್ನು ಗೋರಕ್ಷಕರೆಂದು ಎನಿಸಿಕೊಳ್ಳುವವರು ಕೊಚ್ಚಿ ಹಾಕುತ್ತಿರುವುದು ಮತ್ತು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಇಂತಹ ಪ್ರಕರಣಗಳನ್ನು ನಿಭಾಯಿಸುವಲ್ಲಿ ಎದ್ದು ಕಾಣುವ ರಾಜ್ಯ ಆಡಳಿತದ ಪಕ್ಷಪಾತ ಅವರ ಅಭದ್ರತೆಯನ್ನು ಹೆಚ್ಚಿಸಿದೆ. ಉತ್ತರಪ್ರದೇಶದಂತಹ ಬಿಜೆಪಿ ರಾಜ್ಯ ಸರಕಾರಗಳು ಕಸಾಯಿಖಾನೆಗಳನ್ನು ಮತ್ತು ಮಾಂಸದ ಅಂಗಡಿಗಳನ್ನು ಮುಚ್ಚಿಸಿ ಲಕ್ಷಾಂತರ ಮುಸ್ಲಿಮರ ಜೀವನೋಪಾಯಗಳ ಮೇಲೆ ಗುರಿಯಿಟ್ಟಿವೆ. ಎಲ್ಲ ರೀತಿಗಳ ಜಾನುವಾರು ವಧೆಗಳ ಮೇಲೆ ನಿಷೇಧ ಜಾನುವಾರು ಮತ್ತು ಮಾಂಸದ ವ್ಯಾಪಾರದಲ್ಲಿ ಮುಸ್ಲಿಮರು ಜೀವನೋಪಾಯಗಳನ್ನು ಕಳೆದುಕೊಳ್ಳುವಂತೆ ಮಾಡಿದೆ.

2.49 ಜನಗಳಿಗೆ 'ಭಯೋತ್ಪಾದಕರು' ಮತ್ತು 'ರಾಷ್ಟ್ರ–ವಿರೋಧಿಗಳು' ಎಂದು ಹಣಪಟ್ಟಿ ಹಚ್ಚುವ ಅಧಿಕೃತ ಅಬ್ಬರದ ಮಾತುಗಳಿಂದಾಗಿ ಮುಗ್ಧ ಮುಸ್ಲಿಂ ಯುವಜನರ ವಿರುದ್ಧ ಯುಎಪಿಎ ಮತ್ತು ರಾಜದ್ರೋಹದ ಕಾನೂನುಗಳನ್ನು ಯಾವ ವಿವೇಚನೆಯೂ ಇಲ್ಲದೆ ಬಳಸುವಂತಾಗಿದೆ. ಈ ದಮನದ ವಾತಾವರಣವೇ ಮುಸ್ಲಿಂ ಮೂಲಭೂತವಾದ ಮತ್ತು ಉಗ್ರವಾದ ಬೆಳೆಯಲು ನೆರವಾಗುತ್ತದೆ. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಎಲ್ಲ ಕಿರುಕುಳಗಳ ಪ್ರಶ್ನೆಗಳನ್ನು ಮತ್ತು ಮುಸ್ಲಿಮರ ಮೇಲೆ ಗುರಿ ಮಾಡುವುದನ್ನು ಕೈಗೆತ್ತಿಕೊಳ್ಳಬೇಕು. ಅವು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ವಿಸ್ತೃತ ವೇದಿಕೆಯ ಭಾಗವಾಗಬೇಕು.

**ಸಾಮಾಜಿಕ ಪ್ರಶ್ನೆಗಳನ್ನು ಮುಂದೊಯ್ಯುವುದು**

2.50 ಪಕ್ಷದ ಮಹಾಧಿವೇಶನಗಳು ಸತತವಾಗಿ ಸಾಮಾಜಿಕ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಅವನ್ನು ಪಕ್ಷದ ಒಟ್ಟಾರೆ ರಾಜಕೀಯ ವೇದಿಕೆಯೊಂದಿಗೆ ಜೋಡಿಸುವುದರ ಮಹತ್ವವನ್ನು ಒತ್ತಿ ಹೇಳುತ್ತ ಬಂದಿವೆ. ಇದೀಗ ಹಿಂದುತ್ವ ದಾಳಿಗಳು ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಮೇಲೆ ಗುರಿಯಿಟ್ಟಿರುವುದರಿಂದಾಗಿ ಇನ್ನೂ ಹೆಚ್ಚು ಮಹತ್ವ ಪಡೆದಿದೆ. ಪಕ್ಷ ಮಹಿಳೆಯರ ಮೇಲೆ ಹಿಂಸಾಚಾರದ ವಿರುದ್ಧ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಪ್ರಚಾರಾಂದೋಲನದಲ್ಲಿ ಸಕ್ರಿಯವಾಗಿರಬೇಕು. ಜಾತಿ ದಮನ ಮತ್ತು ಬೇಧಭಾವದ ವಿರುದ್ಧದ, ಅದರಲ್ಲೂ ದಲಿತರು ಮತ್ತು ಅತ್ಯಂತ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ, ಪ್ರಶ್ನೆಗಳನ್ನು ಎತ್ತಬೇಕು. ಪಕ್ಷ ದಲಿತ ಮತ್ತು ಆದಿವಾಸಿ ವೇದಿಕೆಗಳ ಚಟುವಟಿಕೆಗಳಿಗೆ ಸಂಪೂರ್ಣ ಬೆಂಬಲವನ್ನು ನೀಡಬೇಕು.

**ಹಿಂದುತ್ವ ದಾಳಿ**

2.51 ಕಳೆದ ಸುಮಾರು ನಾಲ್ಕುವರ್ಷಗಳಲ್ಲಿ ಆರ.ಎಸ್.ಎಸ್. ಪ್ರಭುತ್ವದ ವಿವಿಧ ಸಂಸ್ಥೆಗಳ ಮಹತ್ವದ ಸ್ಥಾನಗಳಲ್ಲಿ ಆರ್.ಎಸ್.ಎಸ್. ಸಿಬ್ಬಂದಿಯನ್ನು ನುಸುಳಿಸಲು ಪ್ರಭುತ್ವ ಅಧಿಕಾರವನ್ನು ಬಳಸುವ ನೀಲನಕ್ಷೆ ಅನಾವರಣಗೊಳ್ಳುವುದು ಕಾಣ ಬಂದಿದೆ. ಹೆಚ್ಚಿನ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ನೇಮಕಗೊಂಡಿರುವವರು ಬಿಜೆಪಿ–ಆರ್.ಎಸ್.ಎಸ್. ಮಂದಿ, ಅವರಲ್ಲಿ ಕೆಲವರು ತಮ್ಮ ಹುದ್ದೆಯನ್ನು ಕೋಮುವಾದಿ ಅಜೆಂಡಾವನ್ನು ಪ್ರಿಪಾದಿಸಲು ಬಳಸಿಕೊಳ್ಳುತ್ತಿದ್ದಾರೆ. ಸಂವಿಧಾನಿಕ ಸಂಸ್ಥೆಗಳನ್ನು ಒಳಗಿಂದ ಬುಡಮೇಲು ಮಾಡಲಾಗುತ್ತಿದೆ. ಬಿಜೆಪಿ ಮತ್ತು ಆರ್.ಎಸ್.ಎಸ್. ಮುಖಂಡರು ಬಹಿರಂಗವಾಗಿಯೇ ಸಂವಿಧಾನವನನು ಬದಲಿಸುವ ಆಕಾಂಕ್ಷೆಯನ್ನು ವ್ಯಕ್ತಮಾಡುತ್ತಾರೆ.

2.52 ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳನ್ನು ಕೋಮುವಾದೀಕರಿಸಲಾಗುತ್ತಿದೆ. ಯುಜಿಸಿ, ಎನ್‌ಸಿಇಆರ್‌ಟಿ, ಐಸಿಹೆಚ್‌ಆರ್ ಮತ್ತು ಐಸಿಎಸ್‌ಎಸ್‌ಆರ್‌ನಂತಹ ಸಂಸ್ಥೆಗಳಿಗೆ ಆರ್.ರಸ್.ಎಸ್. ವ್ಯಕ್ತಿಗಳನ್ನು ಅಥವ ಹಿಂದುತ್ವಕ್ಕೆ ಪಕ್ಕಾಗುವವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಜೆಎನ್‌ಯು, ಹೆಚ್‌ಸಿಯು ಮತ್ತು ಪಾಂಡಿಚೇರಿ ವಿಶ್ವವಿದ್ಯಾಲಯಗಳಂತಹ ಕೇಂದ್ರೀಯ ವಿಶ್ವವಿದ್ಯಾಲಯಗಳು ದಾಳಿಗಳಿಗೆ ಒಳಗಾಗಿವೆ, ಅಧ್ಯಯನ ವಿಷಯಗಳನ್ನು ಬದಲಿಸುವ, ಅಧ್ಯಾಪಕರನ್ನು ಶಿಸ್ತಿಗೊಳಪಡಿಸುವ ಮತ್ತು ವಿದ್ಯಾರ್ಥಿ ಸಂಘಗಳು ಮತ್ತು ಸಂಘಟನೆಗಳ ಮೇಲೆ ದಾಳಿ ಮಾಡುವ ಪ್ರಯತ್ನಗಳು ನಡೆದಿವೆ. ಚರಿತ್ರೆಯ ಮರುಬರವಣಿಗೆಯಾಗುತ್ತಿದೆ, ಮತ್ತು ಜಾತ್ಯತೀತ ಹಾಗೂ ವೈಜ್ಞಾನಿಕ ಚಾರಿತ್ರಿಕ ಕೃತಿಯನ್ನು ತಿರಸ್ಕರಿಸಲಾಗುತ್ತಿದೆ. ವೈಜ್ಞಾನಿಕ ಸಂಸ್ಥೆಗಳು ಮತ್ತು ವಿಜ್ಞಾನದ ಮೇಲೆ ದಾಳಿಗಳು ಪ್ರತಿಗಾಮಿ ಹಿಂದುತ್ವ ಕಣ್ಣೋಟದಿಂದ ಹೊಮ್ಮುತ್ತಿವೆ. ವೈಜ್ಞಾನಿಕ ಸಂಸ್ಥೆಗಳಿಗೆ ಮತ್ತು ಸಂಶೋಧನೆಗೆ ಹಣಕಡಿತ ಮಾಡಲಾಗುತ್ತಿದೆ. ಕಂದಾಚಾರಿ ಮತ್ತು ಧಾರ್ಮಿಕ ಮೂಢನಂಬಿಕೆಗಳನ್ನು ಆಧರಿಸಿದ ವಿಜ್ಞಾನ–ವಿರೋಧಿ ಅಭಿಪ್ರಾಯಗಳನ್ನು ಅಧಿಕೃತವಾಗಿ ಉತ್ತೇಜಿಸಲಾಗುತ್ತಿದೆ.

2.53 ಹಿಂದುತ್ವ ಅಜೆಂಡಾವನ್ನು ಕೇಂದ್ರ ಸರಕಾರ ಮೇಲಿನಿಂದ ಹೇರುತ್ತಿದ್ದರೆ, ಬುಡಮಟ್ಟದಲ್ಲಿ ಆರ್.ಎಸ್.ಎಸ್. ನೇತೃತ್ವದ ಹಿಂದುತ್ವ ಸಂಘಟನೆಗಳು ಮನಬಂದಂತೆ ಓಡಾಡಲು ಸಾಧ್ಯವಾಗಿದೆ. ಮುಸ್ಲಿಮರ ಮೇಲೆ ಗುರಿ ಮಾಡಲು ಗೋರಕ್ಷಕ ಪಡೆಗಳನ್ನು ಜಾನುವಾರು ವ್ಯಾಪಾರಿಗಳು ಅಥವ ರೈತರ ಮೇಲೆ ಮತ್ತು ಬಡಿದು ಸಾಯಿಸುವ ಮಂದೆಗಳ ದಾಳಿ ನಡೆಸಲು ಹರಿಯ ಬಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಈ ರೀತಿಯ ಫ್ಯಾಸಿಸ್ಟ್–ವಿಧಾನದ ದಾಳಿಗಳಲ್ಲಿ ಗೋವಧೆ ಅಥವ ಗೋಮಾಂಸದ ವಿಷಯದಲ್ಲಿ ಮೂವತ್ತಕ್ಕೂ ಹೆಚ್ಚು ಕೊಲೆಗಳು ನಡೆದಿವೆ. ಬಿಜೆಪಿ–ಆರ್.ಎಸ್.ಎಸ್. ರಾಜ್ಯ ಸರಕಾರಗಳು ಬಹಿರಂಗವಾಗಿಯೇ ಗೋರಕ್ಷಕರೆಂಬ ಕಾವಲುಕೋರತನಕ್ಕೆ ಪೋಷಣೆ ಮತ್ತು ಬೆಂಬಲ ನೀಡುತ್ತಿವೆ. ಮುಸ್ಲಿಮರ ಮೇಲೆ 'ಲವ್‌ಜಿಹಾದ್' ಎಂದು ಗುರಿಯಿಡುವುದು ಮತ್ತು ಅವರಿಗೆ 'ರಾಷ್ಟ್ರ–ವಿರೋಧಿಗಳು' ಎಂದು ಹಣೆಪಟ್ಟಿ ಹಚ್ಚುವುದು ಹಿಂದುತ್ವ ಪಡೆಗಳು ಕೋಮು ಧ್ರುವೀಕರಣ ಸೃಷ್ಟಿಸಲು ಬಳಸುವ ಇತರ ಸಾಧನಗಳು.

2.54 ಈ ಗ್ಯಾಂಗುಗಳ ಇತರ ಗುರಿಯೆಂದರೆ ಜಾನುವಾರು ವ್ಯಾಪಾರ ಮತ್ತು ಸತ್ತ ಜಾನುವಾರುಗಳ ಚರ್ಮ ತೆಗೆಯುವ ಕೆಲಸದಲ್ಲಿ ತೊಡಗಿರುವ ದಲಿತರು. ಉನಾದಲ್ಲಿ ನಾಲ್ವರು ದಲಿತ ಯುವಕರನ್ನು ಅಮಾನುಷವಾಗಿ ಥಳಿಸಿರುವುದು ಈ ದಲಿತ–ವಿರೋಧಿ ಕಣ್ಣೋಟದ ಫಲಿತಾಂಶ.

2.55 ಹಿಂದುತ್ವ ಉಗ್ರಗಾಮಿ ಗುಂಪುಗಳು ವಿಶೇಷವಾಗಿ ವಿಚಾರವಾದಿ ಮತ್ತು ಜಾತ್ಯತೀತ ಅಭಿಪ್ರಾಯಗಳನ್ನು ಪ್ರತಿಪಾದಿಸುವ ' ಬುದ್ಧಿಜೀವಿಗಳು ಮತ್ತು ಲೇಖಕರ ಮೇಲೆ ಗುರಿಯಿಟ್ಟಿವೆ. ಮಹಾರಾಷ್ಟ್ರದಲ್ಲಿ ನರೇಂದ್ರ ಧಭೋಲ್ಕರ್‌ರವರನ್ನು

ಸಾಯಿಸಿದ ಮೇಲೆ ಗೋವಿಂದ ಪನ್ಸರೆಯವರ ಕೊಲೆ ನಡೆಯಿತು. ಕರ್ನಾಟಕದಲ್ಲಿ ಪ್ರೊ. ಎಂ.ಎಂ. ಕಲ್ಬುರ್ಗಿಯವರು ಈ ಶಕ್ತಿಗಳ ಗುರಿಯಾದರು. ಮತ್ತರ ದಾಳಿ ನಡೆಸಿ ಗೌರಿ ಲಂಕೇಶ್ ಅವರನ್ನು ಕೊಂದರು. ಹಿಂದುತ್ವದ ವಿರೋಧಿಗಳ ಬಾಯಿ ಮುಚ್ಚಿಸಲು, ಅವರನ್ನು ಬೆದರಿಸಲು ಇಂತಹ ಫ್ಯಾಸಿಸ್ಟ್ ಮಾದರಿ ದಾಳಿಗಳು ನಡೆಯುತ್ತಿವೆ.

**ಜಮ್ಮು ಮತ್ತು ಕಾಶ್ಮೀರ**

2.56 ಪಕ್ಷದ ಕಳೆದ ಮಹಾಧಿವೇಶನದಿಂದೀಚೆಗೆ ಕಣಿವೆಯಲ್ಲಿನ ಸನ್ನಿವೇಶ ತೀವ್ರವಾಗಿ ಹದಗೆಟ್ಟಿದೆ. ಆಗ ಭಯಪಟ್ಟಂತೆ, ಈ ರಾಜ್ಯದಲ್ಲಿ ಪಿಡಿಪಿ–ಬಿಜೆಪಿ ಮೈತ್ರಿ ಸರಕಾರದ ರಚನೆ ಜಮ್ಮು ಮತ್ತು ಕಣಿವೆಯ ನಡುವಿನ ಕೋಮು ವಿಭಜನೆಯನ್ನು ತೀಕ್ಷ್ಣಗೊಳಿಸಿದೆಯಷ್ಟೇ. ಮೋದಿ ಸರಕಾರದ ನಿಲುವು, ವಸ್ತುತಃ, ಜಮ್ಮು ಮತ್ತು ಕಾಶ್ಮೀರಕ್ಕೆ ಯಾವುದೇ ವಿಶೇಷ ಸ್ಥಾನಮಾನವನ್ನು ನಿರಾಕರಿಸುವುದೇ ಆಗಿದೆ. ಇದರಿಂದ ಕಣಿವೆಯ ಜನತೆಯಲ್ಲಿ ಭಾರತೀಯ ಪ್ರಭುತ್ವದ ಬಗ್ಗೆ ಪರಕೀಯ ಭಾವ ಹಿಂದೆಂದೂ ಕಾಣದ ಮಟ್ಟಕ್ಕೆ ಬೆಳೆಯುವಂತಾಗಿದೆ.

2.57 ಜುಲೈ 2016ರಲ್ಲಿ ಒಬ್ಬ ಹಿಜ್ಬೊಲ್ಲಾ ಉಗ್ರಗಾಮಿ ಬುರ್ಹನ್ ವಾನಿಯನ್ನು ಸಾಯಿಸಿದ್ದು ಒಂದು ದೊಡ್ಡ ಜನಾಕ್ರೋಶಕ್ಕೆ ಕಾರಣವಾಯಿತು. ಇದನ್ನು ಭದ್ರತಾ ಪಡೆಗಳು ಅಮಾನುಷವಾಗಿ ಹತ್ತಿಕ್ಕಿದವು. 6000ಕ್ಕೂ ಹೆಚ್ಚು ಯುವಜನರು ಗಾಯಗೊಂಡರು, 500ಕ್ಕೂ ಹೆಚ್ಚು ಮಂದಿ ಕಣ್ಣುಗಾಯಗಳಿಂದ ಸಂಕಟಕ್ಕೀಡಾದರು. ಪೆಲಟ್‌ಗನ್‌ಗಳ ಬಳಕೆಯಿಂದಾಗಿ ಹಲವಾರು ಮಂದಿಯ ಒಂದು ಕಣ್ಣು ಅಥವ ಎರಡೂ ಕಣ್ಣುಗಳು ಕುರುಡಾದವು. ಇಂತಹ ದಮನ ಉಗ್ರಗಾಮಿತ್ವಕ್ಕೆ ಒಂದು ಉತ್ತೇಜನೆ ನೀಡಿತು. ಅದರಿಂದ ಭದ್ರತಾ ಪಡೆಗಳು ತೀವ್ರ ಕ್ರಮಕ್ಕಿಳಿದವು. ಸ್ವಲ್ಪ ಮಟ್ಟಿಗೆ ಉಗ್ರಗಾಮಿ ಚಟುವಟಿಕೆಗಳನ್ನು ಹತ್ತಿಕ್ಕಿದರೂ, ಜನಗಳ ಪರಕೀಯ ಭಾವ ಇನ್ನೂ ಆಳವಾಗಿಯೇ ಇದೆ.

2.58 ಮೊದಿ ಸರಕಾರ ಅಸಂತೋಷವನ್ನು ಮತ್ತು ಪರಕೀಯ ಭಾವವನ್ನು ಬಲಪ್ರಯೋಗದಿಂದ ಎದುರಿಸಲು ಪ್ರಯತ್ನಿಸಿತು. ಅದು ಒಂದು ರಾಜಕೀಯ ಸಂವಾದವನ್ನು ಆರಂಭಿಸಬೇಕೆಂಬ ಕರೆಗೆ ಕಿವಿಗೊಡಲು ಅಥವ ಸಪ್ಟಂಬರ್ 2016ರಲ್ಲಿ ರಾಜ್ಯಕ್ಕೆ ಭೇಟಿ ನೀಡಿದ ಸಂಸದೀಯ ನಿಯೋಗದ ಪ್ರಸ್ತಾವಗಳನ್ನು ಸ್ವೀಕರಿಸಲು ನಿರಾಕರಿಸಿತು. ತದ್ವಿರುದ್ಧವಾಗಿ, ಖಾಯಂ ನಿವಾಸಿಗಳ ಹಕ್ಕುಗಳನ್ನು ರಕ್ಷಿಸಲಿಕ್ಕಾಗೆಂದು ಇರುವ ಸಂವಿಧಾನದ 35ಎ ಕಲಮಿಗೆ ಕಾನೂನಾತ್ಮಕ ಸವಾಲು ಹಿಂದುತ್ವ ಅಜೆಂಡಾದ ಬಗ್ಗೆ ಸಂದೇಹಗಳನ್ನು ಇನ್ನಷ್ಟು ಹೆಚ್ಚಿಸಿತು. ತುಂಬಾ ತಡವಾಗಿ ಒಬ್ಬ ಮಾಜಿ ಗುಪ್ತಚರ ಮುಖ್ಯಸ್ಥರನ್ನು ಮಧ್ಯಸ್ಥಿಕೆದಾರರಾಗಿ ನೇಮಿಸಿದ್ದು ಕೇಂದ್ರ ಸರಕಾರದ ಆಶಯಗಳ ಬಗ್ಗೆ ವಿಶ್ವಾಸವನ್ನೇನನ್ನೂ ಮೂಡಿಸಿಲ್ಲ.

2.59 ಸಿಪಿಐ(ಎಂ) ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಯನ್ನು ಕುರಿತಂತೆ ಮೋದಿ ಸರಕಾರದ ರಾಜಕೀಯ ನಿಲುವನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ರಾಜಕೀಯ ವಲಯದ ಎಲ್ಲ ಛಾಯೆಗಳೊಂದಿಗೆ ಒಂದು ರಾಜಕೀಯ ಸಂವಾದ ನಡೆಸಬೇಕೆಂಬ ತನ್ನ ನಿಲುವನ್ನು ಸಿಪಿಐ(ಎಂ) ಪುನರುಚ್ಚರಿಸುತ್ತದೆ. ಇದರೊಂದಿಗೆ ಪೋಲೀಸ್ ದಮನವನ್ನು, ಪೆಲಟ್‌ಗನ್‌ಗಳ ಬಳಕೆಯನ್ನು ಕೊನೆಗೊಳಿಸಬೇಕು ಮತ್ತು ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆಯನ್ನು ತೆಗೆಯಬೇಕು. ಕಲಮು 370 ರ ಮೂಲ ಆಶಯಗಳ ಅಂಶಗಳನ್ನು ಪುನಃ ಸ್ಥಾಪಿಸಲಾಗುತ್ತದೆ ಮತ್ತು ಮೂರು ಪ್ರದೇಶಗಳಿಗೆ–ಜಮ್ಮು, ಕಾಶ್ಮೀರ ಕಣಿವೆ ಮತ್ತು ಲಡಾಖ್‌ಗೆ– ಪ್ರಾದೇಶಿಕ ಸ್ವಾಯತ್ತತೆಯನ್ನು ಕೊಡಲಾಗುತ್ತದೆ ಎಂಬ ಭರವಸೆಯನ್ನು ನೀಡಬೇಕು.

**ಈಶಾನ್ಯ ರಾಜ್ಯಗಳು**

2.60 ಮೋದಿ ಸರ್ಕಾರವು ಆಡಳಿತಕ್ಕೆ ಬಂದು, ಅದನ್ನನುಸರಿಸಿ ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರಕಾರದ ರಚನೆಯಾದಂದಿನಿಂದ ಬಹು ಸೂಕ್ಷ್ಮವಾಗಿರುವ ಈಶಾನ್ಯ ಪ್ರದೇಶದಲ್ಲಿನ ಪ್ರಧಾನ ಅಪಾಯ ಎಂದರೆ ಕೋಮು ಸಂಘರ್ಷಗಳು ಮತ್ತು ಜನಾಂಗೀಯ ವೈಮನಸ್ಯಕ್ಕೆ ಫಲವತ್ತಾದ ನೆಲೆಯನ್ನು ಸೃಷ್ಟಿಸುವುದು. ಹಿಂದೂ ವಲಸೆಗಾರರಿಗೆ ಪೌರತ್ವ ನೀಡಲು ಅನುವಾಗುವಂತೆ ಸಂಸತ್ತಿನಲ್ಲಿ ಪೌರತ್ವ ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಮಂಡಿಸಿರುವುದು ಅಸ್ಸಾಮಿಯಾ ಮತ್ತಿತರ ಸ್ಥಳೀಯ ಸಮುದಾಯಗಳು ಹಾಗೂ ಮುಸ್ಲಿಮರಲ್ಲಿ ಭೀತಿಯುಂಟು ಮಾಡಿದೆ. ನಿಗದಿ ದಿನವನ್ನು ಮಾರ್ಚ್ 1971 ಎಂಬ ಆಧಾರದಲ್ಲಿ, ಮತ್ತು ಸುಪ್ರಿಂ ಕೋರ್ಟಿನ ನಿಗಾದಲ್ಲಿ ರಾಷ್ಟ್ರೀಯ ಪೌರ ದಾಖಲಾತಿ ಪುಸ್ತಕದಲ್ಲಿ ದಾಖಲಾತಿ ಮಾಡುವ ಪ್ರಕ್ರಿಯೆಯಲ್ಲಿ ಕೈಯಾಡಿಸುವ ಪ್ರಯತ್ನಗಳು ಕೂಡ, ನಿರ್ದಿಷ್ಟವಾಗಿ ಅಸ್ಸಾಂನಲ್ಲಿ ಸ್ವಾತಂತ್ರ್ಯಕ್ಕೂ ಮೊದಲು ಪೂರ್ವ ಬಂಗಾಲದಿಂದ ಬಂದು ಅಸ್ಸಾಂನಲ್ಲಿ ನೆಲೆಸಿರುವ ಜನಗಳಲ್ಲಿ ಆತಂಕವನ್ನುಂಟು ಮಾಡಿದೆ.

2.61 ಗ್ರೇಟರ್ ನಾಗಲ್ಯಾಂಡ್‌ನ ಸ್ಥಾನಮಾನದ ವಿಚಾರದಲ್ಲಿ ಒಪ್ಪಂದದ ಪ್ರಮುಖ ಅಂಶಗಳನ್ನು ಸಾರ್ವಜನಿಕಗೊಳಿಸದಿರುವ ನಾಗಾ ಚೌಕಟ್ಟು ಒಪ್ಪಂದ ಮಣಿಪುರ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಜನರ ಮನಸ್ಸಿನಲ್ಲಿ ಆತಂಕ ಮತ್ತು ಅನುಮಾನಕ್ಕೆ ಕಾರಣವಾಗಿದೆ. ಬಿ.ಜೆ.ಪಿ ಮತ್ತು ಆರ್.ಎಸ್.ಎಸ್ ತಮ್ಮ ಕೋಮುವಾದಿ ಕಾರ್ಯಸೂಚಿಯ ಆಧಾರದಲ್ಲಿ ವಿವಿಧ ಜನಾಂಗೀಯ ಮತ್ತು ಬುಡಕಟ್ಟು ಜನಗಳನನು ಗೆಲ್ಲಲು ಹವಣಿಸುತ್ತಿವೆ. ಈ ನಡೆಗಳು ಕೋಮು ಮತ್ತು ಜನಾಂಗೀಯ ಸಾಮರಸ್ಯವನ್ನು ಕಲುಕಲಿವೆ. ತನ್ನ ರಾಜಕೀಯ ಅಜೆಂಡಾಕ್ಕಾಗಿ ಸ್ಥಳೀಯ ಮೇಲ್ವರ್ಗದವರು ಮತ್ತು ಪಕ್ಷಗಳನ್ನು ಗೆದ್ದುಕೊಳ್ಳಲಷ್ಟೇ ಅದು ಪ್ರಯತ್ನಿಸುತ್ತಿರುವುದು.

2.62 ಕೇಂದ್ರದ ಬಿಜೆಪಿ ಸರಕಾರದ ನಿಲುವು ಹಿಂದಿನ ಸರಕಾರಗಳಂತೆ ಈಶಾನ್ಯ ಪ್ರದೇಶದ ಒಂದುಸಮಗ್ರ ಅಭಿವೃದ್ಧಿಯ ಅಗತ್ಯದ ವಿಚಾರದಲ್ಲಿ ಕ್ರಿಯಗಿಳಿಯಲು ನಿರಾಕರಿಸುವುದೇ ಆಗಿದೆ. ಯೋಜನಾ ಆಯೋಗದ ರದ್ಧತಿಯಿಂದಾಗಿ ಈಶಾನ್ಯ ರಾಜ್ಯಗಳ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದ ಶೇ.10ರಷ್ಟುಭಿವೃದ್ಧಿ ನಿಧಿ ರದ್ದಾಗುವಂತಾಗಿದೆ. ಇದು ಈ ಪ್ರದೇಶದ ಒಟ್ಟು ಅಭಿವೃದ್ಧಿಯನ್ನು ಬಾಧಿಸಲಿದೆ.

**ಒಕ್ಕೂಟವಾದದ ಮೇಲಿನ ಪ್ರಹಾರ**

2.63 ಮೋದಿ ಸರ್ಕಾರವು ಅಧಿಕಾರಗಳನ್ನು ಕೇಂದ್ರೀಕರಿಸಿಗೊಳ್ಳುತ್ತಾ ರಾಜ್ಯಗಳ ಹಕ್ಕುಗಳನ್ನು ವ್ಯವಸ್ಥಿತವಾಗಿ ಕರಗಿಸುತ್ತಿದೆ. ತೆರಿಗೆ ಹಾಕುವ ವಿಚಾರಗಳಲ್ಲಿ ರಾಜ್ಯಗಳಿಗಿದ್ದ ಇದ್ದಬದ್ದ ಅಧಿಕಾರಗಳನ್ನೂ ಜಿಎಸ್‌ಟಿ(ಸರಕು ಮತ್ತು ಸೇವಾ ತೆರಿಗೆ)ಯ ಜಾರಿಯು ಇಲ್ಲವಾಗಿಸಿದೆ. ರಾಜ್ಯಸರ್ಕಾರಗಳಿಗೆ ಲಭ್ಯವಿದ್ದ ವಿವಿಧ ನಿಧಿಗಳನ್ನು ಮನಸೋ ಇಚ್ಛೆ ಕಡಿತಗೊಳಿಸಲಾಗಿದೆ. ರಾಜ್ಯಪಾಲರುಗಳನ್ನು ಬಳಸಿಕೊಂಡು ರಾಜ್ಯಾಡಳಿತದಲ್ಲಿ ಕೈಯಾಡಿಸುತ್ತಿರುವುದು ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶಗಳಲ್ಲಿ ಕಾಣ ಬಂದಿದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆಸುವ ಪ್ರಸ್ತಾವವನ್ನು ಒಂದೋ ರಾಜ್ಯ ವಿಧಾನಸಭೆಗಳ ಅವಧಿಯನ್ನು ಮೊಟಕುಗೊಳಿಸುವ ಮೂಲಕ ಇಲ್ಲವೇ ರಾಜ್ಯ ಸರ್ಕಾರದ ವಿರುದ್ಧ ಮತ ಚಲಾಯಿಸುವ ಹಕ್ಕನ್ನು ಕುಗ್ಗಿಸುವ ಮೂಲಕವಷ್ಟೇ ಜಾರಿ ಮಾಡಬಹುದು.

2.64 ಕೇಂದ್ರ ಸರ್ಕಾರ ಮತ್ತು ಸಂಸ್ಥೆಗಳು ಹಿಂದಿಯ ಬಳಕೆಯ ಬಗ್ಗೆ ಆದೇಶಗಳನ್ನು ಹೇರಲು ಮತ್ತು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿಚಾರಗಳಲ್ಲಿ ನಿರ್ದೇಶನಗಳನ್ನು ಕೊಡುವಲ್ಲಿ ು ತಮ್ಮ ಅಧಿಕಾರಗಳ ದುರುಪಯೋಗ ಮಾಡುತ್ತಿರುವುದು ರಾಜ್ಯಗಳ ಹಕ್ಕುಗಳ ಮೇಲೆ ಒಂದು ಪ್ರಹಾರವಾಗಿದೆ.

**ಸರ್ವಾಧಿಕಾರಶಾಹಿ ಕ್ರಮಗಳು**

2.65 ಹಿಂದುತ್ವ ಮತ್ತು ಕಾರ್ಪೋರೇಟ್ ಶಕ್ತಿಗಳು ಒಂದಾಗಿರುವುದು ಸರ್ವಾಧಿಕಾರಶಾಹಿಯೆಡೆಗೆ ಓಟಕ್ಕೆ ಇಂಧನವಾಗಿದೆ. ಈ ಅವಧಿಯಲ್ಲಿ ಹಲವಾರು ಸರ್ವಾಧಿಕಾರಶಾಹಿ ಕ್ರಮಗಳು ಕಾಣ ಬಂದಿವೆ. ಮೋದಿ ಸರಕಾರ ಹಲವಾರು ಮಸೂದೆಗಳನ್ನು "ಹಣ ಮಸೂದೆ"ಯೆಂದು ವರ್ಗೀಕರಿಸುವ ಕಪಟೋಪಾಯದ ಮೂಲಕ ರಾಜ್ಯ ಸಭೆಯನ್ನು ಬದಿಗೊತ್ತಿ ಸಂಸತ್ತಿಗೆ ಮಸಿ ಬಳೆದಿದೆ. ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ ಮತ್ತು ರಾಜದ್ರೋಹದ ಕಲಮುಗಳನ್ನು ಜನಗಳಿಗೆ ರಾಷ್ಟ್ರವಿರೋಧಿಗಳೆಂದು ಹಣೆಪಟ್ಟಿ ಹಚ್ಚಲು ಮತ್ತು ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲು ಅದು ಬಳಸಿದೆ.

2.66 ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರ ನಂತರದ ನಾಲ್ಕು 'ಅತ್ಯಂತ ಹಿರಿಯ ನ್ಯಾಯಾಧೀಶರು ಹೊರಗೆಡಹಿದ ಸಂಗತಿಗಳು ಹೇಗೆ ಉನ್ನತ ನ್ಯಾಯಾಂಗದ ಸಮಗ್ರತೆಯನ್ನು ಕಾರ್ಯಾಂಗವು ತರುತ್ತಿರುವ ಅನ್ಯ ಒತ್ತಡಗಳು ಬಾಧಿಸುತ್ತವೆ ಎಂಬ ಬಗ್ಗೆ ಕಳವಳಕಾರಿ ಪ್ರಶ್ನೆಗಳನ್ನು ಎತ್ತಿವೆ. ಸರಕಾರ ರಾಷ್ಟ್ರೀಯ ಭದ್ರತೆಯ ಆಧಾರದಲ್ಲಿ ನ್ಯಾಯಾಧೀಶರ ನೇಮಕದ ಮೇಲೆ ವಿಟೋ ಅಧಿಕಾರವನ್ನು ಪಡೆಯಲು ಪ್ರಯತ್ನಿಸುತ್ತಿದೆ.

2.67 ಮೋದಿ ಸರ್ಕಾರವು ತನ್ನ ಆಶಯದಂತೆ ನಡೆಯದಿರುವ ಮಾಧ್ಯಮಗಳವರನ್ನು ದಾರಿಗೆ ತರಲು ಭಯ ಹುಟ್ಟಿಸುವ ತಂತ್ರಗಳನ್ನು ಬಳಸುತ್ತಿದೆ. ಬಿಜೆಪಿಯ ರಾಷ್ಟ್ರೋನ್ಮಾದಿ ಮತ್ತು ಹಿಂದುತ್ವ ನಿಲುವನ್ನು ಈಗಾಗಲೇ ಕಾರ್ಪೋರೇಟ್ ಮಾಧ್ಯಮಗಳ ಒಂದು ದೊಡ್ಡ ವಿಭಾಗ ಕರ್ಣಕರ್ಕಶವಾಗಿ ಬೆಂಬಲಿಸುತ್ತಿದೆ. ಮೊಕದ್ದಮೆಗಳನ್ನು ಹಾಕುವ ಬೆದರಿಕೆಗಳು, ಸಂಪಾದಕರುಗಳನ್ನು ತೆಗೆಯುವುದು ಮತ್ತು ಅನುಕೂಲಕರವಲ್ಲದ ಸುದ್ದಿಗಳನ್ನು ಹತ್ತಿಕ್ಕುವುದನ್ನು ಮಾಡಲಾಗುತ್ತಿದೆ.

**ದೊಡ್ಡ ಹಣ ಮತ್ತು ಭ್ರಷ್ಟಾಚಾರ**

2.68 ಮೋದಿ ಸರ್ಕಾರವು ಕಾರ್ಪೋರೇಟ್‌ಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಭ್ರಷ್ಟಾಚಾರಗಳನ್ನು ಮತ್ತು ಕಾಳಧನವನ್ನು ಕಾನೂನುಬದ್ಧಗೊಳಿಸಲು ಒಂದು ಹೆಜ್ಜೆ ಇಟ್ಟಿದೆ. ಅನಾಮಿಕವಾಗಿ ಉಳಿಯುವ ಚುನಾವಣಾ ಬಾಂಡ್‌ಗಳ ಜಾರಿಯು ಈ ವಿಧಾನದ ಮೂಲಕ ಕೊಡುವ ಗುತ್ತಿಗೆಗಳಿಗೆ ಆಡಳಿತಾರೂಢ ಪಕ್ಷ ಲಂಚಗಳನ್ನು ಪಡೆಯಲು ದಾರಿ ಮಾಡಿಕೊಡುತ್ತದೆ. ಈ ಬಾಂಡ್‌ಗಳನ್ನು ನೀಡುವವರಾಗಲಿ ಅದನ್ನು ಪಡೆಯುವ ಪಕ್ಷವಾಗಲಿ ದೇಣಿಗೆ ನೀಡಿದವರ ಹೆಸರನ್ನು ಘೋಷಿಸುವ ಅಗತ್ಯವಿಲ್ಲ. ಅಲ್ಲದೆ ಸರಕಾರ ಒಂದು ರಾಜಕೀಯ ಪಕ್ಷಕ್ಕೆ ದೇಣಿಗೆ ನೀಡಲು ಕಂಪನಿಯ (ಹಿಂದಿನ ಮೂರು ವರ್ಷಗಳ ಸರಾಸರಿ) ನಿವ್ವಳ ಲಾಭದ ಶೇ.7.5ರ ಮಿತಿಯನ್ನು ಹಾಕಿದ್ದ ಕಾನೂನನ್ನು ತಿದ್ದುಪಡಿ ಮಾಡಿದೆ. ಈ ಮೇಲಣ ಮಿತಿಯನ್ನು ತೆಗೆದಿರುವುದರಿಂದ ಕಾನೂನಾತ್ಮಕವಾಗಿಯೇ ದೊಡ್ಡ ಮೊತ್ತದ ದೇಣಿಗೆಗಳನ್ನು ನೀಡುವುದು ಸಾಧ್ಯವಾಗಿದೆ. ಇದು ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣವನ್ನು ಸ್ವಚ್ಛಗೊಳಿಸುವುದಕ್ಕೆ ಮತ್ತು ಲಂಚಕ್ಕೆ ಉತ್ತೇಜನೆ ಕೊಡುತ್ತದೆ.

2.69 ತನ್ನ ಆಳ್ವಿಕೆ ಭ್ರಷ್ಟಾಚಾರ ಶೂನ್ಯವಾಗಿರುವುದೆಂಬ ಬಿಜೆಪಿ ಸರಕಾರದ ಜಂಭ ರ್‍ಯಾಫೆಲ್ ಯುದ್ಧವಿಮಾನ ವ್ಯವಹಾರದಲ್ಲಿ ಬಯಲಾಗಿದೆ. ಚಾಲ್ತಿಯಲ್ಲಿದ್ದ ಆರ್ಡರನ್ನು ಪ್ರಧಾನಿಯವರೇ ಬದಲಿಸಿ ಹೊಸ ಒಡಂಬಡಿಕೆಯಲ್ಲಿ ಸಾರ್ವಜನಿಕ ವಲಯದ ಹೆಚ್.ಎ.ಎಲ್. ಬದಲು ಅನಿಲ್ ಅಂಬಾನಿಯವರ ಕಂಪನಿಯನ್ನು ರೂ.21,000 ಕೋಟಿಯ ಆಫ್‌ಸೆಟ್‌ಗಳಿಗೆ ಪಾಲುದಾರನಾಗಿ ಮಾಡಲಾಗಿದೆ. ಮಧ್ಯಪ್ರದೇಶದ ವ್ಯಾಪಂ ಹಗರಣದಿಂದ ಆರಂಭಿಸಿ ಮಹಾರಾಷ್ಟ್ರದ ಭೂ ಮತ್ತು ಚಿಕ್ಕಿ

ಹಗರಣ, ರಾಜಸ್ಥಾನದಲ್ಲಿ ಗಣಿಗಾರಿಕೆ ಹಗರಣ ಮತ್ತು ಛತ್ತೀಸ್‌ಘರದ ಸಾರ್ವಜನಿಕ ವಿತರಣಾ ವ್ಯವಸ್ಥೆ ಹಗರಣದ ವರೆಗೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಭ್ರಷ್ಟಾಚಾರ ಹಗರಣಗಳು ತಾಂಡವವಾಡುತ್ತಿವೆ. ಅಮಿತ್ ಷಾರ ಮಗನ ಒಡೆತನದ ಕಂಪನಿಯ ಹಗರಣಕೋರ ವ್ಯವಹಾರ ಅದಕ್ಕೆ ಇನ್ನೊಂದು ಉದಾಹರಣೆ.

**ಚುನಾವಣಾ ಸುಧಾರಣೆಗಳು**

2.70 ಚುನಾವಣೆಗಳಲ್ಲಿ ದೊಡ್ಡ ಹಣವನ್ನು ಚುನಾವಣಾ ಬಾಂಡ್‌ಗಳ ಮೂಲಕ ಕಾನೂನುಬದ್ಧಗೊಳಿಸುವ ಮೋದಿ ಸರಕಾರದ ಕ್ರಮಗಳು ಚುನಾವಣಾ ಸುಧಾರಣೆಗಳ ತುರ್ತು ಮತ್ತು ತೀವ್ರ ಅಗತ್ಯವನ್ನು ಒತ್ತಿ ತೋರುತ್ತಿವೆ. ಚುನಾವಣೆಗಳಲ್ಲಿ ಹಣಬಲವನ್ನು ತಡೆಯಬೇಕೆಂದರೆ ಚುನಾವಣಾ ಖರ್ಚನ್ನು ಪ್ರಭುತ್ವ ವಹಿಸಿಕೊಳ್ಳಬೇಕು. ಅನುಪಾತಿಕ ಪ್ರಾತಿನಿಧ್ಯದ ಸೂತ್ರವನ್ನು ತರುವ ಮೂಲಕ ಚುನಾವಣಾ ವ್ಯವಸ್ಥೆಯಲ್ಲಿ ಒಂದು ಮೂಲಭೂತ ಬದಲಾವಣೆ ಜಾರಿಯಾಗಬೇಕು. ಒಂದು ಭಾಗಶ: ಪಟ್ಟಿ ವ್ಯವಸ್ಥೆಯೊಂದಿಗೆ ಅನುಪಾತಿಕ ಪ್ರಾತಿನಿಧ್ಯದ ಪಕ್ಷದ ನಿಲುವನ್ನು ವ್ಯಾಪಕವಾಗಿ ಪ್ರಚಾರಗೊಳಿಸಬೇಕು.

**ವಿದೇಶಾಂಗ ನೀತಿ : ಅಮೆರಿಕೆಯ ಪಾಳೆಯದಲ್ಲಿ**

2.71 ವಿದೇಶಾಂಗ ನೀತಿಯಲ್ಲಿ ಅಲಿಪ್ತ ನೀತಿಯಿಂದ ಒಂದು ಅಮೆರಿಕಾ ಸಂಯುಕ್ತ ಸಂಸ್ಥನಗಳ–ಪರ ದಿಕ್ಕಿನತ್ತ ಪಲ್ಲಟ 1991ರಲ್ಲಿ ನವ ಉದಾರೀಕರಣ ನೀತಿಯೊಂದಿಗೇ ಉಂಟಾಯಿತು. ಎರಡೂವರೆ ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಬಂದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ಸರ್ಕಾರಗಳು ಅಮೆರಿಕೆಯೊಂದಿಗೆ ವ್ಯೂಹಾತ್ಮಕ ಶಾಮೀಲಿನತ್ತ ಹೆಜ್ಜೆ ಹಾಕಿವೆ. ಅಮೆರಿಕಾದೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಬೆಸೆಯುವತ್ತ ಇನ್ನಷ್ಟು ಹೆಜ್ಜೆಗಳನ್ನು ಕಂಡ ಹತ್ತು ವರ್ಷಗಳ ಯುಪಿಎ ಸರಕಾರದ ಆಳ್ವಿಕೆಯ ನಂತರ ಮೋದಿ ಸರ್ಕಾರವು ಈ ಅಮೆರಿಕಾ–ಪರ ವಿದೇಶಾಂಗ ನೀತಿಯನ್ನು ತೀವ್ರಗೊಳಿಸಿದೆ ಮತ್ತು ವ್ಯಾಪಕಗೊಳಿಸಿದೆ.

2.72 ಜನವರಿ 2015ರಲ್ಲಿ ಒಬಾಮ ಭೇಟಿಯ ಸಂದರ್ಭದ 'ಭಾರತ–ಅಮೆರಿಕ ಸಂಯುಕ್ತ ಸಂಸ್ಥಾನ ಜಂಟಿ ಕಣ್ಣೋಟ ಹೇಳಿಕೆ'ಯು ಅಮೆರಿಕೆಯ ಏಷ್ಯಾಕ್ಕೆ ಅಚ್ಚುಗೂಟ ಮತ್ತು ಏಷಿಯಾ–ಶಾಂತಿಸಾಗರ ಭೂ–ರಾಜಕೀಯ ಸಾಮರಿಕ ತಂತ್ರದೊಂದಿಗೆ ಸಂಯೋಜನೆಗೆ ಭಾರತವನ್ನು ಬದ್ಧಗೊಳಿಸಿತು. ನರೇಂದ್ರ ಮೋದಿಯವರು ಇದನ್ನು ಜಪಾನ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ತ್ರಿಪಕ್ಷೀಯ ಭದ್ರತಾ ಮೈತ್ರಿಯನ್ನು ಸೇರಿಕೊಂಡು ಇನ್ನಷ್ಟು ಮುಂದೆ ಒಯ್ದರು ಮತ್ತು ಅದರಿಂದ ಇನ್ನೂ ಮುಂದಕ್ಕೆ ಹೋಗಿ ಜಪಾನ್, ಆಸ್ಟ್ರೇಲಿಯಾ ಮತ್ತು ಅಮೆರಿಕದೊಂದಿಗೆ ಅಮೆರಿಕಾ–ಪ್ರಾಯೋಜಿತ ಚತುರ್ಪಕ್ಷೀಯ ಮೈತ್ರಿಯಲ್ಲಿ ಸೇರಿಸಿದರು.

2.73 ಅಮೆರಿಕೆಯು ಭಾರತವನ್ನು ಒಂದು 'ಪ್ರಮುಖ ರಕ್ಷಣಾ ಪಾಲುದಾರ'ನೆಂದು ಹೆಸರಿಸುವ ಮೂಲಕ ಅಮೆರಿಕೆಯೊಂದಿಗೆ ಮಿಲಿಟರಿ ಶಾಮೀಲು ಇನ್ನಷ್ಟು ಆಳವಾಗಿದೆ. 'ಭಾರತ – ಅಮೆರಿಕ ರಕ್ಷಣಾ ಚೌಕಟ್ಟು ಒಪ್ಪಂದ'ವನ್ನು ಇನ್ನೂ ಹತ್ತು ವರ್ಷಗಳಿಗೆ ಮುಂದುವರೆಸಲಾಗಿದೆ. ಒಂದು ದೊಡ್ಡ ಹೆಜ್ಜೆಯೆಂದರೆ ಅಮೆರಿಕೆಯ ಯುದ್ಧ ನೌಕೆಗಳು ಮತ್ತು ವೈಮಾನಿಕ ಪಡೆಯ ವಿಮಾನಗಳಿಗೆ ಇಂಧನ ತುಂಬಿಸಲು, ಸರ್ವಿಸಿಂಗ್ ಮತ್ತು ನಿರ್ವಹಣೆ ಇತ್ಯಾದಿಗಳಿಗಾಗಿ ಭಾರತದ ನೆಲೆಗಳನ್ನು ಬಳಸಲು ಅನುವು ಮಾಡುವ ಎಲ್‌ಇಎಂಒಎ ಎಂದು ಹೆಸರಿಸಿದ ಸಾಗಾಣಿಕೆ ವಿನಿಮಯ ಒಪ್ಪಂದಕ್ಕೆ ಸಹಿ ಹಾಕಿದ್ದು. ಇದು ಭಾರತೀಯ ಸಾರ್ವಭೌಮತೆಗೆ ಭಂಗ ತಂದಿದೆ. ಈ ಮೊದಲು ಯಾವ ಸರಕಾರವೂ ಈ ಸಾಹಸಕ್ಕೆ ಕೈ ಹಾಕಿರಲಿಲ್ಲ.

2.74 ಇಸ್ರೇಲ್‌ನೊಂದಿಗಿನ ಸಂಬಂಧಗಳು ಇನ್ನಷ್ಟು ಆಳಗೊಂಡಿವೆ. ಪ್ಯಾಲೆಸ್ಟೇನ್‌ಗೆ ಭೇಟಿ ನೀಡದೆಯೇ ಮೋದಿಯವರು ಎತ್ತಿ ತೋರುವಂತೆ ಕೇವಲ ಇಸ್ರೇಲ್‌ನ ಪ್ರವಾಸ ಮಾಡಿದ್ದಾರೆ. ಅಮೆರಿಕೆಯ ಅಧ್ಯಕ್ಷರೂ ಸಾಮಾನ್ಯವಾಗಿ ಹಾಗೆ ಮಾಡುವುದಿಲ್ಲ. ಇದುವರೆಗಿನ ನಿಲುವಿನಿಂದ ದೂರ ಸರಿದು ಕ್ಯಾರಕಾಸ್‌ನಲ್ಲಿ ನಡೆದ ಅಲಿಪ್ತ ಶೃಂಗ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಭಾಗವಹಿಸಲಿಲ್ಲ.

2.75 ಜೂನ್ 2017ರಲ್ಲಿ ಭಾರತವು ಶಾಂಘೈ ಸಹಕಾರ ಸಂಘಟನೆಯ ಪೂರ್ಣ ಸದಸ್ಯನಾಯಿತು. ಅದು ಬ್ರಿಕ್ಸ್‌ನ ಭಾಗವೂ ಆಗಿದೆ. ಆದರೆ ಮೋದಿ ಸರ್ಕಾರ ಕೇವಲ ಭಯೋತ್ಪಾದನೆಯ ವಿಚಾರದಲ್ಲಿ ಮಾತ್ರವೇ ಆಸಕ್ತವಾಗಿದೆ. ಈ ವೇದಿಕೆಗಳನ್ನು ಪ್ರಾದೇಶಿಕ ಸಹಕಾರ ಮತ್ತು ಬಹುಧ್ರುವಕ್ಕಾಗಿ ಬಳಸಿಕೊಳ್ಳುತ್ತಿ.ಲ್ಲ.

2.76 ದಕ್ಷಿಣ ಏಷ್ಯಾದ ನಮ್ಮ ನೆರೆ ರಾಷ್ಟ್ರಗಳ ಸಂಬಂಧಗಳ ಬಗ್ಗೆ ಮೋದಿ ಸರಕಾರದ ನೀತಿ ಉತ್ತಮ ಮತ್ತು ನಿಕಟ ಸಂಬಂಧಗಳಿಗೆ ಅಡ್ಡಿಯಾಗಿ ಪರಿಣಮಿಸಿದೆ. ನೇಪಾಳಕ್ಕೆ ದಿಗ್ಬಂಧನ ಹಾಕಿದ ಮಾದೇಶಿ ಚಳುವಳಿಗೆ ಬೆಂಬಲ ನೀಡಿ ಭಾರತ ನೇಪಾಳೀ ಜನತೆ ಮತ್ತು ಎಲ್ಲ ರಾಜಕೀಯ ಪಕ್ಷಗಳನ್ನು ಎದುರು ಹಾಕಿಕೊಂಡಿದೆ. ಬಾಂಗ್ಲಾ ದೇಶಕ್ಕೆ ರೋಹಿಂಗ್ಯಾ ನಿರಾಶ್ರಿತರ ಕುರಿತ ಭಾರತದ ನಿಲುವು ಯಾವುದೇ ರೀತಿಯಲ್ಲಿ ಸಹಾಯಕವಾಗಿಲ್ಲ. ಮೋದಿ ಸರಕಾರ ಪಾಕಿಸ್ತಾನದೊಂದಿಗೆ ಸಂವಾದದ ಸಾಧ್ಯತೆಯನ್ನು ತ್ಯಜಿಸಿ ಒಂದು ತಿಕ್ಕಾಟದ ನಿಲುವು ತಳೆಯುತ್ತದೆ. ಇದು ರಾಷ್ಟ್ರೀಯ ಸಂಕುಚಿತವಾದವನ್ನು ಬಡಿದೆಬ್ಬಿಸುವ

ಮತ್ತು ದೇಶದಲ್ಲಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಅದರ ಸಂಕುಚಿತ ರಾಜಕೀಯ ಹಿಂತಾಸಕ್ತಿಗಳಿಂದ ಪ್ರೇರಿತವಾಗಿದೆ.

**ಬೆಳೆಯುತ್ತಿರುವ ಪ್ರತಿರೋಧ ಮತ್ತು ವಿಸ್ತಾರಗೊಳ್ಳುತ್ತಿರುವ ಹೋರಾಟಗಳು**

2.77 ಈ ಅವಧಿಯು ಮೋದಿ ಸರಕಾರ ಆರ್ಥಿಕ ನೀತಿಗಳು, ಕೋಮುವಾದಿ ಕಾರ್ಯಸೂಚಿ ಮತ್ತು ಸರ್ವಾದಿಕಾರಶಾಹಿ ಪ್ರಹಾರಗಳ ವಿರುದ್ಧ ಬೆಳೆಯುತ್ತಿರುವ ಪ್ರತಿರೋಧಗಳಿಂದ ಕೂಡಿದೆ.

(i) ರೈತಾಪಿ ಜನರ ಐಕ್ಯ ಹೋರಾಟಗಳಾಗಿವೆ. ಅವುಗಳಲ್ಲಿ ಮುಖ್ಯವಾದ್ದು ಮಹಾರಾಷ್ಟ್ರದ ರೈತರಿಂದ ಹನ್ನೊಂದು ದಿನಗಳ ಮುಷ್ಕರ ಮತ್ತು ಅದನ್ನನುಸರಿಸಿ ನಡೆದ ಪ್ರತಿಭಟನೆಗಳು;ಕಾಲ ಮಹಾರಾಷ್ಟ್ರದಲ್ಲಿ ನಡೆದ ದೀರ್ಘ ಹೋರಾಟ ಮತ್ತು ತದನಂತರ ವಿರೋಧ ಚಟುವಟಿಕೆಗಳು; ಮಧ್ಯಪ್ರದೇಶದ ಮಂದ್‌ಸೌರ್ ಮತ್ತು ಸುತ್ತಲಿನ ಜಿಲ್ಲೆಗಳಲ್ಲಿ ರೈತರ ' ಸ್ವಯಂಪ್ರೇರಿತ ಹೋರಾಟಗಳು; ಜಾರ್ಖಂಡ್‌ನಲ್ಲಿ ಸಂತಾಲ್ ಪರಗಣಗಳು ಮತ್ತು ಛೋಟಾನಾಗ್ಪುರ್ ಗೇಣಿ ಕಾಯ್ದೆಗೆ ತಿದ್ದುಪಡಿಗಳ ವಿರುದ್ಧ ಹೋರಾಟ; ಮತ್ತು ಸಿಕಾರ್ ಹಾಗೂ ರಾಜಸ್ತಾನದ ಇತರ ಐದು ಜಿಲ್ಲೆಗಳಲ್ಲಿ ಎಡೆಬಿಡದೆ ಇತರ ಎಲ್ಲ ಗ್ರಾಮೀಣ ಜನವಿಭಾಗಗಳ ಬೆಂಬಲದೊಂದಿಗೆ ನಡೆದ ರೈತಾಪಿ ಜನರ ಹೋರಾಟಗಳು. ಈ ಹೋರಾಟಗಳು ರಾಜ್ಯಸರಕಾರಗಳಿಂದ ಕೆಲವು ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ದೇಶದ 187 ರೈತ ಸಂಘಟನೆಗಳಐಕ್ಯ ವೇದಿಕೆ ದೆಹಲಿಯಲ್ಲಿ ನವೆಂಬರ್ 21–22ರಂದು ನಡೆಸಿದ ರೈತ ಸಂಸತ್‌ನಲ್ಲಿ ದೇಶದೆಲ್ಲೆಡೆಯ ರೈತರು, ಬಹುದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಇದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಮಹತ್ವದ ಐಕ್ಯ ರೈತ ಕಾರ್ಯಾಚರಣೆಯಾಗಿದೆ. ಈ ಎಲ್ಲಾ ಹೋರಾಟಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾ ಬಹು ಮುಖ್ಯ ಪಾತ್ರವಹಿಸಿತ್ತು.

(ii) ಸೆಪ್ಟೆಂಬರ್ 2, 2016ರಂದು ಕಾರ್ಮಿಕ ಸಂಘಟನೆಗಳ ಐಕ್ಯ ವೇದಿಕೆಯ ಕರೆಯ ಮೇರೆಗೆ ನಡೆದ ಒಂದು ಸಾರ್ವತ್ರಿಕ ಮುಷ್ಕರವು ನೌಕರರು ಮತ್ತು ಕಾರ್ಮಿಕರ ಭಾಗವಹಿಸುವಿಕೆಯನ್ನು ಮತ್ತಷ್ಟು ವಿಸ್ತರಿಸಿತು. ಬ್ಯಾಂಕ್, ಉಕ್ಕು, ಬಿ.ಎಸ್.ಎನ್.ಎಲ್ ಸೇರಿದಂತೆ ಹಲವಾರು ಮಹತ್ವದ ಕ್ಷೇತ್ರವಾರು ಹೋರಾಟಗಳು ಖಾಸಗೀಕರಣದ ವಇರುದ್ಧ ನಡೆದಿವೆ. ಬೆಂಗಳೂರಿನ ಅಂಗನವಾಡಿ ನೌಕರರ ಧರಣಿ ಸತ್ಯಾಗ್ರಹ ಇವುಗಳಲಲಿ ಒಂದು ಗಮನಾರ್ಹ ಹೋರಾಟ. ನವೆಂಬರ್ 9–11ರವರೆಗೆ ಲಕ್ಷಾಂತರ ಕಾರ್ಮಿಕರು ಒಂದಾಗಿ ದೆಹಲಿಯಲ್ಲಿ ಸಂಸತ್ತಿನ ಹೊರಗೆ ನಡೆಸಿದ ಮಹಾಪಡಾವ್ ಅತ್ಯಂತ ವಿಶಿಷ್ಟವಾದ ಪ್ರತಿಭಟನಾ ಕಾರ್ಯಾಚರಣೆ. ಈ ಎಲ್ಲಾ ಹೋರಾಟಗಳಲ್ಲಿ ಸಿಐಟಿಯು ಬಹು ಪ್ರಮುಖ ಪಾತ್ರ ವಹಿಸಿದೆ.

(iii) ಸರ್ಕಾರದ ಕೋಮುವಾದಿ ಸರ್ವಾಧಿಕಾರಶಾಹಿ ಪ್ರಹಾರಗಳ ವಿರುದ್ಧ ಜವಾಹರಲಾಲ್ ವಿಶ್ವವಿದ್ಯಾಲಯ, ಹೈದ್ರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ,, ಎಫ್‌ಟಿಐಐ ಮುಂತಾದೆಡೆಗಳಲ್ಲಿ ವಿದ್ಯಾರ್ಥಿಗಳ ಹೋರಾಟಗಳು ನಡೆದಿವೆ. ಗೋ ಕಾವಲುಕೋರರು ಅಲ್ಪಸಂಖ್ಯಾತರ ವಿರುದ್ಧ ಫ್ಯಾಸಿಸ್ಟ್ ಮಾದರಿ ಹಲ್ಲೆಗಳನ್ನು ನಡೆಸಿದ್ದರ ವಿರುದ್ಧ, ಬರಹಗಾರರನ್ನು, ಪತ್ರಕರ್ತರನ್ನು ಕೊಂದಿರುವುದರ ವಿರುದ್ಧ ಸಾಮೂಹಿಕ ಪ್ರತಿಭಟನೆಗಳು ಮತ್ತು ರ್‍ಯಾಲಿಗಳು ನಡೆದಿವೆ. ಕಲ್ಬುರ್ಗಿಯವರ ಹತ್ಯೆಯ ನಂತರ ದೊಡ್ಡ ಸಂಖ್ಯೆಯಲ್ಲಿ ಪ್ರತಿಷ್ಠಿತ ಬರಹಗಾರರು ಮತ್ತು ಕಲಾವಿದರು ತಮ್ಮ ಪ್ರಶಸ್ತಿಗಳನ್ನು ಹಿಂದಿರುಗಿಸಿದರು. ಗೌರಿ ಲಂಕೇಶ್ ಹತ್ಯೆಯ ನಂತರ ದೇಶದಾದ್ಯಂತ ಪ್ರತಿಭಟನೆಗಳು ನಡೆದವು.

(iv) ರೋಹಿತ್ ವೆಮುಲ ಸಾವಿನ ವಿರುದ್ಧ ಮತ್ತು ಉನಾದಲ್ಲಿ ದಲಿತರ ಮೇಲೆ ಅತ್ಯಾಚಾರಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳು ನಡೆದವು. ಎಡ ಮತ್ತು ದಲಿತ ಸಂಘಟನೆಗಳ ಐಕ್ಯ ಪ್ರಚಾರಾಂದೋನಗಳು ನಡೆದಿವೆ. 'ದಲಿತ ಸ್ವಾಭೀಮಾನ ಸಂಘರ್ಷ ಸಮಿತಿ'ಯು ಎಡ ಮತ್ತು ದಲಿತ ಸಂಘಟನೆಗಳ ವೇದಿಕೆಯಾಗಿ ಹೊಮ್ಮಿದೆ. ಅದು ಹಲವಾರು ಕೇಂದ್ರಗಳಲ್ಲಿ ರ್‍ಯಾಲಿಗಳನ್ನು ಸಂಘಟಿಸಿದೆ.

(v) ಸೆಪ್ಟೆಂಬರ್ 2017ರಲ್ಲಿ ಸಾಮೂಹಿಕ, ವರ್ಗ ಮತ್ತು ಸಾಮಾಜಿಕ ಚಳುವಳಿಗಳ 'ಒಂದು ವೇದಿಕೆಯಾಗಿ 'ಜನ ಏಕತಾ ಜನ ಅಧಿಕಾರ ಆಂದೋಲನ್' ರಚಿಸಲಾಗಿದೆ. ಅದು ಒಂದು ಬೇಡಿಕೆಗಳಪಟ್ಟಿಯನ್ನು ರೂಪಿಸಿದ್ದು, ಅದರ ಸುತ್ತ 'ಐಕ್ಯ ಪ್ರಚಾರ ಮತ್ತು ಹೋರಾಟಗಳನ್ನು ಆರಂಭಿಸಲಾಗುವುದು.

**ಸನ್ನಿವೇಶದ ಸಾರಾಂಶ ಹೀಗಿದೆ:**

2.78 ಬಿಜೆಪಿಯು ತನ್ನ ರಾಜಕೀಯ ಸ್ಥಾನವನ್ನು ಕ್ರೋಢೀಕರಿಸಿಕೊಂಡಿದೆ ಮೋದಿ ಸರಕಾರದ ಅಡಿಯಲ್ಲಿ ಜನತೆಯ ನವ ಉದಾರವಾದಿ ಬಂಡವಾಳಶಾಹಿ ಶೋಷಣೆ ತೀವ್ರಗೊಂಡಿದೆ, ಹಿಂದುತ್ವವನ್ನು ಕಾರ್ಯಸೂಚಿಯನ್ನು ಅನುಸರಿಸುವ ಮೂಲಕ ಸಂವಿಧಾನದ ಜಾತ್ಯತೀತ ಪ್ರಜಾಪ್ರಭುತ್ವವಾದಿ ಚೌಕಟ್ಟನ್ನು ಕೊರೆದು ಹಾಕಲಾಗುತ್ತಿದೆ. ಮತ್ತು ಬಿಜೆಪಿ ನೇತೃತ್ವದ ಸರಕಾರ ಭಾರತವನ್ನು ಅಮೆರಿಕಾದ ಸಾಮ್ರಾಜ್ಯಶಾಹಿ ಕಾರ್ಯವ್ಯೂಹದಲ್ಲಿ ನಿಕಟವಾಗಿ ಕಟ್ಟಿದೆ. ಈ ಎಲ್ಲವೂ ಕೋಮುವಾದಿ ಸರ್ವಾಧಿಕಾರಶಾಹಿ–ಕೋಮುವಾದಿ ಆಳ್ವಿಕೆ ಮೇಲೆರಗಿ ಬರುತ್ತಿರುವುದರ ಲಕ್ಷಣಗಳು.

2.79 ಅದೇ ವೇಳೆಗೆ ಮೋದಿ ಸರ್ಕಾರದ ಧೋರಣೆಗಳ ವಿರುದ್ಧ ವಿರುದ್ಧ ಜನಗಳ ಅಸಂತೃಪ್ತಿ ಬೆಳೆಯುತ್ತಿರುವ ಸಂಕೇತಗಳೂ ಇವೆ. ಇವು ವಿವಿಧ ಜನವಿಭಾಗಗಳ ಬೆಳೆಯುತ್ತಿರುವ ಪ್ರತಿರೋಧ ಮತ್ತು ಹೋರಾಟಗಳಲ್ಲಿ ಕೂಡ ಅಭಿವ್ಯಕ್ತಗೊಳ್ಳುತ್ತಿವೆ. ಒಂದೆಡೆಯಲ್ಲಿ ಆಳುವ ವರ್ಗಗಳು ಮತ್ತು ಇನ್ನೊಂದೆಡೆಯಲ್ಲಿ ಕಾರ್ಮಿಕ ವರ್ಗ ಮತ್ತು ರೈತಾಪಿಗಳ ನಡುವಿನ ವೈರುಧ್ಯಗಳು ಬೆಳೆದಿವೆ. ತೀವ್ರಗೊಳ್ಳುತ್ತಿವೆ. ಈ ಸನ್ನಿವೇಶದಲ್ಲಿ ನಾವು ಮಧ್ಯಪ್ರವೇಶ ಮಾಡಿ ದುಡಿಯುವ ಜನತೆಯ ವಿವಿಧ ಹೋರಾಟಗಳನ್ನು ಮುಂದಕ್ಕೆ ಒಯ್ಯಬೇಕು.

2.80 ಸರ್ವಾಧಿಕಾರಶಾಹಿತ್ವವು ಒಂದು ವ್ಯವಸ್ಥೆ ದೊಡ್ಡ ಬಂಡವಾಳಶಾಹಿ–ಭೂಮಾಲಕ ವರ್ಗಗಳ ಪ್ರಾಬಲ್ಯದಲ್ಲಿರುವಾಗ ವಿವಿಧ ಪ್ರಸಂಗಗಳಲ್ಲಿ ವಿಭಿನ್ನ ರೂಪಗಳಲ್ಲಿ ಹೊರಹೊಮ್ಮುತ್ತದೆ. ನಾವು ಈ ಸರ್ವಾಧಿಕಾರಶಾಹಿತ್ವದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಬೇಕೆಂದರೆ ದೊಡ್ಡ ಬಂಡವಾಳಶಾಹಿ–ಭೂಮಾಲಕ ಪ್ರಾಬಲ್ಯವನ್ನು ದುರ್ಬಲಗೊಳಿಸುವತ್ತ ನಮ್ಮ ಕಾರ್ಯತಂತ್ರಗಳನ್ನು ನಿರ್ದೇಶಿಸಬೇಕಾಗಿದೆ.

2.81 ತಮ್ಮ ಮೇಲೆ ಹೇರುತ್ತಿರುವ ಆರ್ಥಿಕ ಹೊರೆಗಳ ವಿರುದ್ಧ ದುಡಿಯುವ ಜನಗಳ ವಿವಿಧ ವಿಭಾಗಗಳ ಹೋರಾಟಗಳನ್ನು ಮುಂದೊಯ್ಯಲು ಪಕ್ಷ ತನ್ನ ಮಧ್ಯಪ್ರವೇಶವನ್ನು ಹೆಚ್ಚಿಸಬೇಕಿದೆ. ನವ ಉದಾರವಾದಿ ನೀತಿಗಳ ಪರಿಣಾಮಗಳ ವಿರುದ್ಧದ ಈ ಹೋರಾಟಗಳನ್ನು ಕೋಮುವಾದಿ ಕಾರ್ಯಸೂಚಿಯ ವಿರುದ್ಧದ ಹೋರಾಟಗಳೊಂದಿಗೆ ಜೋಡಿಸುವುದು ಬಿಜೆಪಿ–ಆರ್‌ಎಸ್‌ಎಸ್ ಜೋಡಿಯ ವಿರುದ್ಧ ಹೋರಾಟವನ್ನು ಮುಂದೊಯ್ಯಲು ಇರುವ ದಾರಿ. ನವ–ಉದಾರವಾದಿ ಧೋರಣೆಗಳು, ಹಿಂದುತ್ವ ಕೋಮುವಾದ ಮತ್ತು ಸರ್ವಾಧಿಕಾರಶಾಹಿ ಬಿಡಿಸಲಾಗದಷ್ಟು ಒಂದಕ್ಕೊಂದು ಹೆಣೆದುಕೊಂಡಿವೆ.

**ರಾಜಕೀಯ ಪಕ್ಷಗಳ ನಿಲುಮೆ**

**ಬಿಜೆಪಿ**

2.82 ಬಿಜೆಪಿಯು, ನಮ್ಮ ಪಕ್ಷದ ಕಾರ್ಯಕ್ರಮ ತೋರಿಸಿರುವಂತೆ "ಒಂದು ವೀಬಜನಕಾರಿ ಮತ್ತು ಕೋಮುವಾದಿ ವೇದಿಕೆ ಇರುವ ಪ್ರತಿಕ್ರಿಯಾವಾದಿ ಪಕ್ಷ, ಅದರ ಪ್ರತಿಕ್ರಿಯಾವಾದಿ ಹೂರಣ ಇತರ ಧರ್ಮಗಳ ವಿರುದ್ಧ ದ್ವಾಷ, ಅಸಹನೆ ಮತ್ತು ಉಗ್ರ–ರಾಷ್ಟ್ರವಾದಿ ಸಂಕುಚಿತವಾದವನ್ನು ಆಧರಿಸಿದೆ. ಬಿಜೆಪಿ ಒಂದು ಸಾಧಾರಣ ಬೂರ್ಜ್ವಾ ಪಕ್ಷವೇನಲ್ಲ, ಏಕೆಂದರೆ ಫ್ಯಾಸಿಸ್ಟ್ ಮಾದರಿಯ ರಾಷ್ಟ್ರೀಯ ಸ್ವಯಂಸೇವಕ ಸಂಘ ಅದಕ್ಕೆ ಮಾರ್ಗದರ್ಶನ ನೀಡುತ್ತಿದೆ ಮತ್ತು ಅದರ ಮೇಲೆ ಪ್ರಭಾವ ಹೊಂದಿದೆ. ಬಿಜೆಪಿ ಅಧಿಕಾರದಲ್ಲಿರುವಾಗ ಆರ್.ಎಸ್.ಎಸ್‌ಗೆ ಪ್ರಭುತ್ವ ಅಧಿಕಾರದ ಪ್ರಭುತ್ವ ಯಂತ್ರದ ಸಾಧನಗಳು ಲಭ್ಯವಾಗುತ್ತವೆ." ಬಿ.ಜೆ.ಪಿ. ಫ್ಯಾಸಿಸ್ಟ್ ಮಾದರಿಯ ಆರ್.ಎಸ್.ಎಸ್ ನಿಂದಲೇ ನಡೆಸಲ್ಪಡುತ್ತಿದ್ದು ಅದರ ನಿಯಂತ್ರಣದಲ್ಲೇ ಇದೆ.

2.83 ಹಿಂದಿನ ವಾಜಪೇಯಿ ಸರಕಾರಕ್ಕೆ ಹೋಲಿಸಿದರೆ ನರೇಂದ್ರ ಮೋದಿ ಅಡಿಯಲ್ಲಿ ಆರ್.ಎಸ್.ಎಸ್ ಮತ್ತು ಸರಕಾರದ ನಡುವೆ ಹೆಚ್ಚಿನ ಸಂಯೋಜನೆಯಿದೆ. ಅಲ್ಲದೆ ನರೇಂದ್ರ ಮೋದಿಯವರಿಗೆ ದೊಡ್ಡ ಬಂಡವಾಳಶಾಹಿಯಿಂದ ಬಿಜೆಪಿಗೆ ಹೆಚ್ಚು ವಿಸ್ತಾರವಾದ ಬೆಂಬಲ ಗಳಿಸಲು ಸಾಧ್ಯವಾಗಿದೆ,

2.84 ಬಿಜೆಪಿ ಬೆಳೆದಿದೆ ಮತ್ತು ದೊಡ್ಡ ಬಂಡವಾಳಶಾಹಿ ಹಾಗೂ ಭೂಮಾಲಕ ವರ್ಗಗಳ ಪ್ರಭಾವೀ ರಾಜಕೀಯ ಪಕ್ಷವಾಗಿ ಕಾಂಗ್ರೆಸನ್ನು ಸ್ಥಾನಪಲ್ಲಟಗೊಳಿಸಿದೆ. ಪ್ರಭುತ್ವ ಅಧಿಕಾರವನ್ನು ಬಳಸಿಕೊಂಡು ಬಿಜೆಪಿ–ಆರ್‌ಎಸ್‌ಎಸ್ ಜೋಡಿ ತನ್ನ ಸಂಘಟನೆ ಮತ್ತು ಪ್ರಭಾವವನ್ನು ದೇಶಾದ್ಯಂತ ಹರಡಿದೆ. ತನ್ನ ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಕಾಂಗ್ರೆಸ್ ಮತ್ತು ಇತರ ಬೂರ್ಜ್ವಾ ಪಕ್ಷಗಳ ಪಕ್ಷಾಂತರಿಗಳನ್ನು ಅದು ಸೇರಿಸಿಕೊಳ್ಳುತ್ತಿದೆ, ವಿಶೇಷವಾಗಿ ಅದು ದುರ್ಬಲವಾಗಿರುವ ರಾಜ್ಯಗಳಲ್ಲಿ, ಉದಾಹರಣೆಗೆ, ಈಶಾನ್ಯದ ಪ್ರದೇಶದಲ್ಲಿ.

2.85 ಸದ್ಯ 29 ರಾಜ್ಯಗಳಲ್ಲಿ 19 ರಲ್ಲಿ ಬಿಜೆಪಿ ತಾನೇ ಅಥವಾ ಮೈತ್ರಿಯಿಂದ ಸರಕಾರಗಳಲ್ಲಿದೆ. ಲೋಕ ಸಭೆಯಲ್ಲಿ ಅದಕ್ಕೆ ಬಹುಮತ ಇದೆ ಹಾಗೂ ರಾಜ್ಯಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಮೂಡಿ ಬಮದಿದೆ. ಇದೇ ಪ್ರಥಮ ಬಾರಿಗೆ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಇಬ್ಬರೂ ಬಿಜೆಪಿ–ಆರ್.ಎಸ್.ಎಸ್ ಮೂಲಕ್ಕೆ ಸೇರಿದವರಾಗಿದ್ದಾರೆ.

**ಕಾಂಗ್ರೆಸ್ ಪಕ್ಷ**

2.86 ಕಾಂಗ್ರೆಸ್ ಪಕ್ಷದ ವರ್ಗಚಾರಿತ್ರ್ಯ ಬಿಜೆಪಿಯಂತದ್ದೇ ಆಗಿದೆ. ಅದು ದೊಡ್ಡ ಬಂಡವಾಳಶಾಹಿ–ಭೂಮಾಲಕ ವರ್ಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ. ಅದರ ರಾಜಕೀಯ ಪ್ರಭಾವ ಮತ್ತು ಸಂಘಟನೆ ಇಳಿಮುಖಗೊಳ್ಳುತ್ತಿದೆ ಮತ್ತು ಪ್ರಧಾನ ಆಳುವ ವರ್ಗದ ಪಕ್ಷವಾಗಿ ತನ್ನ ಸ್ಥಾನವನ್ನು ಅದು ಬಿಜೆಪಿಗೆ ಬಿಟ್ಟುಕೊಟ್ಟಿದೆ. ಕಾಂಗ್ರೆಸ್ ತನ್ನನ್ನು ಪಾತ್ಯತೀತ ಪಕ್ಷವೆಂದು ಕರೆದುಕೊಳ್ಳುತ್ತಿದೆ. ಆದರೆ ಕೋಮುವಾದಿ ಶಕ್ತಿಗಳನ್ನು ನಿರಂತರವಾಗಿ ಎದುರಿಸುವಲ್ಲಿ ತಾನು ಅಸಮರ್ಥ ಎಂಬುದನ್ನು ಸಾಬೀತು ಪಡಿಸಿಕೊಂಡಿದೆ. ತಾನು ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ನವ ಉದಾರವಾದಿ ಕಾರ್ಯಸೂಚಿಯ ಪ್ರವರ್ತಕನಾಯಿತು ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಂದಿಗೆ ವ್ಯೂಹಾತ್ಮಕ ಮೈತ್ರಿಯನ್ನು ಬೆಸೆಯಿತು. ಪ್ರಧಾನ

ಪ್ರತಿಪಕ್ಷವಾಗಿ ಅದು ಇವೇ ನೀತಿಗಳನ್ನು ಪ್ರತಿಪಾದಿಸುವುದನ್ನು ಮುಂದುವರೆಸಿದೆ. ಈ ನೀತಿಗಳನ್ನು ವಿರೋಧಿಸುವುದು ಅಗತ್ಯವಾಗಿದೆ.

2.87 ಏಕಸ್ವಾಮ್ಯ–ವಿರೋಧಿ, ಭೂಮಾಲಕ–ವಿರೋಧ ಮತ್ತು ಸಾಮ್ರಾಜ್ಯಶಾಹಿ–ವಿರೋಧ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಮೂರು ಮೂಲ ಕಾರ್ಯಭಾರಗಳು. ಪಕ್ಷದ ಕಾರ್ಯಕ್ರಮವು ಹೇಳುವಂತೆ,

"ಆದರೆ, ಇಂದಿನ ಸಂದರ್ಭದಲ್ಲಿ ಕ್ರಾಂತಿಯ ಈ ಮೂಲ, ಆಧಾರಭೂತ ಕಾರ್ಯಭಾರಗಳನ್ನು ದೊಡ್ಡ ಬಂಡವಾಳಶಾಹಿ ಮತ್ತು ಪ್ರಭುತ್ವದ ನೇತೃತ್ವದ ಸ್ಥಾನದಲ್ಲಿ ಕೂತಿರುವ ಅದರ ರಾಜಕೀಯ ಪ್ರತಿನಿಧಿಗಳಿಗೆ ದೃಢ ವಿರೋಧ ಮತ್ತು ಅದರ ವಿರುದ್ಧ ಹೋರಾಟ ನಡೆಸದೆ ನಿರ್ವಹಿಸುವುದು ಸಾಧ್ಯವಿಲ್ಲ"

2.88 ಪ್ರಸ್ತುತ ನಮ್ಮ ದೇಶದಲ್ಲಿ ದೊಡ್ಡ ಬಂಡವಾಳಶಾಹಿಯ ರಾಜಕೀಯ ಪ್ರತಿನಿಧಿಗಳೆಂದರೆ ಬಿಜೆಪಿ ಮತ್ತು ಕಾಂಗ್ರೆಸ್. ನಮ್ಮ ಕಾರ್ಯಕ್ರಮಾತ್ಮಕ ಅರಿವಿನ ಆಧಾರದಲ್ಲಿ ಹೇಳುವುದಾದರೆ ಕಾಂಗ್ರೆಸ್ ದೊಡ್ಡ ಬಂಡವಾಳಶಾಹಿ ಮತ್ತು ಭೂಮಾಲಕರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ ಮತ್ತು ಸಾಮ್ರಾಜ್ಯಶಾಹಿ–ಪರ ನೀತಿಗಳನ್ನು ಅನುಸರಿಸುತ್ತದೆ. ಹಾಗಾಗಿ ಒಂದು ಸಂಯುಕ್ತ ರಂಗದಲ್ಲಿ ಅವರನ್ನು ಮಿತ್ರರು ಅಥವ ಭಾಗೀದಾರರು ಎಂದು ಪರಿಗಣಿಸುವ ಒಂದು ಕಾರ್ಯತಂತ್ರಾತ್ಮಕ ನಿಲುವನ್ನು ನಾವು ತಳೆಯುವುದು ಸಾಧ್ಯವಿಲ್ಲ. .

2.89 ಆದರೆ ಇಂದು ಅಧಿಕಾರದಲ್ಲಿರುವುದು ಬಿಜೆಪಿ ಮತ್ತು ಆರ್.ಎಸ್.ಎಸ್‌ನೊಂದಿಗೆ ಅದರ ಮೂಲ ಕೊಂಡಿಯಿಂದಾಗಿ ಅದು ಪ್ರಧಾನ ಬೆದರಿಕೆಯಾಗಿದೆ. ಹಾಗಾಗಿ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡೂ ಸಮಾನ ಅಪಾಯಗಳೆಂದು ಪರಿಗಣಿಸುವ ಒಂದು ನಿಲುವು ಸಾಧ್ಯವಿಲ್ಲ.

2.90 ನಮ್ಮ ಕಾರ್ಯತಂತ್ರಾತ್ಮಕ ನಿಲುವು ಸಂಸತ್ತಿನಲ್ಲಿ ಸಹಮತವಿರುವ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವಲ್ಲಿ ಕಾಂಗ್ರೆಸ್ ಮತ್ತಿತರ ಜಾತ್ಯತೀತ ಪಕ್ಷಗಳೊಂದಿಗೆ ಸಹಕರಿಸುವುದು ಆಗಿರಬೇಕು. ಸಂಸತ್ತಿನ ಹೊರಗೆ ಕೋಮುವಾದಿ ಬೆದರಿಕೆಯ ವಿರುದ್ಧ ಜನಗಳನ್ನು ವಿಶಾಲವಾಗಿ ಅಣಿನೆರೆಸಲು ಎಲ್ಲ ವಿರೋಧಿ ಜಾತ್ಯತೀತ ಶಕ್ತಿಗಳೊಂದಿಗೆ ನಾವು ಸಹಕರಿಸಬೇಕು. ಎಲ್ಲ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಜಂಟಿ ಕಾರ್ಯಾಚರಣೆಗಳನ್ನು ಕಾಂಗ್ರೆಸ್ ಮತ್ತಿತರ ಬೂರ್ಜ್ವಾ ಪಕ್ಷಗಳನ್ನು ಅನುಸರಿಸುವ ಜನಸಮೂಹಗಳನ್ನು ಸೆಳೆಯಬಹುದಾದ ರೀತಿಯಲ್ಲಿ ನಾವು ಪೋಷಿಸಬೇಕು.

**ಪ್ರಾದೇಶಿಕ ಪಕ್ಷಗಳು**

2.91 ಪ್ರಾದೇಶಿಕ ಪಕ್ಷಗಳ ಬದಲಾದ ಪಾತ್ರವನ್ನು 21ನೇ ಮಹಾಧಿವೇಶನದಲ್ಲಿ ಅಂಗೀಕರಿಸಲಾದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯಲ್ಲಿ ವಿಶ್ಲೇಷಿಸಿ ಸಂಗ್ರಾಹ್ಯಗೊಳಿಸಲಾಗಿದೆ. ಪ್ರಾದೇಶಿಕ ಪಕ್ಷಗಳು ಬಂಡವಾಳಶಾಹಿ–ಭೂಮಾಲೀಕ ವರ್ಗಗಳ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತವೆ ಮತ್ತು ಈ ವರ್ಗ ಹಿತಾಸಕ್ತಿಗಳು ಪ್ರಾದೇಶಿಕ ಪಕ್ಷಗಳ ನವ ಉದಾರವಾದಿ ನೀತಿಗಳ ಕುರಿತ ಅವುಗಳ ವರ್ತನೆಯಲ್ಲಿ ಪ್ರತಿಬಿಂಬಿತವಾಗಿದೆ. ಕೇಂದ್ರದಲ್ಲಿ ಬಿ.ಜೆ.ಪಿ. ಅಥವಾ ಕಾಂಗ್ರೆಸ್‌ನ ಸಮ್ಮಿಶ್ರ ಸರ್ಕಾರಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಅವುಗಳ ಅವಕಾಶವಾದವು ಅವಕಾಶಗಳಿಗೆ ಕಾತರಿಸುವ ಅವುಗಳ ಆಕಾಂಕ್ಷೆಯಿಂದ ಹೊಮ್ಮಿವೆ ಎಂಬುವುದನ್ನೂ ನಾವು ಗುರುತಿಸಿದ್ದೇವೆ.

2.92 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿ.ಜೆ.ಪಿ.ಯೊಂದಿಗೆ ಮೈತ್ರಿ ಮಾಡಿಕೊಂಡ ಪ್ರಮುಖ ಪ್ರಾದೇಶಿಕ ಪಕ್ಷಗಳೆಂದರೆ ಅಕಾಲಿ ದಳ್ ಟಿ.ಡಿ.ಪಿ. ಮತ್ತು ಎ.ಜಿ.ಪಿ. ಆ ನಂತರದಲ್ಲಿ 2015ರ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ದೊರೆತ ಜನಾದೇಶಕ್ಕೆ ದ್ರೋಹ ಬಗೆದು ಜೆ.ಡಿ.(ಯು) ಬಿ.ಜೆ.ಪಿ.ಯೊಡನೆ ಮರುಸಖ್ಯ ಬೆಳೆಸಿತು. ಜಯಲಲಿತಾ ನಿಧನಾನಂತರ ಎ.ಐ.ಎ.ಡಿ.ಎಂ.ಕೆ ಇಬ್ಭಾಗವಾಯಿತು. ಎರಡೂ ಬಣಗಳು ಒಗ್ಗೂಡಿ ಬಿ.ಜೆ.ಪಿ.ಗೆ ಸನ್ನಿಹಿತವಾಗಲು ಸ್ಪರ್ಧಿಸಿದವು. ಅಧಿಕಾರದಲ್ಲಿರುವ ಇನ್ನೆರಡು ಪ್ರಾದೇಶಿಕ ಪಕ್ಷಗಳು ಒಡಿಸ್ಸಾದಲ್ಲಿ ಬಿ.ಜೆ.ಪಿ., ತೆಲಂಗಾಣದಲ್ಲಿ ಟಿ.ಆರ್.ಎಸ್. ಮೋದಿ ಸರ್ಕಾರವನ್ನು ವಿರೋಧಿಸಲು ಮುಂದಾಗಲಿಲ್ಲ ಮತ್ತು ಬಿ.ಜೆ.ಪಿ.ಯೊಡನೆ ರಾಜಿಯಾಗಲು ಬಯಸಿದವು. ವೈಎಸ್‌ಆರ್‌ಸಿಪಿ ಪಕ್ಷವೂ ಆಂಧ್ರ ಪ್ರದೇಶದಲ್ಲಿ ಇದೇ ರೀತಿಯ ನಿಲುವನ್ನು ತಳೆದಿದೆ.

2.93 ಬಿ.ಜೆ.ಪಿ.ಯೊಡನೆ ಕೈ ಜೋಡಿಸಿರದ ಇನ್ನಿತರ ಪ್ರಾದೇಶಿಕ ಪಕ್ಷಗಳಿವೆ. ಜನರ ಸಮಸ್ಯೆಗಳು, ಕೋಮುವಾದ ಮತ್ತು ಸರ್ವಾಧಿಕಾರಶಾಹಿ ದಾಳಿಗಳ ವಿರುದ್ಧ ಈ ಪಕ್ಷಗಳ ಜತೆ ಸೇರಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ನಾವು ಐಕ್ಯ ಹೋರಾಟಗಳನ್ನು ಬೆಳೆಸಲು ಪ್ರಯತ್ನಿಸಬೇಕು.

2.94 ಒಂದು ರಾಜ್ಯದಲ್ಲಿ ನಿರ್ದಿಷ್ಟ ಪ್ರಾದೇಶಿಕ ಪಕ್ಷಗಳ ಪಾತ್ರ ಮತ್ತು ರಾಜಕೀಯವನ್ನು ನಮ್ಮ ಕಾರ್ಯತಂತ್ರಾತ್ಮಕ ನಿಲುವನ್ನು ರೂಪಿಸುವಾಗ ಪರಿಗಣಿಸಬೇಕು. ಪಕ್ಷದ ಹಿತಾಸಕ್ತಿಯನ್ನು ಮುಂದೊಯ್ಯುವುದು ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವುದನ್ನು ಈ ರೀತಿಯ ನಡೆ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆದರೆ ಪ್ರಾದೇಶಿಕ ಪಕ್ಷಗಳೊಂದಿಗೆ ರಾಷ್ಟ್ರ ಮಟ್ಟದ ಮೈತ್ರಿಗೆ ಅವಕಾಶವಿಲ್ಲ.

**ಎಡ ರಾಜ್ಯಗಳು**

2.95 ಪಶ್ಚಿಮ ಬಂಗಾಳದಲ್ಲಾದ ಹಿನ್ನೆಡೆಯನ್ನು ಗಮನಿಸಿ ಪಕ್ಷ ಮತ್ತು ಎಡ ರಂಗದ ನೆಲೆಯನ್ನು ಪ.ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ಸಂರಕ್ಷಿಸಿಕೊಳ್ಳುವ ಪ್ರಾಮುಖ್ಯತೆಯನ್ನು 21ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಒತ್ತಿ ಹೇಳಿದೆ. ಆಗಿನಿಂದಲೂ ಬಿ.ಜೆ.ಪಿ.ಯು ಎಡ ಪಕ್ಷಗಳ ಆಳ್ವಿಕೆ ಇರುವ ಕೇರಳ ಮತ್ತು ತ್ರಿಪುರವನ್ನು ಗುರಿಯಾಗಿಸಿದೆ. ಪಕ್ಷವು ಈ ಕುರಿತು ವಿಚಕ್ಷಣೆಯೊಂದ ಇರಬೇಕು ಮತ್ತು ಈ ದಾಳಿಗಳನ್ನು ಹಿಮ್ಮೆಟ್ಟಿಸಬೇಕು.

**ಕೇರಳ**

2.96 ಮೇ 2016ರಲ್ಲಿ 140 ಸ್ಥಾನಗಳಲ್ಲಿ 91 ಸ್ಥಾನಗಳನ್ನು ಪಡೆದುಕೊಳ್ಳುವ ಮೂಲಕ ಸಿ.ಪಿ.ಐ(ಎಂ) ಮತ್ತು ಎಡ ಪ್ರಜಾಸತ್ತಾತ್ಮಕ ರಂಗವು(ಎಲ್‌ಡಿಎಫ್) ಕೇರಳ ವಿಧಾನಸಭೆ ಚುನಾವಣೆಗಳನ್ನು ಗೆದ್ದಿತು. ಸಂಯುಕ್ತ ಪ್ರಜಾಸತ್ತಾತ್ಮಕ ರಂಗವು ಪಡೆದ ಶೇ.38.8 ಮತಗಳಿಗೆ ಹೋಲಿಸಿದರೆ ಎಡ ಪ್ರಜಾಸತ್ತಾತ್ಮಕ ರಂಗವು ಶೇ.43.35 ಮತಗಳನ್ನು ಗಳಿಸಿತು. ಅದೇ ಸಂದರ್ಭದಲ್ಲಿ ಬಿ.ಜೆ.ಪಿ,. ಮತ್ತಿತರ ಮಿತ್ರ ಪಕ್ಷಗಳು ಶೇ.15 ಮತಗಳನ್ನು ಗಳಿಸಿದವು. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾದ ಬಹಳಷ್ಟು ಆಶ್ವಾಸನೆಗಳನ್ನು ಎಲ್‌ಡಿಎಫ್ ಸರ್ಕಾರವು ಈಡೇರಿಸಿದೆ. ಎಲ್ಲಾ ಕ್ಷೇತ್ರಗಳಲ್ಲಿ ಕನಿಷ್ಟ ಕೂಲಿಯನ್ನು ದಿನಂಪ್ರತಿ 600 ರೂ.ಗೆ ಹೆಚ್ಚಿಸಿವೆ. ವಿವಿಧ ವಿಭಾಗಗಳ ಜನರ ಪಿಂಚಣಿಯನ್ನು ಹೆಚ್ಚಿಸಿದೆ. ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯವನ್ನು ಮೇಲ್ದರ್ಜೆಗೆ ಏರಿಸುವ ಕ್ರಮಗಳನ್ನು ಕೈಗೊಂಡಿವೆ. ದೇವಸ್ಥಾನಗಳ ಅರ್ಚಕರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ/ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ನೀಡಲಾಗಿದೆ. ಸರ್ಕಾರ ನಾಲ್ಕು ಮಿಶನ್‌ಗಳನ್ನು ಆರಂಭಿಸಿದೆ. (i) ಲೈಫ್ (ಬಜಿಜ) – ಸೂರಿಲ್ಲದ ಎಲ್ಲರಿಗೂ ಮನೆಗಳನ್ನು ಕಟ್ಟಿಸುವುದು; (ii) ಆರ್ದ್ರಂ – ಸಂಪೂರ್ಣ ಆರೋಗ್ಯ ಯೋಜನೆ;(iii) ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸುವುದು ಮತ್ತು (iv) ಹರಿತ ಕೇರಳ – ಪೂರ್ಣ ನೈರ್ಮಲ್ಯಕ್ಕಾಗಿ, ಸಾವಯವ ಕೃಷಿಗಾಗಿ ಮತ್ತು ನದಿ, ಜಲಾನಯನಗಳ ಸಂರಕ್ಷಣೆಗಾಗಿ ಹಸಿರು ಯೋಜನೆ.

2.97 ಎಲ್‌ಡಿಎಫ್ ಅಧಿಕಾರಕ್ಕೆ ಬಂದಂದಿನದಿಂದಲೂ ಸಿ.ಪಿ.ಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ಆರ್.ಎಸ್.ಎಸ್. ತನ್ನ ದಾಳಿಯನ್ನು ತೀವ್ರಗೊಳಿಸಿದೆ. 13 ಜನ ಸಂಗಾತಿಗಳು ಹತ್ಯೆಯಾಗಿದ್ದು 200ಕ್ಕೂ ಹೆಚ್ಚು ಜನ ಪಕ್ಷದ ಸದಸ್ಯರು, ಹಿತೈಷಿಗಳು ಗಾಯಗೊಂಡಿದ್ದಾರೆ. 200 ಕ್ಕೂ ಹೆಚ್ಚು ಮನೆಗಳನ್ನು ಮತ್ತು ಸುಮಾರು 50 ಪಕ್ಷದ ಕಛೇರಿಗಳ ಮೇಲೆ ದಾಳಿ ಮಾಡಲಾಗಿದೆ, ಬೆಂಕಿ ಹಚ್ಚಲಾಗಿದೆ ಅಥವಾ ದುಂಡಾವರ್ತಿ ನಡೆಸಲಾಗಿದೆ.

2.98 ಆರ್.ಎಸ್.ಎಸ್.–ಬಿ.ಜೆ.ಪಿ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ಅವರನ್ನು ನಿರ್ಮೂಲನೆ ಮಾಡಲಾಗುತ್ತಿದೆ ಎಂದು ಸುಳ್ಳು ಪ್ರಚಾರವನ್ನು ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ ಅಖಿಲ ಭಾರತ ಮಟ್ಟದಲ್ಲಿ ಪ್ರಚಾರವನ್ನು ಮಾಡುತ್ತಿವೆ. . ಆರ್.ಎಸ್.ಎಸ್.–ಬಿ.ಜೆ.ಪಿ ಕೂಟದ ಈ ಸುಳ್ಳುಗಳನ್ನು ಎದುರಿಸಲು ಸಿ.ಪಿ.ಐ(ಎಂ) ಮತ್ತು ಎಡ ಪ್ರಜಾಸತ್ತಾತ್ಮಕ ರಂಗವು 'ಒಂದು ಚೈತನ್ಯಪೂರ್ಣ ಸಾಮೂಹಿಕ ಪ್ರಚಾರಾಂದೋಲನವನ್ನು ನಡೆಸಿದೆ. ಇಂತಹ ಒಂದು ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗವು ಎಲ್‌ಡಿಎಫ್ ಸರ್ಕಾರವನ್ನು ವಿರೋಧಿಸಲು ಬಿ.ಜೆ.ಪಿ.ಯೊಂದಿಗೆ ಸ್ಪರ್ಧೆಗಿಳಿದಿದೆ.

**ತ್ರಿಪುರ**

2.99 1993 ರಿಂದ ಸತತವಾಗಿ ಎಡ ರಂಗವು ಅಧಿಕಾರದಲ್ಲಿದೆ. ಸದ್ಯದ ಎಡರಂಗದ ಸರ್ಕಾರವು ಶಾಂತಿಯನ್ನು ಸ್ಥಾಪಿಸಿದ, ಬಂಡುಕೋರತನವನ್ನು ಕೊನೆಗೊಳಿಸಿದ ಆಧಾರದಲ್ಲಿ ಅಭಿವೃದ್ಧಿ ಕಾರ್ಯವನ್ನು ಮುಂದುವರೆಸಿದೆ. ಸಾಮಾಜಿಕ ಸೂಚ್ಯಾಂಕಗಳಲ್ಲಿ ತ್ರಿಪುರಾವು ಬೇರಯವರು ಈರ್ಷ್ಯೆ ಪಡಬಹುದಾದ ದಾಖಲೆಯನ್ನು ಹೊಂದಿದೆ. ತ್ರಿಪುರಾದ ಪ್ರಸಕ್ತ ಸಾಕ್ಷರತಾ ಪ್ರಮಾಣ ಶೇ.97. ಕಳೆದ ಒಂದು ದಶಕದಲ್ಲಿ ಇದು ಶಿಶು ಮರಣ ಪ್ರಮಾಣವನ್ನು ಸುಮಾರು ಶೇ.50ರಷ್ಟು ಕಡಿತಗೊಳಿಸಿದೆ. ಮನರೇಗ ಅಡಿಯಲ್ಲಿ ಕೆಲಸದ ದಿನಗಳು ಮತ್ತು ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಪಟ್ಟಾ ವಿತರಣೆಯಲ್ಲಿ ದೇಶದಲ್ಲಿಯೇ ಅತ್ಯುತ್ತಮ ದಾಖಲೆಯನ್ನು ಹೊಂದಿದೆ. ಸರ್ಕಾರದ ಒಂದು ಮಹತ್ವಪೂರ್ಣ ಸಾಧನೆಯೆಂದರೆ ಬಡತನದ ರೇಖೆಗಿಂತ ಕೆಳಗಿರುವ ಜನರ ಪ್ರಮಾಣವನ್ನು ಶೇ.62ದಷ್ಟು ಕೆಳಗಿಳಿಸಿರುವುದು. 6ನೇ ಷೆಡ್ಯೂಲ್ ಅಡಿಯಲ್ಲಿ ರಚಿಸಿದ ಸ್ವಾಯತ್ತ ಜಿಲ್ಲಾ ಮಂಡಳಿಯ ಅಡಿಯಲ್ಲಿ ಬುಡಕಟ್ಟು ಜನಗಳ ಹಕ್ಕುಗಳ ಆಶ್ವಾಸನೆ ಒದಗಿಸಲಾಗಿದೆ. ಮತ್ತು ಬುಡಕಟ್ಟು ಉಪಯೋಜನೆಯನ್ನು ಒಟ್ಟು ಯೋಜನಾ ವೆಚ್ಚದ ಶೇ.31ರಷ್ಟು ನೀಡಿ ಖಾತ್ರಿಗೊಳಿಸಲಾಗಿದೆ.

2.100 ಟಿ.ಎಂ.ಸಿ. ಮತ್ತು ಕಾಂಗ್ರೆಸ್‌ನಿಂದ ಪಕ್ಷಾಂತರಗಳಾದ ನಂತರ ಬಿ.ಜೆ.ಪಿ.ಯು ಪ್ರಮುಖ ವಿರೋಧ ಪಕ್ಷವಾಗಿದೆ. ಆದಿವಾಸಿಗಳ ಮತ್ತು ಆದಿವಾಸಿಗಳಲ್ಲದ ಜನರ ಮಧ್ಯೆ ಪ್ರಕ್ಷುಬ್ಧತೆಯನ್ನು ತಂದೊಡ್ಡುವ ಪ್ರಯತ್ನವನ್ನು ಮಾಡುತ್ತಿದೆ. ಹಿಂಸಾತ್ಮಕ ಪ್ರತಿಭಟನೆಯನ್ನು ನಡೆಸಲು ಐಪಿಎಫ್‌ಟಿಯನ್ನು ಪ್ರಚೋದಿಸುತ್ತಲೇ ಶಾಂತಿ ಮತ್ತು ಸ್ಥಿರತೆಯನ್ನು ಕದಡಲು ಸಿ.ಪಿ.ಐ(ಎಂ) ಮತ್ತು ಅದರ ಬೆಂಬಲಿಗರ ಮೇಲೆ ಬಿ.ಜೆ.ಪಿ.–ಆರ್.ಎಸ್.ಎಸ್. ದಾಳಿಗಳನ್ನು ಮಾಡುತ್ತಿವೆ. ಇವೆಲ್ಲವನ್ನೂ ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮಾಡಲಾಗುತ್ತಿದೆ.

2.101 ಕೋಮುವಾದಿ ಶಕ್ತಿಗಳ ಈ ಪೈಶಾಚಿಕ ತಂತ್ರಗಳನ್ನು ಬಹಿರಂಗಗೊಳಿಸಲು ಸಿ.ಪಿ.ಐ(ಎಂ) ಮತ್ತು ಎಡ ರಂಗವು ಅವಿರತವಾಗಿ ಪ್ರಚಾರ–ಪ್ರಕ್ಷೋಭೆಗಳನ್ನು ನಡೆಸುತ್ತಿವೆ.

**ಪಶ್ಚಿಮ ಬಂಗಾಳ**

2.102 ಟಿ.ಎಂ.ಸಿ. ಆಡಳಿತವು ಸಿ.ಪಿ.ಐ(ಎಂ) ಮತ್ತು ಎಡರಂಗದ ವಿರುದ್ಧ ಭಯೋತ್ಪಾದಕ ಮತ್ತು ಪ್ರಜಾಪ್ರಭುತ್ವ–ವಿರೋಧಿ ಚಟುವಟಿಕೆಗಳ ಮೂಲಕ ಮುಂದುವರೆಸುತ್ತಿದೆ. 2016ರ ವಿಧಾನಸಭಾ ಚುನಾವಣೆಗಳ ನಂತರ ಟಿ.ಎಂ.ಸಿ.ಯು ಪಕ್ಷದ ಮೇಲೆ ವ್ಯಾಪಕ ದಾಳಿಗಳನ್ನು ನಡೆಸಿದೆ. ವಿಶೇಷವಾಗಿ ಪಕ್ಷವು ತನ್ನ ಜನಬೆಂಬಲವನ್ನು ಉಳಿಸಿಕೊಂಡಿರುವ ಪ್ರದೇಶಗಳಲ್ಲಿ ಈ ದಾಳಿಗಳು ಸಂಭವಿಸಿವೆ. ಜೂನ್ 2016ರಿಂದ 31 ಸಿ.ಪಿ.ಐ(ಎಂ) ಸದಸ್ಯರು ಮತ್ತು ಬೆಂಬಲಿಗರು ಟಿ.ಎಂ.ಸಿ. ಗೂಂಡಾಗಳಿಂದ ಹತ್ಯೆಗೀಡಾಗಿದ್ದಾರೆ. ಅವರ ಇನ್ನೊಂದು ಕ್ರಮವೆಂದರೆ ಸಿ.ಪಿ.ಐ(ಎಂ) ಬಹುಮತವಿರುವ ಪಂಚಾಯ್ತಿ ಸಮಿತಿಗಳನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು. ಬೆದರಿಕೆ ಮತ್ತು ದಾಳಿಗಳಿಂದಾಗಿ ಸಾವಿರಾರು ಜನ ತಮ್ಮ ಮನೆಗಳನ್ನು ತ್ಯಜಿಸಬೇಕಾಯಿತು.

2.103 ಪಕ್ಷವು ಜನರೊಡನೆ ತನ್ನ ಸಂಪರ್ಕವನ್ನು ಪುನರುಜ್ಜೀವನಗೊಳಿಸಲು ಒಂದು ಯೋಜನೆಯನ್ನು ರೂಪಿಸಿತು. ಹಲವಾರು ಜಾಥಾಗಳು ಮತ್ತು ಪಾದಯಾತ್ರೆಗಳನ್ನು ಪಕ್ಷ, ಎಡರಂಗ ಮತ್ತು ಸಾಮೂಹಿಕ ಸಂಘಟನೆಗಳು ನಡೆಸಿವೆ.. ರೈತ ಮತ್ತು ಕೃಷಿ ಕೂಲಿಕಾರ ಸಂಘಟನೆಗಳಿಂದ "ನಬನ್ನಾ ನಡೆ"ಯನ್ನು ಹಮ್ಮಿಕೊಳ್ಳಲಾಗಿತ್ತು. ತೀರ ಇತ್ತೀಚಿನ ಪ್ರಚಾರವೆಂದರೆ ಬಂಗಾಳ ಸಾಮೂಹಿಕ ಸಂಘಟನೆಗಳ ವೇದಿಕೆ(ಬಿಪಿಎಂಒ)ಯ ಮೂಲಕ ಪ್ರತಿ ಬ್ಲಾಕ್ ಮತ್ತು ಬೂತ್ ಮಟ್ಟದಲ್ಲಿ ಪಾದಯಾತ್ರೆ ಮತ್ತು ಜಾಥಾಗಳನ್ನು ಹಮ್ಮಿಕೊಂಡಿದ್ದು.

2.104 ಟಿ.ಎಮ್.ಸಿ.ಯು ಬಿ.ಜೆ.ಪಿ.ಯನ್ನು ವಿರೋಧಿಸುವುದಾಗಿ ಹೇಳುತ್ತಲೇ ಕೋಮು ಧ್ರುವೀಕರಣಕ್ಕೆ ಅವಕಾಶ ಮಾಡಿಕೊಡುವ ರೀತಿಯ ನಿಲುವುಗಳನ್ನು ' ತಳೆಯುತ್ತಿದೆ. ಈ ಮೂಲಕ ಎಡ ಪಕ್ಷಗಳನ್ನು ಮೂಲೆಗೊತ್ತುವ ಪ್ರಯತ್ನ ಮಾಡುತ್ತಿವೆ. ಪಕ್ಷವು ಟಿ.ಎಂ.ಸಿ.ಯ ಪ್ರಜಾಪ್ರಭುತ್ವ ವಿರೋಧಿ ಆಳ್ವಿಕೆಯನ್ನು ಮತ್ತು ಬಿ.ಜೆ.ಪಿ.ಯ ಕೋಮುವಾದಿ ಕುತಂತ್ರಗಳು ಎರಡನ್ನೂ ಎದುರಿಸಿ ಹೋರಾಡುತ್ತಿದೆ. ಇಂತಹ ಒಂದು ಸಂಕೀರ್ಣ ಪರಿಸ್ಥಿತಿಯಲ್ಲಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಪಕ್ಷವು ಪಕ್ಷದ ಸಂಘಟನೆಯನ್ನು ಸುವ್ಯವಸ್ಥಿತಗೊಳಿಸಲು ಮತ್ತು ಸದಸ್ಯರ ಗುಣಮಟ್ಟವನ್ನು ಸುಧಾರಿಸಲು ಕ್ರಮಗಳನ್ನು ಕೈಗೊಂಡಿದೆ.

**ಪಕ್ಷದ ಸ್ವತಂತ್ರ ಬಲ:**

2.105 ಪಕ್ಷವನ್ನು ಮುಂದೆ ಕೊಂಡೊಯ್ಯಲು ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ರಂಗವನ್ನು ಕಟ್ಟಲು ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸುವುದೇ ಸೂತ್ರವಾಗಿದೆ. ಪಶ್ಚಿಮ ಬಂಗಾಳದಲ್ಲಾದ ಹಿನ್ನಡೆ ಮತ್ತು ಕೇರಳ, ತ್ರಿಪುರ ಹೊರತುಪಡಿಸಿ ಇನ್ನಿತರ ರಾಜ್ಯಗಳಲ್ಲಿ ಬೆಳವಣಿಗೆಯ ಕೊರತೆಯಿಂದಾಗಿ ಇದು ಇನ್ನಷ್ಟು ಮಹತ್ವದ್ದಾಗಿದೆ. ಪಕ್ಷದ ನೆಲೆ ಹಾಗೂ ಪ್ರಭಾವವನ್ನು ವಿಸ್ತಾರಗೊಳಿಸುವ ಮೂಲಕ ಮಾತ್ರವೇ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯದತ್ತ ಹೋಗಲು ಸಾಧ್ಯ. ಇದಕ್ಕೆ ಜನರ ಜೊತೆ ಜೀವಂತ ಸಂಪರ್ಕಗಳನ್ನು ಸಾಧಿಸಲು ಮತ್ತು ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ಬೆಳೆಸಲು ಹಾಗೂ ಅವನ್ನು ರಾಜಕೀಯ ಪ್ರಭಾವವಾಗಿ ಕ್ರೋಡೀಕರಿಸಲು ಸರ್ವತೋಮುಖ ಮತ್ತು ಸತತ ಪ್ರಯತ್ನಗಳ ಬೇಕಾಗಿದೆ.

2.106 ಆಳುವ ವರ್ಗಗಳ ರಾಜಕೀಯ ಮತ್ತು ಸಿದ್ಧಾಂತವನ್ನು ಎದುರಿಸಲು ಪಕ್ಷವು ರಾಜಕೀಯ ಮತ್ತು ಸೈದ್ಧಾಂತಿಕ ಪ್ರಚಾರವನ್ನು ಚೈತನ್ಯಪೂರ್ಣವಾಗಿ ನಡೆಸಬೇಕು. ಪಕ್ಷವು ಮಧ್ಯಪ್ರವೇಶಿಸಿ ಸಾಮಾಜಿಕ ಪ್ರಶ್ನೆಗಳ ಮೇಲೆ ಹೋರಾಟಗಳನ್ನು ಸಂಘಟಿಸಬೇಕು. ಸಾಮೂಹಿಕ ಸಂಘಟನೆಗಳು ಸಾಕಷ್ಟು ವ್ಯಾಪಕವಾದ ಜನ–ವಿಭಾಗಗಳನ್ನು ಅಣಿನೆರೆಸಿ ಅವರನ್ನು ನಿರಂತರ ಚಳುವಳಿಗಳು ಹಾಗೂ ವಿಶಾಲ ನೆಲೆಯ ಹೋರಾಟಗಳಿಗೆ ಸಂಘಟಿಸುವ ವೇದಿಕೆಗಳಾಗಬೇಕು.

**ಎಡ ಐಕ್ಯತೆ:**

2.107 ಎಡ ಪಕ್ಷಗಳ ಐಕ್ಯ ಕಾರ್ಯಾಚರಣೆಗಳು ಪ.ಬಂಗಾಳ, ಕೇರಳ, ತ್ರಿಪುರಗಳಲ್ಲದೇ ಹಲವು ರಾಜ್ಯಗಳಲ್ಲಿ, ಅದರಲ್ಲೂ ತೆಲಂಗಾಣ, ಆಂಧ್ರಪ್ರದೇಶ, ಬಿಹಾರ, ತಮಿಳುನಾಡು, ಅಸ್ಸಾಂ ಮತ್ತು ಪಂಜಾಬ್ ರಾಜ್ಯಗಳಲ್ಲಿ ನಡೆಯುತ್ತಿವೆ. ಆದರೆ ರಾಷ್ಟ್ರಮಟ್ಟದಲ್ಲಿ ಕೆಲ ಎಡ ಪಕ್ಷಗಳು ಭಿನ್ನ ರಾಜಕೀಯ ನಿಲುವುಗಳನ್ನು ಹೊಂದಿರುವುದರಿಂದ ಐಕ್ಯ ಚಟುವಟಿಕೆಗಳನ್ನು ಇನ್ನಷ್ಟು ಗಟ್ಟಿಗೊಳಿಸುವಲ್ಲಿ ಮತ್ತು 'ಡೆಸುವಲ್ಲಿ ಕೆಲ ತೊಂದರೆಗಳಿದ್ದವು. ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಘಟಕಗಳು ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯು.ಡಿ.ಎಫ್.)ದಲ್ಲಿವೆ. ಸಿ.ಪಿ.ಐ. ಪಕ್ಷವು ಕಾಂಗ್ರೆಸ್ಸೂ ಒಳಗೊಂಡಂತೆ ಎಲ್ಲಾ ಜಾತ್ಯಾತೀತ ಪಕ್ಷಗಳೊಡನೆ ಒಟ್ಟಾಗಬೇಕು ಎಂಬ ರಾಜಕೀಯ ನಿಲುವನ್ನು ತಳೆದಿದೆ.

2.108 ಒಂದು ಅಂತರದ ನಂತರ, ಐಕ್ಯ ಎಡ ಕಾರ್ಯಾಚರಣೆಗಳಿಗೆ ಕರೆಯನ್ನು ಅನಾಣ್ಯೀಕರಣದ ಮೊದಲ ವಾರ್ಷಿಕ ಆಚರಣೆಗೆ ಮತ್ತು ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ 25 ನೇ ವಾರ್ಷಿಕದ ಸಂದರ್ಭದಲ್ಲಿ 2017ರಲ್ಲಿ ನೀಡಲಾಯಿತು. ಸಾಮೂಹಿಕ ಸಂಘಟನೆಗಳು ಮತ್ತು ಸಾಮಾಜಿಕ ಚಳುವಳಿಗಳ ಜಂಟಿ ವೇದಿಕೆಯ ಕುರಿತು ಕೆಲ ಐಕ್ಯ

ತಿಳುವಳಿಕೆಗೆ ಬರಲಾಯಿತು. ಒಂದು ಸರ್ವಸಾಮಾನ್ಯ ರಾಜಕೀಯ ಕಣ್ಣೋಟದ ಆಧಾರದಲ್ಲಿ ಎಡ ಐಕ್ಯತೆಗಾಗಿ ಒಂದು ನೀತಿಬದ್ಧ ಹೋರಾಟವನ್ನು ನಾವು ನಡೆಸಬೇಕಿದೆ.

**ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗ**

2.109 21ನೇ ಮಹಾಧಿವೇಶನವು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಪ್ರಾಥಮಿಕತೆಯನ್ನು ಮರುಸ್ಥಾಪಿಸಲು ಕರೆ ನೀಡಿತ್ತು. ಈ ರಂಗ ಮಾತ್ರ ಬಂಡವಾಳಶಾಹಿ ಭೂಮಾಲೀಕ ನೀತಿಗಳಿಗೆ ನೈಜ ಪರ್ಯಾಯವಾಗಿದೆ. ಈ ರಂಗದ ಬಾಹ್ಯ ಸ್ವರೂಪವನ್ನು ರಾಜಕೀಯ ಗೊತ್ತುವಳಿಯು ಸ್ಪಷ್ಟವಾಗಿ ಹೇಳಿತ್ತು. "ಸದ್ಯ, ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಕೇಂದ್ರಕ್ಕೆ ಸೆಳೆಯಬಹುದಾದ ಶಕ್ತಿಗಳೆಂದರೆ ಎಡ ಪಕ್ಷಗಳು ಮತ್ತು ಅವುಗಳ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು; ಎಡ ಗುಂಪುಗಳು ಮತ್ತು ಬುದ್ಧಿಜೀವಿಗಳು; ವಿವಿಧ ಪಕ್ಷಗಳಲ್ಲಿ ಚದುರಿಹೋದ ಸಮಾಜವಾದಿಗಳು ಮತ್ತು ಜಾತ್ಯಾತೀತ ಬಂಡವಾಳಶಾಹಿ ಪಕ್ಷಗಳಲ್ಲಿರುವ ಪ್ರಜಾಸತ್ತಾತ್ಮಕ ವಿಭಾಗಗಳು; ಆದಿವಾಸಿಗಳ, ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ಪ್ರಜಾಸತ್ತಾತ್ಮಕ ಸಂಘಟನೆಗಳು ಮತ್ತು ಶೋಷಿತ ಸಮುದಾಯದ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಳ್ಳುವ ಚಳುವಳಿಗಳು, ವಿಶಿಷ್ಟವಾದ ಮತ್ತು ಬಂಡವಾಳಶಾಹಿ–ಭೂಮಾಲೀಕರ ಪಕ್ಷಗಳ ನೀತಿಗಳನ್ನು ವಿರೋಧಿಸುವ ಒಂದು ಕಾರ್ಯಕ್ರಮದ ಆಧಾರದಲ್ಲಿ ಈ ಶಕ್ತಿಗಳನ್ನೂ ಒಂದು ಜಂಟಿ ವೇದಿಕೆಗೆ ತರುವ ಮೂಲಕ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ."

2.110 ಈ ದಿಕ್ಕಿನತ್ತ ಒಂದು ಹೆಜ್ಜೆಯಾಗಿ ಹಲವಾರು ವರ್ಗ, ಸಾಮೂಹಿಕ ಸಂಘಟನೆಗಳು ಮತ್ತು ಸಾಮಾಜಿಕ ಚಳುವಳಿಗಳನ್ನು ಒಳಗೊಂಡ "ಜನ್ ಏಕ್‌ತಾ, ಜನ್ ಅಧಿಕಾರ್ ಆಂದೋಲನ್" ಎನ್ನುವ ವೇದಿಕೆಯನ್ನು ರಚಿಸಲಾಯಿತು. ಇದನ್ನು ಒಂದು ಬಲಿಷ್ಠ ಸಮಾನ ವೇದಿಕೆಯಾಗಿ ರಾಷ್ಟ್ರಮಟ್ಟದ ಹೋರಾಟಗಳನ್ನು ಸಂಘಟಿಸುವ ಮತ್ತು ಎಡ, ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟುವ ನಿಟ್ಟಿನಲ್ಲಿ ಮುಂದೆ ಕೊಂಡೊಯ್ಯುವಲ್ಲಿ ನಾವು ಪ್ರಯತ್ನಶೀಲರಾಗಬೇಕಿದೆ.

2.111 ಎಲ್ಲಾ ರಾಜ್ಯಗಳಲ್ಲೂ ಆ ರಾಜ್ಯಕ್ಕೆ ಪ್ರಸ್ತುತವಾದ ಕಾರ್ಯಕ್ರಮದ ಆಧಾರದಲ್ಲಿ ಪಕ್ಷಗಳು, ಸಾಮೂಹಿಕ ಸಂಘಟನೆಗಳು, ಪ್ರಜಾಸತ್ತಾತ್ಮಕ ಸಂಘಟನೆಗಳು, ಸಾಮಾಜಿಕ ಚಳುವಳಿಗಳು ಮತ್ತು ಬುದ್ಧಿಜೀವಿಗಳನ್ನು ಒಳಗೊಂಡ ಎಡ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದೆಡೆ ತರುವ ಪ್ರಯತ್ನವಾಗಬೇಕು. ಇದೇ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಸಂಯುಕ್ತ ವೇದಿಕೆಯ ಮೂಲಕ ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಬಿಂಬಿಸುವಂತಾಗಬೇಕು.

2.112 ಸುಮಾರು ಕಾಲದಿಂದ ಇದನ್ನೊಂದು ಪ್ರಚಾರದ ಘೋಷಣೆಯಂತೆ ಬಳಸಲಾಗುತ್ತಿದ್ದರೂ, ಮುಂದಿನ ದಿನಗಳಲ್ಲಿ ಈ ಗುರಿ ಸಾಧನೆಯ ಉದ್ದೇಶದ ಕುರಿತು ಇಡೀ ಪಕ್ಷಕ್ಕೆ ಮನವರಿಕೆ ಮಾಡಿಕೊಡಬೇಕು.

**ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮ : ಒಂದು ಪರ್ಯಾಯ**

2.113 ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಕ್ರಮವು ನವ ಉದಾರವಾದ ಮತ್ತು ಬೂರ್ಜ್ವಾ–ಭೂಮಾಲೀಕ ನೀತಿಗಳಿಗೆ ಒಂದು ಪರ್ಯಾಯವನ್ನು ಒದಗಿಸುತ್ತದೆ. ದುಡಿಯುವ ವರ್ಗ, ರೈತಾಪಿ ಜನ, ಗ್ರಾಮೀಣ ಉದ್ಯೋಗ ಮತ್ತು ದುಡಿಯುವ ವರ್ಗದ ಇನ್ನಿತರ ವಿಭಾಗಗಳ ಮೂಲ ಬೇಡಿಕೆಗಳನ್ನು ಇದು ಒಳಗೊಳ್ಳುತ್ತದೆ. ಈ ವಿಶಾಲವಾದ ಅಂಶಗಳು ಮತ್ತು ಬೇಡಿಕೆಗಳನ್ನು ಗಟ್ಟಿಗೊಳಿಸುವ ಮೂಲಕ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಬಿಂಬಿಸಲು ಮತ್ತು ವರ್ಗ ಸಂಘರ್ಷ ಹಾಗೂ ಸಾಮೂಹಿಕ ಚಳುವಳಿಗಳನ್ನು ಕಟ್ಟಲು ಬಳಸಬಹುದು.

2.114 ಕಾರ್ಯಕ್ರಮದ ಸ್ಥೂಲನಕ್ಷೆ ಈ ಕೆಳಕಂಡಂತಿದೆ:

**1. ಧರ್ಮ ನಿರಪೇಕ್ಷತೆ :** ಧರ್ಮ ಮತ್ತು ಪ್ರಭುತ್ವವನ್ನು ಪ್ರತ್ಯೇಕಿಸುವ ಮೂಲ ತತ್ವವಾಗಿರುವ ಧರ್ಮ ನಿರಪೇಕ್ಷತೆಯನ್ನು ಸಂವಿಧಾನದಲ್ಲಿ ಅಳವಡಿಕೆ ಮಾಡುವುದು; ಧಾರ್ಮಿಕ ಕೋಮುವಾದ ಮತ್ತು ಜಾತಿ ದುರಭಿಮಾನದ ಆಧಾರದಲ್ಲಿ ಆಗುವ ದ್ವೇಷ ಪ್ರಚಾರವನ್ನು ಕೊನೆಗೊಳಿಸಲು ಕಾನೂನುಗಳ ಜಾರಿ; ಪ್ರಭುತ್ವದ ಸಂಸ್ಥೆಗಳಲ್ಲಿ ಇರುವ ಎಲ್ಲಾ ಆರ್.ಎಸ್.ಎಸ್. ಸಿಬ್ಬಂದಿಗಳನ್ನು ತೆಗೆದುಹಾಕುವುದು.

**2. ಒಕ್ಕೂಟ ವ್ಯವಸ್ಥೆ :** ಕೇಂದ್ರ–ರಾಜ್ಯ ಸಂಬಂಧಗಳನ್ನು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವಂತೆ ಮರು ಸಂರಚಿಸುವುದು. ಇದಕ್ಕಾಗಿ ಸಮವರ್ತಿ(ಕಂಕರೆಂಟ್) ಪಟ್ಟಿಯನ್ನು ಪುನರ್ವಿಮರ್ಶಿಸುವುದು; ಸೂಕ್ತ ಅಂಶಗಳ ಮೂಲಕ ವಿಧಿ 356 ಅನ್ನು ಬದಲಿಸುವುದು; ರಾಜ್ಯಪಾಲರುಗಳ ಪಾತ್ರವನ್ನು ಪುನರ್ ರಚಿಸುವುದು; ವಿಧಿ 370 ಅನ್ನು ಪುನ: ಜಾರಿಗೆ ತರುವ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ಗರಿಷ್ಠ ಸ್ವಾಯತ್ತತೆ ನೀಡುವುದು.

**3. ಪ್ರಜಾಪ್ರಭುತ್ವ :** ನಾಗರಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸುವುದು; ಶಸ್ತ್ರಸಜ್ಜಿತ ಪಡೆಗಳ ವಿಶೇಷ ಅಧಿಕಾರ ಕಾಯಿದೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ ನಿಗ್ರಹ ಕಾಯಿದೆಗಳನ್ನು ಹಿಂಪಡೆಯುವುದು; ಭಾರತೀಯ ದಂಡ ಸಂಹಿತೆಯಿಂದ ರಾಜದ್ರೋಹದ ಅಂಶವನ್ನು ತೆಗೆದುಹಾಕುವುದು; ಮರಣದಂಡನೆಯನ್ನು ರದ್ದುಗೊಳಿಸುವುದು; ಹಣದ

ಶಕ್ತಿಯನ್ನು ನಿಯಂತ್ರಿಸಲು ಚುನಾವಣಾ ಸುಧಾರಣೆಗಳು. ಪಕ್ಷಾಧಾರಿತ ಆಂಶಿಕ ಪಟ್ಟಿ ವ್ಯವಸ್ಥೆಯೊಡನೆ ಪ್ರಮಾಣಾತ್ಮಕ ಪ್ರತಿನಿಧಿತ್ವ ಜಾರಿ.

**4. ಆರ್ಥಿಕ ನೀತಿ ಮತ್ತು ಅಭಿವೃದ್ಧಿ :**

(i) ಸಮತೋಲಿತ ಮತ್ತು ಸ್ವಾವಲಂಬಿತ ಅಭಿವೃದ್ಧಿಗಾಗಿ ಯೋಜನಾ ವ್ಯವಸ್ಥೆ ಪುನ: ಜಾರಿ; ಉತ್ಪಾದಕ ಶಕ್ತಿಗಳನ್ನು ಹೆಚ್ಚಿಸುವುದು; ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳಲ್ಲಿ ಇಳಿತ.

(ii) ಮೂಲ ಭೂ ಸುಧಾರಣೆಗಳನ್ನು ಜಾರಿಗೊಳಿಸುವುದು ಮತ್ತು ಕೃಷಿ ಸಂಬಂಧಗಳ ಪ್ರಜಾಸತ್ತಾತ್ಮಕ ಬದಲಾವಣೆಯು ಆಗುವಂತೆ ನೋಡಬೇಕು; ಸಹಕಾರೀ ಕೃಷಿ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ಬೆಳೆಸುವುದು.

(iii) ಖಾಸಗೀಕರಣಗೊಂಡಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಮರು–ರಾಷ್ಟ್ರೀಕರಣ; ವಿದ್ಯುತ್, ನೀರು ಸರಬರಾಜು ಮತ್ತು ಸಾರ್ವಜನಿಕ ಸಾರಿಗೆ ಮುಂತಾದ ಮೂಲ ಸೇವೆಗಳ ಖಾಸಗೀಕರಣ ಪ್ರಕ್ರಿಯೆಯನ್ನು ಹಿಂಪಡೆಯುವುದು; ಏಕಸ್ವಾಮ್ಯವನ್ನು ನಿಯಂತ್ರಿಸುವುದು; ಸಂಪತ್ತಿನ ಮರು ಹಂಚಿಕೆಗಾಗಿ ವಿತ್ತೀಯ ಮತ್ತು ತೆರಿಗೆ ಕ್ರಮಗಳನ್ನು ಕೈಗೊಳ್ಳುವುದು; ಕಪ್ಪು ಹಣ ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳುವುದು; ಹಣಕಾಸು ಹರಿವಿನ ನಿಯಂತ್ರಣ.

**5. ದುಡಿಯುವ ಜನತೆಯ ಹಕ್ಕುಗಳು:**

(i) **ದುಡಿಯುವ ವರ್ಗ :** ಪ್ರತಿ ತಿಂಗಳಿಗೆ ರೂ.18,000ಕ್ಕೆ ಕಡಿಮೆಯಾಗದಂತೆ ಕಾರ್ಮಿಕರಿಗೆ ಕಾನೂನಿನ ಪ್ರಕಾರ ಕನಿಷ್ಟ ವೇತನ ದೊರೆಯುವುದು ಮತ್ತು ಗ್ರಾಹಕ ಬೆಲೆ ಸೂಚ್ಯಾಂಕಕ್ಕೆ ವೇತನ ಜೋಡಣೆಯಾಗಬೇಕು; ರಹಸ್ಯ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವುದು; ಸಾಮಾಜಿಕ ಸುರಕ್ಷೆಯ ಗ್ಯಾರೆಂಟಿ ಮತ್ತು ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ. ಗುತ್ತಿಗೆ ಪದ್ಧತಿ ಕೊನೆಗೊಳ್ಳಬೇಕು.

(ii) **ರೈತಾಪಿ ಸಮೂಹ** : ಕೃಷಿ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚ ಮತ್ತು ಅದರ ಶೇ.50 ಭಾಗವನ್ನು ಕನಿಷ್ಟ ಬೆಂಬಲ ಬೆಲೆಯಾಗಿ ನೀಡುವುದು; ಸಣ್ಣ ಮತ್ತು ಮಧ್ಯಮ ರೈತರ ಸಾಲ ಪರಿಹಾರಕ್ಕೆ ಕ್ರಮಗಳು; ಕೇಂದ್ರ ಸರ್ಕಾರದಿಂದ ಸಣ್ಣ ಮತ್ತು ಮಧ್ಯಮ ರೈತರ ಸಂಪೂರ್ಣ ಸಾಲ ಮನ್ನಾ; ಕೃಷಿಯೇತರ ಚಟುವಟಿಕೆಗಳಿಗಾಗಿ ಕೃಷಿ ಭೂಮಿಯನ್ನು ಬಲವಂತವಾಗಿ ಮತ್ತು ಅನಿಯಂತ್ರಿತವಾಗಿ ಕೊಂಡುಕೊಳ್ಳುವುದರ ವಿರುದ್ಧ ರಕ್ಷಣೆ; ಕಾರ್ಪೋರೇಟ್ ಕೃಷಿ ಮತ್ತು ಖಾಸಗೀಕರಣಕ್ಕೆ ನಿಷೇಧ.

(iii)**ಕೃಷಿ ಕೂಲಿಕಾರರು :** ಕೃಷಿ ಕೂಲಿಕಾರರಿಗಾಗಿ ವೇತನ ಮತ್ತು ಸಾಮಾಜಿಕ ಸುರಕ್ಷೆ ನೀಡಲು ಕೇಂದ್ರ ಮಸೂದೆ; ಗ್ರಾಮೀಣ ಕೆಲಸಗಾರರಿಗೆ ವಸತಿ ನಿವೇಶನ ಮತ್ತು ವಸತಿ ಯೋಜನೆಗಳು; ಮನ್‌ರೇಗಾ ಯೋಜನೆಯ ವಿಸ್ತರಣೆ ಮತ್ತು ಕಟ್ಟುನಿಟ್ಟು ಜಾರಿ.

6. **ಜನರ ಕಲ್ಯಾಣ :** ಆಹಾರ ಪದಾರ್ಥಗಳ ಜೊತೆಯಲ್ಲಿ ಅಗತ್ಯ ವಸ್ತುಗಳು ದೊರೆಯುವಂತೆ ಸಾರ್ವತ್ರಿಕ ಸಾರ್ವಜನಿಕ ಪಡಿತರ ವ್ಯವಸ್ಥೆ; ಸಾರ್ವತ್ರಿಕ ಪಿಂಚಣಿ ಸೌಲಭ್ಯ, ಹಿರಿಯ ನಾಗರಿಕರಿಗೆ ಸಾಮಾಜಿಕ ಸುರಕ್ಷೆ ಮತ್ತು ಆರೋಗ್ಯ ರಕ್ಷಣೆ. ಸುರಕ್ಷವಾದ ಕುಡಿಯುವ ನೀರು ಮತ್ತು ನೈರ್ಮಲ್ಯ. ನಗರ ಪ್ರದೇಶದ ಬಡವರಿಗೆ ವಸತಿ. ಕಡಿಮೆ ವೆಚ್ಚದಲ್ಲಿ ಸಾರ್ವಜನಿಕ ಸಾರಿಗೆ ವಿಸ್ತರಣೆ. ಕೆಲಸ, ಶಿಕ್ಷಣ ಮತ್ತು ಆರೋಗ್ಯ ಹಕ್ಕುಗಳು.

7. **ಲಿಂಗ ಸಮಾನತೆ:** ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗ ಮೀಸಲಾತಿ ಅವಕಾಶ; ಮಹಿಳೆಯರು ಮತ್ತು ಮಕ್ಕಳ ಮೇಲಿನ ಎಲ್ಲ ವಿಧದ ಹಿಂಸೆಗಳ ನಿಯಂತ್ರಣ, ತಡೆಯುವುದು ಮತ್ತು ಪೀಡಾಕಾರರನ್ನು ಶಿಕ್ಷಿಸುವುದು; ಸಮಾನ ಕೆಲಸಕ್ಕೆ ಸಮಾನ ವೇತನ; **ಮಧ್ಯಲಿಂಗೀಯರಿಗೆ** ಹಕ್ಕುಗಳು.

**8. ಸಾಮಾಜಿಕ ನ್ಯಾಯ ಹಾಗೂ ನಾಗರಿಕರ ಹಕ್ಕುಗಳು :**

(i) **ದಲಿತರು :** ಜಾತಿ ವ್ಯವಸ್ಥೆ ಮತ್ತು ಎಲ್ಲಾ ವಿಧದ ಜಾತಿ ದಬ್ಬಾಳಿಕೆಗಳ ರದ್ದತಿ; ಅಸ್ಪೃಶ್ಯತಾ ಆಚರಣೆ ಮತ್ತು ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯಗಳನ್ನು ಎಸಗುವವರಿಗೆ ಕಠಿಣ ಶಿಕ್ಷೆ; ಮೀಸಲು ಹುದ್ದೆಗಳಿಗೆ, ಅಧಿಕಾರಗಳಿಗೆ ಮತ್ತು ಬಡ್ತಿಗಳಲ್ಲಿ ಬ್ಯಾಕ್‌ಲಾಗ್ ಭರ್ತಿ ಮಾಡುವುದು; ಖಾಸಗಿ ರಂಗದಲ್ಲಿ ಮೀಸಲಾತಿ.

(ii) **ಆದಿವಾಸಿಗಳು :** ಆದಿವಾಸಿಗಳ ಭೂಮಿ ಹಕ್ಕನ್ನು ಕಾಪಾಡುವುದು ಮತ್ತು ಅವರಿಂದ ಬಿಡಿಸಿಕೊಂಡ ಭೂಮಿಯನ್ನು ಪುನ: ನೀಡುವುದು; ಅರಣ್ಯ ಹಕ್ಕುಗಳ ಕಾಯಿದೆಯ ಸಂಪೂರ್ಣ ಜಾರಿ; ಸಣ್ಣ ಅರಣ್ಯ ಉತ್ಪಾದನೆಗಳಿಗೆ ಕನಿಷ್ಟ ಬೆಂಬಲ ಬೆಲೆ; ಆದಿವಾಸಿ ಭಾಷೆ ಹಾಗೂ ಸಂಸ್ಕೃತಿಯ ರಕ್ಷಣೆ; ವಿಧಿ 5 ಮತ್ತು 6 ಹಾಗೂ ಪಂಚಾಯತ್ (ಶೆಡ್ಯೂಲ್ಡ್ ಪ್ರದೇಶಗಳಿಗೆ ವಿಸ್ತರಣೆ) ಕಾಯಿದೆ 199_ (ಕಇಖಂ)ರ ರಕ್ಷಣೆ.

(iii) **ಅಲ್ಪಸಂಖ್ಯಾತರು :** ಅಲ್ಪಸಂಖ್ಯಾತರ ವಿರುದ್ಧದ ದ್ವೇಷ ಅಪರಾಧಗಳಿಗೆ ಕಠಿಣ ಶಿಕ್ಷೆ; ಮುಸ್ಲಿಂ ಸಮುದಾಯಕ್ಕೆ ಶಿಕ್ಷಣ, ಉದ್ಯೋಗ, ಆರೋಗ್ಯ ರಕ್ಷಣೆ ಹಾಗೂ ಸಾಮಾಜಿಕ ಕಲ್ಯಾಣಗಳಿಗೆ ವಿಶೇಷ ಕ್ರಮಗಳು.

(iv) **ವಿಶೇಷ ಚೇತನರು:** ಸಮನಾದ ಅವಕಾಶಗಳು ಮತ್ತು ಸಮಾನ ಸ್ಪರ್ಧೆಯ ಅವಕಾಶ; ಸಾರ್ವಜನಿಕ ಸ್ಥಳಗಳು, ಸಾರಿಗೆ, ಸಂಪರ್ಕ, ಮನರಂಜನೆಗೆ ಮುಕ್ತ ಅವಕಾಶ.

(v) **ಯುವ ಜನಾಂಗ ಹಾಗೂ ಮಕ್ಕಳ ಹಕ್ಕುಗಳು:** ಸಂವಿಧಾನದಲ್ಲಿ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡುವುದು; ಯುವ ಜನಾಂಗದ ಸರ್ವಾಂಗೀಣ ಬೆಳವಣಿಗೆಗಾಗಿ ಕ್ರೀಡೆ, ಸಾಂಸ್ಕೃತಿಕ ಮತ್ತು ಕುಶಲ ತರಬೇತಿ ಪಡೆಯಲು ಅವಕಾಶ; ಎಲ್ಲಾ ವಿಧದ ಮಕ್ಕಳ ದುಡಿಮೆಯ ನಿಷೇಧ.

**9. ಶಿಕ್ಷಣ, ಆರೋಗ್ಯ ಮತ್ತು ಪರಿಸರ:**

(i) ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ವಿಸ್ತರಣೆ ಮತ್ತು ಎಲ್ಲರಿಗೂ ಶಿಕ್ಷಣ ದೊರೆಯುವಂತಾಗಲು ಗುಣಮಟ್ಟ ಹೆಚ್ಚಿಸುವುದು; ಶಿಕ್ಷಣಕ್ಕಾಗಿ ಜಿ.ಡಿ.ಪಿ.ಯ ಶೇ.6ರಷ್ಟನ್ನು ವೆಚ್ಚ ಮಾಡುವುದು; ಧರ್ಮ ನಿರಪೇಕ್ಷತೆ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಲು ಪಠ್ಯದಲ್ಲಿ ಸೂಕ್ತ ಬದಲಾವಣೆ; ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಫೀಸು ಮತ್ತು ಪಠ್ಯವನ್ನು ನಿಯಂತ್ರಿಸುವುದು.

(ii) ಉಚಿತ ಆರೋಗ್ಯ ರಕ್ಷಣೆ ನೀಡಲು ಕೇಂದ್ರ ಮತ್ತು ರಾಜ್ಯಗಳ ಪ್ರಾಯೋಜಿತ ರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ಮಾಣ; ಇದಕ್ಕಾಗಿ ಆರೋಗ್ಯಕ್ಕಾಗಿ ವ್ಯಯಿಸುವ ವೆಚ್ಚವನ್ನು ಜಿ.ಡಿ.ಪಿ.ಯ ಶೇ.6ಕ್ಕಾದರೂ ಕನಿಷ್ಟ ಹೆಚ್ಚಿಸುವುದು; ಖಾಸಗಿ ಆರೋಗ್ಯ ರಕ್ಷಣಾ ಸಂಸ್ಥೆಗಳ ನಿಯಂತ್ರಣ, ಅಗತ್ಯ ಔಷಧಿಗಳ ದರ ಇಳಿಸುವುದು.

(iii) ಉತ್ಪಾದನಾ ಮತ್ತು ಬಳಕೆಯ ಎಲ್ಲಾ ರಂಗಗಳಲ್ಲಿ ಸೂಕ್ತ ಕ್ರಮಗಳ ಮೂಲಕ ಹಸಿರು ಮನೆ ಅನಿಲಗಳ ಸೂಸುವಿಕೆ ಮತ್ತು ಶಕ್ತಿ ಸಂಪನ್ಮೂಲ ಕ್ಷಮತೆಯನ್ನು ನಿಯಂತ್ರಿಸುವುದು; ನವೀಕರಿಸಬಹುದಾದ ಶಕ್ತಿ ಸಂಪನ್ಮೂಲವನ್ನು ಉತ್ತೇಜಿಸುವುದು; ಶಕ್ತಿ ಸಂಪನ್ಮೂಲ ಅಸಮಾನತೆಯನ್ನು ಕಡಿಮೆ ಮಾಡುವುದು; ನದಿ ಮತ್ತು ಇತರ ನೀರಿನ ಒರತೆಗಳ ಮಲಿನವನ್ನು ನಿಯಂತ್ರಿಸುವುದು.

**10. ಸಂಸ್ಕೃತಿ ಮತ್ತು ಮಾಧ್ಯಮ:**

ಪ್ರತಿಗಾಮಿ ಕೋಮುವಾದ ಮತ್ತು ಗೊಡ್ಡು ಸಂಪ್ರದಾಯಗಳನ್ನು ಎದುರಿಸಲು ಧರ್ಮ ನಿರಪೇಕ್ಷ ಹಾಗೂ ಸಮ್ಮಿಳಿತ ಸಂಸ್ಕೃತಿಯನ್ನು ಬೆಳೆಸುವುದು, ಜಾನಪದ ಕಲೆ ಮತ್ತು ಸಂಪ್ರದಾಯಗಳನ್ನು ಕಾಪಾಡುವುದು; ಹಾಗೂ ಎಲ್ಲಾ ರಾಷ್ಟ್ರೀಯ ಭಾಷೆಗಳಿಗೆ ಸಮಾನ ಸ್ಥಾನಮಾನ.

ಸಾರ್ವಜನಿಕ ಪ್ರಸಾರ ಸೇವೆಯನ್ನು ಬಲಪಡಿಸುವುದು; ಬಹು ಮಾಧ್ಯಮಗಳ ಒಡೆತನವನ್ನು ನಿಷೇಧಿಸುವುದು; ಮಾಧ್ಯಮಗಳಿಗೆ ಸ್ವತಂತ್ರ ನಿಯಂತ್ರಣ ಪ್ರಾಧಿಕಾರ.

**11. ವಿದೇಶಾಂಗ ನೀತಿ :** ಅಮೇರಿಕಾದೊಡನಿನ ತಂತ್ರಾತ್ಮಕ ಒಡಂಬಡಿಕೆಯನ್ನು ಬದಲಿಸುವುದು; ವಸಾಹತುಶಾಹಿ ವಿರೋಧಿ ಮತ್ತು ಸ್ವತಂತ್ರ ವಿದೇಶಾಂಗ ನೀತಿ.

**ರಾಜಕೀಯ ನಿಲುವು:**

2.115 1. ಮೋದಿ ಸರಕಾರದ ಸುಮಾರು ನಾಲ್ಕು ವರ್ಷಗಳ ಆಳ್ವಿಕೆಯ ಅನುಭವದ ಹಿನ್ನೆಲೆಯಲ್ಲಿ ಹಿಂದುತ್ವ ಕೋಮುವಾದಿ ಪಡೆಗಳನ್ನು ಏಕಾಂಗಿಯಾಗಿಸಲು ಮತ್ತು ಜನ–ವಿರೋಧಿ ಆರ್ಥಿಕ ಧೋರಣೆಗಳನ್ನು ಹಿಮ್ಮೆಟ್ಟಿಸಲು ಬಿಜೆಪಿಯನ್ನು ಸೋಲಿಸುವುದು ಅತ್ಯಗತ್ಯ.

2. ಆದ್ದರಿಂದ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸಿ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸುವುದು ಮುಖ್ಯ ಕರ್ತವ್ಯ ವಾಗುತ್ತದೆ. ಆದರೆ ಇದನ್ನು ಕಾಂಗ್ರೆಸ್ ಪಕ್ಷದೊಂದಿಗೆ ಒಂದು ಹೊಂದಿಕೆ ಅಥವ ಚುನಾವಣಾ ಮೈತ್ರಿಯಿಲ್ಲದೆ ಮಾಡಬೇಕಾಗಿದೆ.

3. ಪಕ್ಷ ಕೇಂದ್ರದಲ್ಲಿನ ಬಿಜೆಪಿ ಸರಕಾರ ಮತ್ತು ಪ್ರಾದೇಶಿಕ ಪಕ್ಷಗಳು ನಡೆಸುವ ರಾಜ್ಯಸರಕಾರಗಳು ಸೇರಿದಂತೆ ವಿವಿಧ ರಾಜ್ಯ ಸರಕಾರಗಳು ಅನುಸರಿಸುತ್ತಿರುವ ನವ–ಉದಾರವಾದಿ ಧೋರಣೆಗಳ ವಿರುದ್ಧ ಹೋರಾಡುತ್ತದೆ. ಜನಗಳ ಜೀವನಾಧಾರಗಳ ಪ್ರಶ್ನೆಗಳ ಮೇಲೆ ಮತ್ತು ಆರ್ಥಿಕ ಧೋರಣೆಗಳ ಪ್ರಹಾರಗಳ ವಿರುದ್ಧ ಕಾರ್ಯಾಚರಣೆಗಳನ್ನು ಬೆಳೆಸಲು ಶ್ರಮಿಸುತ್ತದೆ.

4. ಎಲ್ಲ ಹಂತಗಳಲ್ಲಿ ಸಾಮೂಹಿಕ ಚಳುವಳಿಗಳಿಗೆ ಮತ್ತು ಐಕ್ಯ ಹೋರಾಟಗಳಿಗೆ ಜಂಟಿ ವೇದಿಕೆಗಳನ್ನು ಕಟ್ಟಬೇಕು. ಜನ–ವಿರೋಧಿ ಧೋರಣೆಗಳ ವಿರುದ್ಧ ಪ್ರತಿರೋಧವನ್ನು ತೀವ್ರಗೊಳಿಸಬೇಕು. ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಐಕ್ಯ ಕಾರ್ಯಾಚರಣೆಗಳು ಬಂಡವಾಳಶಾಹಿ ಪಕ್ಷಗಳನ್ನು ಹಿಂಬಾಲಿಸುವ ಜನಸಮೂಹಗಳನ್ನು ಸೆಳೆದುಕೊಳ್ಳಲು ಪ್ರಯತ್ನಿಸಬೇಕು.

5. ಸರಕಾರದ ಒಳಗೂ ಮತ್ತು ಹೊರಗೂ ಇರುವ ಹಿಂದುತ್ವ ಶಕ್ತಿಗಳು ಗಂಭೀರ ಬೆದರಿಕೆಯನ್ನು ಒಡ್ಡಿರುವ ಸಂದರ್ಭದಲ್ಲಿ ಎಲ್ಲ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಸಾಧ್ಯವಾದಷ್ಟು ವಿಶಾಲವಾದ ವೇದಿಕೆಗಳನ್ನು ಕಟ್ಟುವುದು ಅಗತ್ಯವಾಗಿದೆ. ಬುಡಮಟ್ಟದಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಜನಗಳ ಐಕ್ಯತೆಯನ್ನು ಕಟ್ಟಲು ಒತ್ತು

ನೀಡಬೇಕು. ಇವನ್ನು ರಾಜಕೀಯ ಅಥವ ಚುನಾವಣಾ ಮೈತ್ರಿಗಳಾಗಿ ಕಾಣಬಾರದು. ಇದೇ ರೀತಿಯಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಸರ್ವಾಧಿಕಾರಶಾಹಿ ದಾಳಿಗಳ ವಿರುದ್ಧ ವಿಶಾಲ ಐಕ್ಯತೆಯನ್ನು ಬೆಸೆಯಬೇಕು.

6. ಪಕ್ಷದ ಸ್ವತಂತ್ರ ಶಕ್ತಿಯನ್ನು ಬೆಳೆಸಲು ಮತ್ತು ಕಟ್ಟಲು ಪಕ್ಷವು ಆದ್ಯತೆಯನ್ನು ಕೊಡುತ್ತದೆ. ಅದು ಎಡ ಐಕ್ಯತೆಯನ್ನು ವಿಶಾಲಗೊಳಿಸಲು ಮತ್ತು ಬಲಪಡಿಸಲು ಕೆಲಸ ಮಾಡುತ್ತದೆ.

7. ಐಕ್ಯ ಹೋರಾಟಗಳು ಮತ್ತು ಜಂಟಿ ಚಳುವಳಿಗಳ ಮೂಲಕ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಂದು ಮೂರ್ತ ಕಾರ್ಯಕ್ರಮದ ಮೇಲೆ ಒಟ್ಟಿಗೆ ತರಬೇಕು. ಇದರ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ರಂಗ ಮೂಡಿ ಬರಬೇಕು. ರಾಜ್ಯಗಳಲ್ಲಿ ಒಂದು ಮೂರ್ತ ಕಾರ್ಯಕ್ರಮದ ಸುತ್ತ ಒಂದು ವೇದಿಕೆಯನ್ನು ರಚಿಸಲು ವಿವಿಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಬೇಕು. ರಾಷ್ಟ್ರೀಯ ಮಟ್ಟದಲ್ಲಿ, ನಮ್ಮ ಪ್ರಚಾರಾಂದೋಲನಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಮುಂದಿಡಬೇಕು ಹಾಗು ಎಡ ಮತ್ತು ಪ್ರಜಾಪ್ರಭುತ್ವವ ರಂಗದಲ್ಲಿ ಒಂದು ಸ್ಥಾನ ಪಡೆಯಬಹುದಾದ ಶಕ್ತಿಗಳನ್ನೆಲ್ಲ ಅಣಿನೆರೆಸಬೇಕು.

8. ಪಕ್ಷದ ಮೇಲೆ ಹೇಳಿದ ರಾಜಕೀಯ ನಿಲುವಿನ ಆಧಾರದಲ್ಲಿ ಬಿಜೆಪಿ–ವಿರೋಧಿ ಮತಗಳು ಗರಿಷ್ಠ ಪ್ರಮಾಣದಲ್ಲಿ ಬರಲು ಸೂಕ್ತವಾದ ಚುನಾವಣಾ ತಂತ್ರಗಳನ್ನು ಅಂಗೀಕರಿಸಬೇಕು.

**ಇಂದಿನ ಸಂದರ್ಭದಲ್ಲಿ ಕರ್ತವ್ಯಗಳು:**

2.116 1. ಮೋದಿ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು. ನವ–ಉದಾರವಾದಿ ಧೋರಣೆಗಳ ದಾಳಿಗಳಿಗೆ ಮತ್ತು ಶೋಷಣೆಗೆ ಒಳಗಾಗಿರುವ ಎಲ್ಲ ದುಡಿಯುವ ಜನವಿಭಾಗಗಳನ್ನು ಅಣಿನೆರೆಸಬೇಕು ಮತ್ತು ಉದ್ಯೋಗಗಳು, ಭೂಮಿ, ಕೂಲಿಗಳು ಮತ್ತು ಜೀವನಾಧಾರಗಳಿಗಾಗಿ ಹೋರಾಡಲು ಸಂಘಟಿಸಬೇಕು. ಬೆಳೆದು ಬರುವ ಎಲ್ಲ ಸ್ವಯಂಸ್ಫೂರ್ತ ಹೋರಾಟಗಳಲ್ಲಿ ಪಕ್ಷ ಮಧ್ಯಪ್ರವೇಶಿಸಿ ಅವನ್ನು ಮುಂದಕ್ಕೆ ಒಯ್ಯಬೇಕು.

2. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಹಿಂದುತ್ವ ಕೋಮುವಾದದ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕು. ಈ ಹೋರಾಟವನ್ನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸೈದ್ಧಾಂತಿಕ ವಲಯಗಳಲ್ಲಿ ನಡೆಸಬೇಕಾಗಿದೆ. ಕೋಮುವಾದಿ ಶಕ್ತಿಗಳ ಚಟುವಟಿಕೆಗಳನ್ನು ಎದುರಿಸಲು ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳ ಒಂದು ವಿಶಾಲ ವೇದಿಕೆಯನ್ನು ಬೆಸೆಯಬೇಕು.

3. ಪಕ್ಷ ಸಾಮಾಜಿಕವಾಗಿ ದಮನಕ್ಕೆ ಒಳಗಾಗಿರುವ ವಿಭಾಗಗಳ ಹಿತಾಸಕ್ತಿಗಳನ್ನು ಪ್ರತಿಪಾದಿಸುವ ಪ್ರಯತ್ನಗಳನ್ನು ಹೆಚ್ಚಿಸಬೇಕು. ಪಕ್ಷ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸಬೇಕು ಮತ್ತು ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರವನ್ನು ಎದುರಿಸಬೇಕು. ಎಡ ಮತ್ತು ದಲಿತ ಐಕ್ಯ ವೇದಿಕೆಗಳನ್ನು ಮುಂದಕ್ಕೆ ಒಯ್ಯಬೇಕು. ಪಕ್ಷ ಎಲ್ಲ ವಲಯಗಳಲ್ಲಿ ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸಬೇಕು. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ವಿಶಾಲ ಐಕ್ಯತೆಯನ್ನು ಬೆಸೆಯಬೇಕು.

4. ಪಕ್ಷ ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಯಲ್ಲಿ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳೊಂದಿಗೆ ವ್ಯೂಹಾತ್ಮಕ ಮೈತ್ರಿಯಿಂದ ದೇಶದಲ್ಲಿ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಪ್ರಭಾವದ ವಿರುದ್ಧ ಜನಗಳನ್ನು ಅಣಿನೆರೆಸುವ ಪ್ರಚಾರಾಂದೋಲನಗಳನ್ನು ವಿಸ್ತರಿಸಬೇಕು.

5. ಪಕ್ಷ ಹೆಚ್ಚುತ್ತಿರುವ ಸರ್ವಾಧಿಕಾರಶಾಹಿಯನ್ನು ಎದುರಿಸಲು ಸಾಧ್ಯವಾದಷ್ಟು ಶಕ್ತಿಗಳನ್ನು ಅಣಿನೆರೆಸಬೇಕು. ಪ್ರಜಾಪ್ರಭುತ್ವ, ಕಲಾತ್ಮಕ ಸ್ವಾತಂತ್ರ್ಯ ಮತ್ತು ಶೈಕ್ಷಣಿಕ ಸ್ವಾಯತ್ತತೆಯ ಮೇಲೆ ಪ್ರಹಾರಗಳ ವಿರುದ್ಧ ಒಂದು ವಿಶಾಲ ಸ್ವರೂಪದ ಅಣಿನೆರಿಕೆ ಆಗಬೇಕು.

6. ಪಕ್ಷ ತನ್ನ ಸ್ವತಂತ್ರ ಪಾತ್ರವನ್ನು ಬಲಪಡಿಸಲು ಮತ್ತು ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಕಟ್ಟುವ ಮೂಲಕ ತನ್ನ ಪ್ರಭಾವ ಮತ್ತು ಸಾಮೂಹಿಕ ನೆಲೆಯನ್ನು ವಿಸ್ತರಿಸಲು ಆದ್ಯತೆ ನೀಡಬೇಕು. ಪಕ್ಷ ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿಗಳು ಮತ್ತು ಪಕ್ಷ ಹಾಗೂ ಎಡರಂಗದ ಮೇಲೆ ಹಿಂಸಾಚಾರದ ವಿರುದ್ಧ ಹೋರಾಟಕ್ಕೆ ವಿಶೇಷ ಗಮನ ನೀಡಬೇಕು. ತ್ರಿಪುರ ಮತ್ತು ಕೇರಳದ ಎಡ ನೇತೃತ್ವದ ಸರಕಾರಗಳ ರಕ್ಷಣೆ ಒಂದು ಮಹತ್ವದ ಕಾರ್ಯಭಾರ.

7. ಎಡ ಐಕ್ಯತೆಯನ್ನು ಈಗಿರುವ ಕೊರತೆಗಳನ್ನು ನೀಗಿಸಿಕೊಂಡು ಬಲಪಡಿಸಬೇಕು, ಅದಕ್ಕಾಗಿ ಒಂದು ಎಡ ವೇದಿಕೆಯ ಆಧಾರದಲ್ಲಿ ಜಂಟಿ ಕಾರ್ಯಾಚರಣೆಗಳು ಮತ್ತು ಪ್ರಚಾರಾಂದೋಲನಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಇದು ಇತರ ಪ್ರಜಾಪ್ರಭುತ್ವವಾದಿ ಸಂಘಟನೆಗಳನ್ನು ಮತ್ತು ಶಕ್ತಿಗಳನ್ನು ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಕಾರ್ಯಕ್ರಮದತ್ತ ಸೆಳೆಯಲು ಆಧಾರವಾಗಬೇಕು. ಇಂತಹ ಒಂದು ಕಾರ್ಯಕ್ರಮದ ಸುತ್ತ ಚಳುವಳಿಗಳು ಮತ್ತು ಹೋರಾಟಗಳ ಮೂಲಕ ಒಂದು ನಿಜವಾದ ಪರ್ಯಾಯ–ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯ ಮೂಡಿ ಬರುತ್ತದೆ.

**ಬಲಿಷ್ಠ ಕಮ್ಯುನಿಸ್ಟ್ ಪಕ್ಷ ಕಟ್ಟಿ**

2.117 ಈ ಪರ್ಯಾಯವನ್ನು ಸಾಧಿಸಲು, ದೇಶದಾದ್ಯಂತ ಒಂದು ಬಲಿಷ್ಠ ಕಮ್ಯುನಿಸ್ಟ್ ಪಕ್ಷ ಕಟ್ಟುವುದು ಅತ್ಯಗತ್ಯವಾಗಿದೆ. ಇದೊಂದು ಮಾರ್ಕ್ಸ್‌ವಾದ ಲೆನಿನ್‌ವಾದದ ಆಧಾರದಲ್ಲಿ ಇರಬೇಕಾದ ಪಕ್ಷವಾಗಿರಬೇಕಾಗುತ್ತದೆ ಮತ್ತು ಪ್ರಜಾಸತ್ತಾತ್ಮಕ

ಕೇಂದ್ರವಾದದ ತತ್ವದಲ್ಲಿ ಸಂಘಟಿತವಾಗಿರಬೇಕು, ದೇಶದಾದ್ಯಂತ ಸಾಮೂಹಿಕ ನೆಲೆ ಹೊಂದಿರುವ ಒಂದು ಬಲಿಷ್ಠ ಕಮ್ಯುನಿಸ್ಟ್ ಪಕ್ಷವಾಗಲು, ನಾವು ಕೊಲ್ಕತ್ತಾ ಪ್ಲೀನಂ ಮುಂದಿಟ್ಟ ಸಂಘಟನಾತ್ಮಕ ಜವಾಬ್ದಾರಿಗಳನ್ನು ಕೆಳಕಾಣಿಸಿದ ಅಂಶಗಳನ್ನು ಕೇಂದ್ರೀಕರಿಸಿಕೊಂಡು ಜಾರಿ ಮಾಡಬೇಕು.

1. ಪಕ್ಷದ ಪ್ರಭಾವವನ್ನು ವಿಸ್ತಾರಗೊಳಿಸಲು ಮತ್ತು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಲು ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳ ಮೇಲೆ ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ರೂಪಿಸಬೇಕು.

2. ಒಂದು **ಜನಸಮೂಹದ** ನಿಲುವನ್ನು ಹೊಂದಬೇಕು ಮತ್ತು ಜನರೊಡನೆ ಜೀವಂತ ಸಂಪರ್ಕ ಹೊಂದಿರಬೇಕು.

3. ಉತ್ಕೃಷ್ಟ ಗುಣಮಟ್ಟದ ಸದಸ್ಯತ್ವದೊಡನೆ ಒಂದು ಕ್ರಾಂತಿಕಾರಿ ಪಕ್ಷ ಕಟ್ಟಲು ಸಂಘಟನೆಯನ್ನು ಚಲನಶೀಲಗೊಳಿಸಬೇಕು.

4. ಪಕ್ಷಕ್ಕೆ ಯುವ ಜನಾಂಗವನ್ನು ಸೆಳೆಯಲು, ವಿಶೇಷ ಪ್ರಯತ್ನಗಳನ್ನು ಕೈಗೊಳ್ಳಬೇಕು.

5. ಕೋಮುವಾದ, ನವ–ಉದಾರವಾದ ಮತ್ತು ಪ್ರತಿಗಾಮಿ ಸಿದ್ಧಾಂತಗಳ ವಿರುದ್ಧ ಒಂದು ಸೈದ್ಧಾಂತಿಕ ಸಂಘರ್ಷ ಹೂಡಬೇಕು.

**2.118 ನಾವು**

ಅಧಿಕಾರಶಾಹಿ ಧೋರಣೆಯ, ಕೋಮುವಾದಿ ಬಿ.ಜೆ.ಪಿ. ಸರ್ಕಾರವನ್ನು ಸೋಲಿಸಲು ಹೋರಾಟ ಮಾಡೋಣ!

ಪ್ರಜಾಪ್ರಭುತ್ವ, ಧರ್ಮ ನಿರಪೇಕ್ಷತೆ ಮತ್ತು ಸಮಾಜವಾದಕ್ಕಾಗಿ ಹೋರಾಟವನ್ನು ಮುಂದೊಯ್ಯಲು ಒಂದು ಬಲಿಷ್ಠ ಸಿ.ಪಿ.ಐ(ಎಂ.) ಕಟ್ಟೋಣ!

ಒಂದು ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯದ ನಿರ್ಮಾಣಕ್ಕಾಗಿ ಒಂದು ಬಲಿಷ್ಠ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಕಟ್ಟೋಣ.

***

## ಕರಡು ರಾಜಕೀಯ ನಿರ್ಣಯಕ್ಕೆ
## ತಿದ್ದುಪಡಿಗಳನ್ನು ಕಳುಹಿಸುವ ವಿಧಾನ

ಕರಡು ರಾಜಕೀಯ ನಿರ್ಣಯಕ್ಕೆ ತಿದ್ದುಪಡಿಗಳನ್ನು ಕಳುಹಿಸಲು ಕೆಳಕಾಣಿಸಿದ ಕ್ರಮಗಳನ್ನು ಅನುಸರಿಸಬೇಕು.

1. ಎಲ್ಲಾ ತಿದ್ದುಪಡಿಗಳು ಪ್ಯಾರಾ ಸಂಖ್ಯೆ/ಲೈನ್ ಸಂಖ್ಯೆಯನ್ನು ಉಲ್ಲೇಖಿಸಬೇಕು.

2. ಸಂಬಂಧಪಟ್ಟ ಸಂಗಾತಿಯ ಹೆಸರು ಮತ್ತು ಘಟಕ/ತಿದ್ದುಪಡಿ ಕಳುಹಿಸುವ ಘಟಕದ ಹೆಸರು ಸಹ ನಮೂದಾಗಬೇಕು.

3. ಎಲ್ಲಾ ತಿದ್ದುಪಡಿಗಳು ಮಾರ್ಚ್ 20, 2018ರೊಳಗೆ ತಲುಪಬೇಕು.

4. ತಿದ್ದುಪಡಿಗಳನ್ನು ಅಂಚೆ/ಕೊರಿಯರ್ ಮೂಲಕ ಕಳುಹಿಸುವುದಾದಲ್ಲಿ, ಕೆಳಕಾಣಿಸಿದ ವಿಳಾಸಕ್ಕೆ ಕಳುಹಿಸಬೇಕು.

   Communist Party of India (Marxist)
   Central Committee, A.K. Gopalan Bhavan
   27–29 Bhai Vir Singh Marg, New Delhi – 110 001

5. ಕವರ್ ಮೇಲೆ 'Amendments to the Draft Political Resolution' ಎಂದು ನಮೂದಿಸಬೇಕು.

6. ಫ್ಯಾಕ್ಸ್ ಸಂದೇಶಗಳು ಮುದುರಿ ಹೋಗುವ ಸಾಧ್ಯತೆ ಇರುವುದರಿಂದ ಫ್ಯಾಕ್ಸ್ ಮೂಲಕ ಸಂಗಾತಿಗಳು ಕಳುಹಿಸದಿರುವುದು ಸೂಕ್ತ.

7. ಇ–ಮೇಲ್ ಮೂಲಕ ತಿದ್ದುಪಡಿ ಕಳುಹಿಸುವವರು ಅದನ್ನು ಟೆಕ್ಸ್ಟ್ ಅಥವಾ ವರ್ಡ್ ಫೈಲ್ ಆಗಿಯೇ ಕಳುಹಿಸಬೇಕು. ಇಂಗ್ಲೀಷ್ ಭಾಷೆ ಹೊರತುಪಡಿಸಿ ಬೇರೆ ಭಾಷೆಗಳಲ್ಲಿ ಕಳುಹಿಸುವವರು ಪಿ.ಡಿ.ಎಫ್. ಫೈಲ್ ಕಳುಹಿಸಬೇಕು.

8. "Amendments to the Draft Political Resolution" ಎಂದು ಇ–ಮೇಲ್ ಕಳುಹಿಸುವಾಗ "ವಿಷಯ"ದ ಮುಂದೆ ನಮೂದಿಸಬೇಕು. ಇ–ಮೇಲ್ ಕಳುಹಿಸುವ ಐ.ಡಿ. pol@cpim.org.

ಕನ್ನಡದಲ್ಲಿ ಕಳಿಸುವವರು ಈ ಕೆಳಗಿನ ವಿಳಾಸಕ್ಕೆ ಕಳಿಸಬಹುದು. ಕವರಿನ ಮೇಲೆ "ಕರಡು ರಾಜಕೀಯ ವರದಿಗೆ ತಿದ್ದುಪಡಿಗಳು' ಎಂದು ನಮೂದಿಸಿ:

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ
ಇಎಂಎಸ್ ಭವನ, ನಂ. 37/ಎ, 8ನೇ ಅಡ್ಡ ರಸ್ತೆ,
ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560086
ಇ–ಮೇಲ್: cpimkar@gmail.com

9. ಕೆಳಕಾಣಿಸಿದ ಸ್ವರೂಪದಲ್ಲಿ ತಿದ್ದುಪಡಿಗಳನ್ನು ಕಳುಹಿಸಿದರೆ ಅನುಕೂಲವಾಗುತ್ತದೆ.

| ಕ್ರಮಸಂಖ್ಯೆ | ಪ್ಯಾರಾಸಂಖ್ಯೆ | ಲೈನ್ ಸಂಖ್ಯೆ | ತಿದ್ದುಪಡಿ | ಸೂಚಿಸಿದವರು |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |